ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 6 ಶುಕ್ರವಾರ 2023

ಸಂಪುಟ: 44 | ಸಂಚಿಕೆ: 171 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಪ್ರವಾಸೋದ್ಯಮ ಇಲಾಖೆಯಿಂದ ದಸರಾ ವಿಶೇಷ ಟೂರ್ ಪ್ಯಾಕೇಜ್ ಪ್ರಕಟ

ಅಂಬಾರಿ ಬಸ್ಸಿನ ಅಪ್ಪರ್ ಡೆಕ್ಕರ್‌ನಲ್ಲಿ ದಸರಾ ದೀಪಾಲಂಕಾರ ವೀಕ್ಷಿಸಲು ಒಬ್ಬರಿಗೆ 500 ರೂ. ಲೋಯರ್ ಡೆಕ್ಕರ್‌ಗೆ 250 ರೂ. ದರ ನಿಗದಿ


ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಡಬಲ್ ಡೆಕ್ಕರ್ ಬಸ್


ದಸರಾ ದೀಪಾಲಂಕಾರ

■ ಎಸ್.ಟಿ.ರವಿಕುಮಾರ್

ಮೈಸೂರು, ಅ.5–ವಿಶ್ವ ಪ್ರಸಿದ್ಧ ಮೈಸೂರು ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ನಗರಿ ಮೈಸೂರು ಮತ್ತು ಸುತ್ತಮುತ್ತಲಿನ ಪ್ರವಾಸಿ ತಾಣಗಳನ್ನು ವೀಕ್ಷಿಸಲು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ನಿಗಮ (ಕೆಎಸ್‌ಟಿಡಿಸಿ)ವು ದಸರಾ ವಿಶೇಷ ಟೂರ್ ಪ್ಯಾಕೇಜ್ ಘೋಷಿಸಿದೆ.

ಅದೇ ರೀತಿ ಮೈಸೂರು ನಗರದಲ್ಲಿ ದಸರಾ ದೀಪಾಲಂಕಾರ ವೀಕ್ಷಿಸಲು ಡಬಲ್ ಡೆಕ್ಕರ್ ಬಸ್ಸಿನ ಅಪ್ಪರ್ ಡೆಕ್ಕರ್‌ಗೆ ಒಬ್ಬರಿಗೆ 500 ರೂ. ಹಾಗೂ ಲೋಯರ್ ಡೆಕ್ಕರ್‌ಗೆ 250 ರೂ. ದರ ನಿಗದಿಗೊಳಿಸಿರುವ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು, ಪ್ರವಾಸಿಗರಿಗೆ ಅನುಕೂಲವಾಗುವಂತೆ ಸರ್ವ ರೀತಿಯ ಸೌಲಭ್ಯ ಒದಗಿಸಲು ಮುಂದಾಗಿದೆ.

ದಸರಾ ಮಹೋತ್ಸವದ ಉದ್ಘಾಟನೆ ದಿನದಂದೇ ವಿದ್ಯುತ್ ದೀಪಾಲಂಕಾರ ಆರಂಭವಾಗಲಿದ್ದು, ಅಂದಿನಿಂದ ಅಂಬಾರಿ ಡಬಲ್ ಡೆಕ್ಕರ್ ಬಸ್ಸಿನ ಪರಿಷ್ಕೃತ ದರವು ಜಾರಿಗೆ ಬರಲಿದೆ. ಅದರಂತೆ ಸಂಜೆ ವೇಳೆ ಮಾತ್ರ ಲೋಯರ್ ಡೆಕ್ಕರ್‌ನಲ್ಲಿ ಪ್ರಯಾಣಿಸಲು 250 ರೂ. ಹಾಗೂ ಅಪ್ಪರ್ ಡೆಕ್ಕರ್‌ಗೆ 500 ರೂ. ಪಾವತಿಸಿ ಮೈಸೂರಿನ ಜೆಎಲ್‌ಬಿ ರಸ್ತೆಯ ಮಯೂರ ಹೊಯ್ಸಳ ಹೋಟೆಲ್ ಆವರಣದ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಕಚೇರಿಯಲ್ಲಿ ಟಿಕೆಟ್ ಖರೀದಿಸಬಹುದು. ಹಾಗೆಯೇ ನಿಗಮದ ವೆಬ್‌ಸೈಟ್ www.kstdc.coನಲ್ಲಿ ಆನ್‌ಲೈನ್ ಮೂಲಕವೂ ಮುಂಗಡ ಟಿಕೆಟ್‌ಗಳನ್ನು ಕಾಯ್ದಿರಿಸಬಹುದು ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕ ಜಿ.ಜಗದೀಶ್ ಅವರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಸಂಜೆ 6.30 ಗಂಟೆ, 8 ಗಂಟೆ ಮತ್ತು 9.30 ಗಂಟೆಗೆ ಮಯೂರ ಹೊಯ್ಸಳ ಹೋಟೆಲ್‌ನಿಂದ ಹೊರಡಲಿರುವ ಅಂಬಾರಿ ಡಬಲ್ ಡೆಕ್ಕರ್ ಬಸ್ಸು, ಹಳೇ ಡಿಸಿ ಕಚೇರಿ ಕಟ್ಟಡ, ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನ, ಓರಿಯೆಂಟಲ್ ಸೆಂಟ್ರಲ್ ಲೈಬ್ರರಿ, ಕೃಷ್ಣರಾಜ ಬುಲೇವಾರ್ಡ್ ರಸ್ತೆ, ರಾಮಸ್ವಾಮಿ ಸರ್ಕಲ್, ಚಾಮರಾಜ ಜೋಡಿ ರಸ್ತೆ, ಸರ್ಕಾರಿ ಸಂಸ್ಕೃತ ಪಾಠಶಾಲೆ ಸರ್ಕಲ್, ಅರಮನೆ ದಕ್ಷಿಣ ದ್ವಾರ, ಜಯಮಾರ್ತಾಂಡ ಗೇಟ್, ಹಾರ್ಡಿಂಜ್ ಸರ್ಕಲ್, ಕೆ.ಆರ್.ಸರ್ಕಲ್, ಸಯ್ಯಾಜಿರಾವ್ ರಸ್ತೆ ಸರ್ಕಾರಿ ಆಯುರ್ವೇದ ಕಾಲೇಜು ಸರ್ಕಲ್, ರೈಲ್ವೇ ನಿಲ್ದಾಣ ಸರ್ಕಲ್ ಮಾರ್ಗವಾಗಿ ತೆರಳಿ ಮಯೂರ ಹೊಯ್ಸಳ ಹೋಟೆಲ್ ತಲುಪಲಿದೆ.

ಈ ಮಾರ್ಗದಲ್ಲಿ 1 ಗಂಟೆ ಕಾಲ ಅಂಬಾರಿಯಲ್ಲಿ ಪ್ರಯಾಣಿಸಿ ಪಾರಂಪರಿಕ ಕಟ್ಟಡಗಳು, ಪ್ರಮುಖ ರಸ್ತೆ, ಸರ್ಕಲ್‌ಗಳು ಹಾಗೂ ಅರಮನೆಗೆ ಮಾಡಲಾದ ವಿದ್ಯುತ್ ದೀಪಾಲಂಕಾರ ವೀಕ್ಷಿಸಿ ಪ್ರವಾಸಿಗರು ಸಾಂಸ್ಕೃತಿಕ ನಗರಿಯ ಸೌಂದರ್ಯವನ್ನು ಕಣ್ತುಂಬಿಕೊಳ್ಳಬಹುದಾಗಿದೆ. ಪ್ರಯಾಣ ಪ್ರಾರಂಭವಾಗುವ 30 ನಿಮಿಷ ಮೊದಲೇ ಟಿಕೆಟ್ ಖರೀದಿಸಿದ ಪ್ರಯಾಣಿಕರು ಸ್ಥಳದಲ್ಲಿ ಹಾಜರಿರಬೇಕು. 5 ವರ್ಷ ಮೇಲ್ಪಟ್ಟ ಮಕ್ಕಳಿಗೆ ಪೂರ್ಣ ಟಿಕೆಟ್ ದರ ಪಾವತಿಸಬೇಕು. ಸಂಚಾರ ದಟ್ಟಣೆಯಿಂದಾಗಿ ಟ್ರಿಪ್‌ಗಳ ಅವಧಿಯಲ್ಲಿ ತುಸು ಬದಲಾವಣೆಯಾದಲ್ಲಿ ಸಹಕರಿಸಬೇಕು ಎಂದು ಜಗದೀಶ್ ತಿಳಿಸಿದ್ದಾರೆ.

ದಸರಾ ವಿಶೇಷ ಟೂರ್ ಪ್ಯಾಕೇಜ್: 2023ರ ದಸರಾ ಮಹೋತ್ಸವದ ಅಂಗವಾಗಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ನಿಗಮವು ವಿಶೇಷ ಟೂರ್ ಪ್ಯಾಕೇಜ್‌ಗಳನ್ನು ಘೋಷಿಸಿದ್ದು, ಆಕರ್ಷಕ ದರದಲ್ಲಿ ● 9ನೇ ಪುಟಕ್ಕೆ

ಮುಂಗಾರು ಬೆಳೆಗೆ ನೀರಿನ ಕೊರತೆ ಇಲ್ಲ



ಬೆಂಗಳೂರು, ಅ.5(ಕೆಎಂಶಿ)– ಜಲಾನಯನ ಭಾಗದಲ್ಲಿ ಮುಂಗಾರು ಹಂಗಾಮಿನ ಬೆಳೆಗೆ ನೀರಿನ ಕೊರತೆ ಇಲ್ಲ ಎಂದು ಜಲ ಸಂಪನ್ಮೂಲ ಖಾತೆ ಹೊಂದಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಕಾವೇರಿ ಜಲಾನಯನ ಪ್ರದೇಶದಲ್ಲಿ ಮುಂದಿನ ಬೇಸಿಗೆವರೆಗೂ ಕುಡಿಯುವ ನೀರು ಮತ್ತು ಬೆಳೆಗೆ 106 ಟಿಎಂಸಿ ಅಡಿ ನೀರಿನ ಅಗತ್ಯವಿದೆ. ಆದರೆ, ನಮ್ಮಲ್ಲಿ 56 ಟಿಎಂಸಿ ನೀರು ಮಾತ್ರ ಸಂಗ್ರಹವಾಗಿದೆ. ಕಳೆದ ಮೂರು–ನಾಲ್ಕು ದಿನಗಳಿಂದ ಜಲಾನಯನ ಭಾಗದಲ್ಲಿ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ನಮ್ಮ ಜಲಾಶಯಗಳಿಗೆ 15 ಸಾವಿರ ಕ್ಯುಸೆಕ್ ನೀರು ಹರಿದು ಬರುತ್ತಿರುವ ಹಿನ್ನೆಲೆಯಲ್ಲಿ ಕೆಆರ್‌ಎಸ್ ಜಲಾಶಯವು ಎರಡನೇ ಬಾರಿಗೆ ನೂರು ಅಡಿ ದಾಟಿದೆ ಎಂದರು. ನಮ್ಮ ರಾಜ್ಯದ ರೈತರ ಹಾಲಿ ಬೆಳೆಗಳನ್ನು ನಾವು ರಕ್ಷಣೆ ಮಾಡಿದ್ದೇವೆ. ಇದು ಸಮಾಧಾನದ ವಿಷಯ. ರಾಜ್ಯದಲ್ಲಿ ಬರ ಘೋಷಣೆಯಾಗಿದ್ದು, ಮುಂದೆ ಯಾವುದೇ ಬೆಳೆ ಹಾಕಬಾರದು ಎಂದು ರೈತರಿಗೆ ಸೂಚಿಸಿದ್ದೇವೆ. ಮುಂದಿನ ತಿಂಗಳು ಮತ್ತೆ ಮಳೆ ಬೀಳುವ ಸಾಧ್ಯತೆ ಇದೆ. ಈ ವರ್ಷ ಸಂಕಷ್ಟದ ವರ್ಷ. ನಾವು ದಿನನಿತ್ಯ ಮಳೆಗಾಗಿ ಪ್ರಾರ್ಥನೆ ಮಾಡುತ್ತಲೇ ಇದ್ದೇವೆ. ● 4ನೇ ಪುಟಕ್ಕೆ

ಕೇಂದ್ರ ಬರ ಅಧ್ಯಯನ ತಂಡದಿಂದ ಮುಖ್ಯಮಂತ್ರಿ ಭೇಟಿ

ರಾಜ್ಯದ ಬರ ಪರಿಸ್ಥಿತಿಯ ವಾಸ್ತವಾಂಶ ವಿವರಿಸಿ, ರೈತರ ಹಿತ ಕಾಪಾಡುವಂತೆ ಸಿದ್ದರಾಮಯ್ಯ ಸಲಹೆ


ಬೆಂಗಳೂರು, ಅ.5– ಮುಖ್ಯಮಂತ್ರಿ ಸಿದ್ದರಾಮಯ್ಯ ಗುರುವಾರ ತಮ್ಮನ್ನು ಭೇಟಿಯಾದ ಕೇಂದ್ರ ಬರ ಅಧ್ಯಯನ ತಂಡದೊಂದಿಗೆ ಮಾತುಕತೆ ನಡೆಸಿ, ರಾಜ್ಯದ ರೈತರ ರಕ್ಷಣೆಗೆ ಪೂರಕವಾಗಿ ಕ್ರಮ ಕೈಗೊಳ್ಳುವಂತೆ ಸಲಹೆ ನೀಡಿದರು.

ಕೇಂದ್ರ ತಂಡಕ್ಕೆ ರಾಜ್ಯದ ಬರ ಪರಿಸ್ಥಿತಿಯನ್ನು ವಿವರಿಸಿದ ಮುಖ್ಯಮಂತ್ರಿಗಳು, ಕೇಂದ್ರದ ಮಾರ್ಗಸೂಚಿಯನ್ವಯ 195 ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ. ಇನ್ನೂ 32 ತಾಲೂಕುಗಳು ನಿಗದಿತ ಮಾನದಂಡಗಳನ್ನು ಪೂರೈಸುತ್ತಿವೆ. ರಾಜ್ಯದಲ್ಲಿ ನೈಋತ್ಯ ಮುಂಗಾರು ವಿಳಂಬದಿಂದ ಹಾಗೂ ಮಳೆಯ ಕೊರತೆಯಿಂದ ರೈತರು ಸಂಕಷ್ಟಕ್ಕೀಡಾಗಿದ್ದಾರೆ. ● 9ನೇ ಪುಟಕ್ಕೆ



ನ್ಯಾ॥ ಕೆ.ಭಕ್ತವತ್ಸಲ ಆಯೋಗದ ವರದಿ ಅಂಗೀಕರಿಸಲು ಸಂಪುಟ ಸಭೆ ನಿರ್ಧಾರ

ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಶೇ.33ರಷ್ಟು ಮೀಸಲಾತಿ



ಬೆಂಗಳೂರು, ಅ.5(ಕೆಎಂಶಿ) ಹಿಂದುಳಿದ ವರ್ಗಗಳಿಗೆ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸೂಕ್ತ ರಾಜಕೀಯ ಪ್ರಾತಿನಿಧ್ಯ ಕಲ್ಪಿಸಲು ರಚಿಸಿರುವ ಡಾ.ಜಸ್ಟೀಸ್ ಕೆ. ಭಕ್ತವತ್ಸಲ ಅವರ ನೇತೃತ್ವದ ಆಯೋಗವು ಸಲ್ಲಿಸಿರುವ ವರದಿಯಲ್ಲಿನ ಶಿಫಾರಸ್ಸುಗಳನ್ನು ಅಂಗೀಕರಿಸಲು ಇಂದು ನಡೆದ ಸಚಿವ ಸಂಪುಟ ನಿರ್ಧರಿಸಿದೆ.

ಮುಂಬರುವ ಸ್ಥಳೀಯ ನಗರ ಮತ್ತು ಗ್ರಾಮೀಣ ಸಂಸ್ಥೆಗಳಲ್ಲಿ ಶೇ.33ರಷ್ಟು ಸ್ಥಾನಗಳನ್ನು ಹಿಂದುಳಿದ ವರ್ಗಗಳಿಗೆ ಮೀಸಲಾತಿ ಒದಗಿಸಲು ಮತ್ತು ಒಟ್ಟಾರೆ ಮೀಸಲಾತಿಯು ಶೇ.50ರಷ್ಟು ಮೀರದಿರುವಂತೆ ಹಿಂದುಳಿದ ವರ್ಗಗಳ ರಾಜಕೀಯ ಮೀಸಲಾತಿಯನ್ನು ಮುಂದುವರೆಸಿಕೊಂಡು ಹೋಗುವಂತೆ ಜಸ್ಟೀಸ್ ಕೆ. ಭಕ್ತವತ್ಸಲ ಸಮಿತಿ ಶಿಫಾರಸ್ಸು ಮಾಡಿದೆ ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ್ ತಿಳಿಸಿದರು. ಸಂಪುಟ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಮೇಯರ್ ಮತ್ತು ಉಪ ಮೇಯರ್ ಸ್ಥಾನಗಳಲ್ಲಿ ಹಿಂದುಳಿದ ವರ್ಗದವರಿಗೆ ಮೀಸಲಿರಿಸಲು ಎಲ್ಲಾ ನಗರ ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣಾ ಶಾಖೆಗಳನ್ನು ಡಿ.ಪಿ.ಎ.ಆರ್ ಹತೋಟಿಗೆ ನೀಡಲು ಭಕ್ತವತ್ಸಲ ಸಮಿತಿ ಮಾಡಿದ ಶಿಫಾರಸ್ಸನ್ನು ಸಚಿವ ಸಂಪುಟ ಒಪ್ಪಿದೆ. ಬಿ.ಬಿ.ಎಂ.ಪಿ ಕಾಯ್ದೆ 2020ರಂದು ಮೇಯರ್ ಮತ್ತು ಉಪಮೇಯರ್ ಸ್ಥಾನಗಳಿಗೆ 30 ತಿಂಗಳು ನಿಗದಿಪಡಿಸುವ ವ್ಯವಸ್ಥೆಯನ್ನು ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ವಿಸ್ತರಿಸಲು ಕರ್ನಾಟಕ ಮುನ್ಸಿಪಲ್ ಕಾಯ್ದೆಯ ಕಲಂ 10ಕ್ಕೆ ತಿದ್ದುಪಡಿ ತರುವುದು. ● 9ನೇ ಪುಟಕ್ಕೆ

ಮೇಯರ್, ಉಪ ಮೇಯರ್ ಅವಧಿ 30 ತಿಂಗಳಿಗೆ ವಿಸ್ತರಿಸಲು ಕಾಯ್ದೆಗೆ ತಿದ್ದುಪಡಿ

KSOUನಲ್ಲಿ 300 ಕೋಟಿ ಅಕ್ರಮ: ಸಿಬಿಐನಿಂದ FIR ದಾಖಲು

ನವದೆಹಲಿ, ಅ.5– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ 300 ಕೋಟಿ ರೂ. ಮೌಲ್ಯದ ಅಕ್ರಮ ಆರೋಪ ಸಂಬಂಧ ಅಪರಿಚಿತ ಅಧಿಕಾರಿಗಳ ವಿರುದ್ಧ ಸಿಬಿಐ ಎಫ್‌ಐಆರ್ ದಾಖಲಿಸಿದೆ. ದೇಶಾದ್ಯಂತ ಹಾಗೂ ವಿದೇಶದಲ್ಲೂ ಮೈಸೂರು ಮೂಲದ ಕೆಎಸ್‌ಒಯು ನಿಯಮ ಉಲ್ಲಂಘಿಸಿ ಸಹಯೋಗ ಸಂಸ್ಥೆಗಳನ್ನು ತೆರೆದಿತ್ತು ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಈ ಸಹಯೋಗ ಸಂಸ್ಥೆಗಳು ಪ್ರವೇಶ ಶುಲ್ಕ, ಪರೀಕ್ಷಾ ಶುಲ್ಕ ಸೇರಿ ವಿದ್ಯಾರ್ಥಿಗಳಿಂದ ಸಂಗ್ರಹಿಸಿದ್ದ ಶುಲ್ಕವನ್ನು ಕೆಎಸ್‌ಒಯುಗೆ ಭರಿಸುತ್ತಿದ್ದವು. ಆದರೆ ಆಡಿಟ್‌ನಲ್ಲಿ, 2013–14 ಮತ್ತು 2014–15 ಹಣಕಾಸು ವರ್ಷದಲ್ಲಿ ಈ ಸಹಯೋಗ ಸಂಸ್ಥೆಗಳು ಭರಿಸಿರುವ 50 ಕೋಟಿ ರೂ. ನಾಪತ್ತೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅದೇ ರೀತಿ ಆಡಿಟ್‌ನಲ್ಲಿ, 2009–10ರಿಂದ 2012–2013 ಹಣಕಾಸು ವರ್ಷಗಳಲ್ಲಿ ವಿದ್ಯಾರ್ಥಿಗಳಿಂದ ಸಂಗ್ರಹಿಸಿದ್ದ ಶುಲ್ಕದಲ್ಲಿ 250 ಕೋಟಿ ರೂ. ಕಾಣೆಯಾಗಿದೆ. ಇದಕ್ಕೆ ಸೂಕ್ತ ದಾಖಲೆಗಳಿಲ್ಲ. ● 4ನೇ ಪುಟಕ್ಕೆ

ಕೇಂದ್ರ ವಸತಿ ಹಾಗೂ ನಗರಾಭಿವೃದ್ಧಿ ಸಚಿವಾಲಯದ ಕರ್ಮಯೋಗಿಯಡಿ

ಮೈಸೂರು ಮಹಾನಗರ ಪಾಲಿಕೆ ಪ್ರಶಸ್ತಿಗೆ ಭಾಜನ

ಮೈಸೂರು,ಅ.5(ಪಿಎಂ)–ಕೇಂದ್ರ ವಸತಿ ಹಾಗೂ ನಗರಾಭಿವೃದ್ಧಿ ಸಚಿವಾಲಯದ ವತಿಯಿಂದ ಐಜಿಓಟಿ ಕರ್ಮಯೋಗಿ ಯೋಜನೆಯಡಿ ಮೈಸೂರು ಮಹಾನಗರ ಪಾಲಿಕೆ ಪ್ರಶಸ್ತಿಗೆ ಭಾಜನವಾಗಿದೆ. ಪಾಲಿಕೆಗಳು ಹಾಗೂ ನಗರಸಭೆ ಸೇರಿದಂತೆ ದೇಶದ 4,950 ಸ್ಥಳೀಯ ಸಂಸ್ಥೆಗಳ ಪೈಕಿ ಕೇವಲ 6 ಸಂಸ್ಥೆಗಳು ಪ್ರಶಸ್ತಿಗೆ ಆಯ್ಕೆಯಾಗಿವೆ. ಈ ಪೈಕಿ ಮೈಸೂರು ಮಹಾನಗರ ಪಾಲಿಕೆಯು ತೃತೀಯ ಸ್ಥಾನ ಪಡೆದುಕೊಂಡಿದೆ.

ನವದೆಹಲಿಯ ಪ್ರಗತಿ ಮೈದಾನದ ಭಾರತ್ ಮಂಡಪಂನಲ್ಲಿ ಗುರುವಾರ ಹಮ್ಮಿಕೊಂಡಿದ್ದ ನಗರ ಸ್ಥಳೀಯ ಸಂಸ್ಥೆಗಳ ಸಾಮರ್ಥ್ಯ ನಿರ್ಮಾಣ ಕುರಿತ ರಾಷ್ಟ್ರೀಯ ಕಾರ್ಯಾಗಾರದಲ್ಲಿ ಕೇಂದ್ರದ ವಸತಿ ಹಾಗೂ ನಗರಾಭಿವೃದ್ಧಿ ಸಚಿವ ಹರ್ದೀಪ್‌ಸಿಂಗ್ ಪುರಿ ಅವರಿಂದ ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಶರೀಫ್ ● 4ನೇ ಪುಟಕ್ಕೆ



ನವದೆಹಲಿಯಲ್ಲಿ ಗುರುವಾರ ಹಮ್ಮಿಕೊಂಡಿದ್ದ ಕಾರ್ಯಾಗಾರದಲ್ಲಿ ಕೇಂದ್ರದ ವಸತಿ ಹಾಗೂ ನಗರಾಭಿವೃದ್ಧಿ ಸಚಿವ ಹರ್ದೀಪ್‌ಸಿಂಗ್ ಪುರಿ ಅವರಿಂದ ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಶರೀಫ್ ಪ್ರಶಸ್ತಿಯನ್ನು ಸ್ವೀಕರಿಸಿದರು.

ಮೈಸೂರಿನ ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಬಿಲ್ಡಿಂಗ್ ನೆಲಸಮಗೊಳಿಸಿ, ಹೊಸ ಕಟ್ಟಡ ನಿರ್ಮಿಸಿ



ಸರ್ಕಾರಕ್ಕೆ ಮಾಜಿ ಮೇಯರ್‌ಗಳ ಸಂಘ ಆಗ್ರಹ

● ಎರಡೂ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿವೆ ● ನವೀಕರಣ ಕಾರ್ಯ ಅಸಾಧ್ಯ ● ಪಾರಂಪರಿಕ ಶೈಲಿಯಲ್ಲಿ ಹೊಸ ಕಟ್ಟಡ ನಿರ್ಮಿಸಿ ● ಶೀಘ್ರದಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಬಳಿ ನಿಯೋಗ






ಮೈಸೂರು, ಅ.5(ಬಿಎಲ್‌ಯು)– ಮೈಸೂರಿನ ದೇವರಾಜ ಮಾರುಕಟ್ಟೆ ಹಾಗೂ ಲ್ಯಾನ್ಸ್ ಡೌನ್ ಬಿಲ್ಡಿಂಗ್ ಅನ್ನು ನೆಲಸಮಗೊಳಿಸಿ ಪಾರಂಪರಿಕ ಶೈಲಿ ಯಲ್ಲಿ ಹೊಸ ಕಟ್ಟಡ ನಿರ್ಮಾಣ ಮಾಡ ಬೇಕು ಎಂದು ಮೈಸೂರಿನ ಮಾಜಿ ಮೇಯರ್‌ಗಳ ಸಂಘ ಸರ್ಕಾರವನ್ನು ಆಗ್ರಹಿಸಿದೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಇಂದು ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮಾಜಿ ಮೇಯರ್‌ಗಳಾದ ಬಿ.ಕೆ.ಪ್ರಕಾಶ್ ಹಾಗೂ ನರಸಿಂಹ ಐಯ್ಯಂಗಾರ್, ಸೂಕ್ತ ನಿರ್ವಹಣೆ ಮಾಡದ ಕಾರಣ ಎರಡೂ ಕಟ್ಟಡಗಳು ಇಷ್ಟು ವರ್ಷ ಬಾಳಿಕೆ ಬಂದಿರುವುದೇ ಹೆಚ್ಚು ಎಂದು ಅಭಿಪ್ರಾಯಪಟ್ಟರು. ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಅಂತೂ ಸಂಪೂರ್ಣವಾಗಿ ಶಿಥಿಲಾವಸ್ಥೆಯಲ್ಲಿದೆ. ಆದರೂ ನವೀಕರಣ ಕಾರ್ಯ ಕೈಗೊಳ್ಳಲಾಯಿತು. ಆದರೆ ನವೀಕರಣ ಮಾಡುವುದು ನುರಿತವರಿಂದಲೂ ಸಾಧ್ಯವಾಗಲಿಲ್ಲ. ಈ ಕಾರಣದಿಂದ ಮತ್ತೆ ನವೀಕರಣ ಮಾಡುವ ಕಾರ್ಯಕ್ಕೆ ಮುಂದಾಗಬಾರದು. ಅದರ ಬದಲು ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಅನ್ನು ಪೂರ್ಣವಾಗಿ ನೆಲಸಮಗೊಳಿಸಬೇಕು. ತರುವಾಯ ಅದೇ ಹಳೆ ಕಟ್ಟಡದ ಪಾರಂಪರಿಕ ಶೈಲಿ ಮಾದರಿಯಲ್ಲಿ ಹೊಸ ಕಟ್ಟಡ ನಿರ್ಮಾಣ ಮಾಡಬೇಕು ಎಂದು ನರಸಿಂಹ ಐಯ್ಯಂಗಾರ್ ಸರ್ಕಾರವನ್ನು ಒತ್ತಾಯಿಸಿದರು. ಮೈಸೂರಿನ ದೇವರಾಜ ಮಾರುಕಟ್ಟೆ ಕೂಡ ಶಿಥಿಲಾವಸ್ಥೆಯಲ್ಲಿದೆ. ಬೆಂಕಿ ಅನಾಹುತ ಸೇರಿದಂತೆ ಒಂದೆರಡು ಅವಘಡಗಳು ಅಲ್ಲಿ ಸಂಭವಿಸಿವೆ. ಆ ವೇಳೆ ತಾತ್ಕಾಲಿಕವಾಗಿ ರಿಪೇರಿ ಮಾಡಲಾಗಿತ್ತು. ಆದರೆ ಈಗ ದೇವರಾಜ ಮಾರುಕಟ್ಟೆ ಕಟ್ಟಡ ತುಂಬಾ ದುರ್ಬಲವಾಗಿದೆ. ಆದ ಕಾರಣ ಇದನ್ನು ● 9ನೇ ಪುಟಕ್ಕೆ

ಮೈಸೂರಲ್ಲಿ ನಾಳೆ, ನಾಡಿದ್ದು ಬಸವ ಜಯಂತಿ





ಮೈಸೂರು,ಅ.5(ಜಿಎ)–ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ, ವೀರಶೈವ ಲಿಂಗಾಯತ ಸಂಘ–ಸಂಸ್ಥೆಗಳು ಮತ್ತು ಬಸವ ಬಳಗಗಳ ಒಕ್ಕೂಟದ ವತಿಯಿಂದ ಅ.7 ಮತ್ತು 8ರಂದು ಮೈಸೂರಿನಲ್ಲಿ ಬಸವ ಜಯಂತಿ ಏರ್ಪಡಿಸಲಾಗಿದೆ ಎಂದು ಕಾರ್ಯಕ್ರಮ ಸಮಿತಿ ಅಧ್ಯಕ್ಷ ಎಂ.ಚಂದ್ರಶೇಖರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅ.7ರಂದು ಬೆಳಗ್ಗೆ 8.30ಕ್ಕೆ ನಗರದ ಶ್ರೀಬಸವೇಶ್ವರ ಪುತ್ಥಳಿ ಮುಂಭಾಗ ಗಾವಡಗೆರೆಯ ಶ್ರೀಗುರುಲಿಂಗ ಜಂಗಮ ದೇವ ಮಠದ ನಟರಾಜ ಸ್ವಾಮೀಜಿ ಷಟ್ಸ್ಥಲ ಧ್ವಜಾರೋಹಣ ನೆರವೇರಿಸಲಿದ್ದಾರೆ. ನಂತರ ಬಸವೇಶ್ವರ ಪುತ್ಥಳಿ ಬಳಿಯೇ ಮೆರವಣಿಗೆಗೆ ಶಾಸಕ ಬಿ.ವೈ.ವಿಜಯೇಂದ್ರ ಯಡಿಯೂರಪ್ಪ ಚಾಲನೆ ನೀಡಲಿದ್ದಾರೆ. ಮೆರವಣಿಗೆ ನಂದಿಧ್ವಜದ ಪೂಜೆಯೊಂದಿಗೆ ಮಂಗಳವಾದ್ಯ, ವೀರಗಾಸೆ, ಸ್ತಬ್ಧಚಿತ್ರ, ಕಲಾ ತಂಡಗಳೊಂದಿಗೆ ನ್ಯೂ ಸಯ್ಯಾಜಿರಾವ್ ರಸ್ತೆ ಮೂಲಕ ಕೆ.ಆರ್.ವೃತ್ತ, ಡಿ.ದೇವರಾಜ ಅರಸು ರಸ್ತೆಯಿಂದ ಮೈಸೂರು–ಹುಣಸೂರು ರಸ್ತೆ ಮೂಲಕ ಸಾಗಿ ಕಲಾಮಂದಿರ ತಲುಪಲಿದೆ.

ಈ ಮೆರವಣಿಗೆಯಲ್ಲಿ ಮೇಯರ್ ಶಿವಕುಮಾರ್, ಜಿಲ್ಲಾಧಿಕಾರಿ ಕೆ.ವಿ.ರಾಜೇಂದ್ರ, ಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮನ್ ಷರೀಫ್, ಪೊಲೀಸ್ ಆಯುಕ್ತ ಬಿ.ರಮೇಶ್, ಕೆಎಸ್‌ಓಯು ಕುಲಪತಿ ಡಾ.ಶರಣಪ್ಪ ವಿ.ಹಲಸೆ, ಮಾಜಿ ಮೇಯರ್ ಸುನಂದಾ ಪಾಲನೇತ್ರ, ಕಾರ್ಪೊರೇಟರ್ ಬಿ.ವಿ.ಮಂಜುನಾಥ್ ಮತ್ತು ತಹಸೀಲ್ದಾರ್ ಸಿ.ಗಿರೀಶ್ ಭಾಗವಹಿಸಲಿದ್ದಾರೆ ಎಂದರು.

ನಂತರ ಕಲಾಮಂದಿರಲ್ಲಿ ವೇದಿಕೆ ಕಾರ್ಯಕ್ರಮ ಆಯೋಜಿಸಿದ್ದು, ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಮುಖ್ಯಮಂತ್ರಿ ಸಿದ್ದ ರಾಮಯ್ಯ ಉದ್ಘಾಟಿಸಲಿದ್ದಾರೆ. ಅರಣ್ಯ ಸಚಿವ ಬಿ.ಈಶ್ವರ್ ಖಂಡ್ರೆ ಅಧ್ಯಕ್ಷತೆ ವಹಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ 'ಹನ್ನೆರಡನೇ ಶತಮಾನದ ಶರಣ ದಂಪತಿಗಳು', ಪಶುಸಂಗೋಪನ ಸಚಿವ ಕೆ.ವೆಂಕಟೇಶ್ 'ಬಸವಣ್ಣನವರ ಆಯ್ದ ನೂರೆಂಟು ವಚನಗಳು' ಕೃತಿ ಬಿಡುಗಡೆಗೊಳಿಸಲಿದ್ದಾರೆ. ಈ ವೇಳೆ ಸಚಿವರು ಮತ್ತು ಜಿಲ್ಲೆಯ ಶಾಸಕರು ಮತ್ತು ವಿಧಾನಪರಿಷತ್ ಸದಸ್ಯರು ಉಪಸ್ಥಿತರಿರಲಿದ್ದಾರೆ ಎಂದು ತಿಳಿಸಿದರು.

ನಂತರ ಮಧ್ಯಾಹ್ನ 2.30ಕ್ಕೆ 'ಸಮಾನತೆ: ಬಸವಣ್ಣನವರ ಸಮಾನತೆಯ ಆಶಯಗಳು' ವಿಷಯ ಕುರಿತು ವಿಚಾರಗೋಷ್ಠಿ ಏರ್ಪಡಿಸಿದ್ದು, ಕೇಂದ್ರ ಸಾಹಿತ್ಯ ಅಕಾಡೆಮಿ ಹಾಗೂ ಆಕಾಶವಾಣಿ ನಿವೃತ್ತ ನಿರ್ದೇಶಕ ಡಾ.ಬಸವರಾಜು ಸಾದರ ಸಮ ಸಮಾಜ ಕುರಿತು ಮಾತನಾಡಲಿದ್ದಾರೆ. ಲೇಖಕಿ ಪ್ರೊ.ಎನ್.ಕೆ.ಲೋಲಾಕ್ಷಿ ಸ್ತ್ರೀ ಸಮಾನತೆ ಕುರಿತು ಮತ್ತು ವಿಮರ್ಶಕ ಡಾ.ಹೆಚ್.ದಂಡಪ್ಪ ಕಾಯಕ ತತ್ವ ಕುರಿತು ವಿವರಿಸಲಿದ್ದು, ಕನ್ನಡ ಪ್ರಾಧಿಕಾರ ಮಾಜಿ ಅಧ್ಯಕ್ಷ ಪ್ರೊ.ಎಸ್.ಜಿ.ಸಿದ್ದರಾಮಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಜೆ 5 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಿದ್ದು, ವಿದುಷಿ ಶುಭರಾಘವೇಂದ್ರ ಮತ್ತು ತಂಡದಿಂದ ವಚನ ಗಾಯನ ನಡೆಸಿಕೊಡಲಿದ್ದಾರೆ. ಗಂಗೂಬಾಯಿ ಹಾನಗಲ್ ಪ್ರದರ್ಶನ ಕಲೆಗಳ ಸಂಗೀತ ವಿವಿ ಕುಲಪತಿ ಡಾ.ನಾಗೇಶ್ ವಿ.ಬೆಟ್ಟಕೋಟೆ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಚಲನಚಿತ್ರ ಕಲಾವಿದ ಕೆ.ವಿ.ನಾಗರಾಜಮೂರ್ತಿ ಭಾಗವಹಿಸಲಿದ್ದಾರೆ ಎಂದರು.

ಅ.8ರಂದು ಬೆಳಗ್ಗೆ 10 ಗಂಟೆಗೆ ಮಹಿಳಾ ಮತ್ತು ಮಕ್ಕಳ ಸಮಿತಿಯಿಂದ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಿದ್ದು, ವಿಶೇಷ ಆಹ್ವಾನಿತರಾಗಿ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಆಗಮಿಸಲಿದ್ದಾರೆ. ಕಾರ್ಯಕ್ರಮವನ್ನು ಮಹಿಳಾ ಮತ್ತು ಮಕ್ಕಳ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಯಾಗಿ ಸಂಸದೆ ಸುಮಲತಾ ಅಂಬರೀಶ್ ಉಪಸ್ಥಿತರಿರಲಿದ್ದಾರೆ. ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ನಿರ್ದೇಶಕಿ ವಿ.ಸುಮಂಗಲ ಅಧ್ಯಕ್ಷತೆ ವಹಿಸಲಿದ್ದಾರೆ.

ನಂತರ ಮಧ್ಯಾಹ್ನ 12 ಗಂಟೆಗೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕದ ವತಿಯಿಂದ ಎಸ್‌ಎಸ್‌ಎಲ್‌ಸಿ, ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಗುತ್ತದೆ. 2.30ಕ್ಕೆ ಚಿಂತನ ಗೋಷ್ಠಿಗಳು ನಡೆಯಲಿದ್ದು, ಚಿಂತಕ ಪ್ರೊ.ಎಂ.ಕೃಷ್ಣೇಗೌಡ ಶರಣರ ಕಾಯಕತತ್ವ, ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಡಾ.ಬಿ.ವಿ.ವಸಂತಕುಮಾರ್ ಶರಣರ ಜೀವನ ಮೌಲ್ಯಗಳು ಮತ್ತು ಕನ್ನಡ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ.ಎಂ.ಎನ್.ನಂದೀಶ್ ಹಂಚೆ ಶರಣರು ಕಟ್ಟ ಬಯಸಿದ ಸಮಾಜದ ಕುರಿತು ಮಾತನಾಡಲಿದ್ದಾರೆ. ಸಂಜೆ 4 ಗಂಟೆಗೆ ಜ್ಞಾನಯೋಗಿ ಸಿದ್ದೇಶ್ವರ ಸ್ವಾಮೀಜಿ ಕುರಿತು ಕೊಲ್ಹಾಪುರದ ಶ್ರೀಕನ್ನೇರಿ ಮಠದ ಕಾಡ ಸಿದ್ದೇಶ್ವರ ಸ್ವಾಮಿ ಸ್ಮರಿಸಲಿದ್ದಾರೆ ಎಂದರು.

ಸಂಜೆ4.30ಕ್ಕೆ ಸಮಾರೋಪ ಸಮಾರಂಭ ಏರ್ಪಡಿಸಿದ್ದು, ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ ಮತ್ತು ಶ್ರೀಕ್ಷೇತ್ರ ದೇವನೂರು ಮಠದ ಮಹಾಂತ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ಅಧ್ಯಕ್ಷ ಮತ್ತು ಶಾಸಕರೂ ಆದ ಡಾ.ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಕರ್ನಾಟಕ ಶರಣ ಕಥಾಮೃತ ಕೃತಿಯನ್ನು ಕುಂದೂರು ಮಠದ ಡಾ.ಶರತ್ ಚಂದ್ರಸ್ವಾಮಿ ಲೋಕಾರ್ಪಣೆಗೊಳಿಸುತ್ತಾರೆ. ಮಾಜಿ ಸಚಿವ ವಿ.ಸೋಮಣ್ಣ ಸಮಾರೋಪ ಭಾಷಣ ಮಾತನಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದರಾದ ವಿ.ಶ್ರೀನಿವಾಸ್‌ಪ್ರಸಾದ್, ಪ್ರತಾಪ್ ಸಿಂಹ ಆಗಮಿಸಲಿದ್ದಾರೆ. ಕಾರ್ಯಕ್ರಮದಲ್ಲಿ ನಟ ಡಾಲಿ ಧನಂಜಯ್ ಭಾಗವಹಿಸಲಿದ್ದಾರೆ. ಸಂಜೆ 6 ಗಂಟೆಗೆ ಡಾ.ಕೃಪಾಪಡ್ಕೆ ಮತ್ತು ತಂಡದವರಿಂದ ವಚನ ವೈಭವ ನೃತ್ಯ ರೂಪಕ ಏರ್ಪಡಿಸಲಾಗಿದೆ ಎಂದರು.

ಸಾಧನೆ ಮಾಡದ ಬಹಳಷ್ಟು ಅನರ್ಹರಿಗೆ ಪ್ರಶಸ್ತಿ ದೊರೆಯುತ್ತಿದೆ

ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಎಸ್.ಎನ್.ಹೆಗಡೆ ಅಸಮಾಧಾನ



ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ ರಜತ ವರ್ಷದ ಅಂಗವಾಗಿ ಹಲವು ಸಾಧಕರಿಗೆ ಸನ್ಮಾನಿಸಲಾಯಿತು.

ಮೈಸೂರು,ಅ.5(ಬಿಎಲ್‌ಯು)–ಯಾವುದೇ ಸಾಧನೆ ಮಾಡದ ಬಹಳಷ್ಟು ಅನರ್ಹರಿಗೆ ಇತ್ತೀಚೆಗೆ ಪ್ರಶಸ್ತಿಗಳು ಹೆಚ್ಚಾಗಿ ಸಿಗುತ್ತಿವೆ ಎಂದು ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಎಸ್.ಎನ್.ಹೆಗಡೆ ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ಕೃಷ್ಣಮೂರ್ತಿಪುರಂನ ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘವು ರಜತ ವರ್ಷದ ಅಂಗವಾಗಿ ಆಯೋಜಿಸಿದ್ದ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಏನೂ ಮಾಡದ, ಏನೂ ಗಳಿಸದ, ಹಣದ ದರ್ಪದಿಂದ ಸ್ಥಾನಮಾನ ಗಳಿಸಿದವರಿಗೆ ಇತ್ತೀಚೆಗೆ ಪ್ರಶಸ್ತಿ ದೊರೆಯುತ್ತಿದೆ ಎಂದರು.

ಕೆಲವರು ರಾಜಕೀಯ ಒತ್ತಡದಿಂದ ಕೂಡ ಪ್ರಶಸ್ತಿಗಳನ್ನು ಪಡೆಯುತ್ತಿದ್ದಾರೆ. ಇಂತವರಿಗೆ ಸನ್ಮಾನ ಮಾಡುವುದು ಸರಿಯಲ್ಲ. ಆದರೆ ಇತ್ತೀಚೆಗೆ ಇಂತಹ ಅವ್ಯವಸ್ಥೆ ಹೆಚ್ಚಾಗುತ್ತಿರುವುದು ಬೇಸರದ ಸಂಗತಿ ಎಂದರು.

ಬಹಳಷ್ಟು ಜನರು ಎಲೆಮರೆ ಕಾಯಿಯಂತೆ ತಮ್ಮಷ್ಟಕ್ಕೆ ತಾವು ಕೆಲಸ ಮಾಡುತ್ತಿದ್ದಾರೆ. ಅಂತಹ ಅರ್ಹ ಸಾಧಕರನ್ನು ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘ ಸನ್ಮಾನಿಸುತ್ತಿರುವುದು ಪ್ರಶಂಸನೀಯ ಎಂದರು.

ಹೋಟೆಲ್‌ಗಳನ್ನು ಅಂದ ಚೆಂದವಾಗಿ ನಿರ್ಮಾಣ ಮಾಡಿರುತ್ತಾರೆ. ಅಗತ್ಯ ಪೀಠೋಪಕರಣದ ಅಚ್ಚುಕಟ್ಟಾದ ವ್ಯವಸ್ಥೆ ಕೂಡ ಇರುತ್ತದೆ. ಆದರೆ ಶೌಚಾಲಯವೇ ಇರುವುದಿಲ್ಲ. ಆದ ಕಾರಣ ಹೋಟೆಲ್ ಮಾಲೀಕರು ಶೌಚಾಲಯ ನಿರ್ಮಾಣ ಮಾಡಬೇಕು. ಈ ಮೂಲಕ ಶುಚಿತ್ವಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.


ನಾನು 1997ರಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಕುಲಪತಿಯಾಗಿ ಬಂದಾಗ ಮಾನಸಗಂಗೋತ್ರಿಯ ಬಹಳಷ್ಟು ವಿಭಾಗಗಳಲ್ಲಿ ಶೌಚಾಲಯವೇ ಇರಲಿಲ್ಲ. ಕೆಲವು ಕಡೆ ಶೌಚಾಲಯ ಇದ್ದರೂ ಶುಚಿತ್ವ ಇರಲಿಲ್ಲ. ನಾನು ಕುಲಪತಿ ಆದ ನಂತರ ಶೌಚಾಲಯ ನಿರ್ಮಾಣಕ್ಕೆ ಹೆಚ್ಚು ಒತ್ತು ನೀಡಿದೆ ಎಂದು ಹೇಳಿದರು.

ವ್ಯವಹಾರದಲ್ಲಿ ಲಾಭ ಗಳಿಸುವುದು ಮೂಲ ಉದ್ದೇಶವಾಗಿರಬಾರದು. ತಮ್ಮ ವ್ಯವಹಾರ ಯಶಸ್ವಿಯಾಗಲು ಕಾರಣಕರ್ತರಾದ ನೌಕರರಿಗೆ ಬೋನಸ್ ಸೇರಿದಂತೆ ಅಗತ್ಯ ಸೌಲಭ್ಯ ನೀಡಬೇಕು ಎಂದು ಇದೇ ವೇಳೆ ಹೋಟೆಲ್ ಮಾಲೀಕರಿಗೆ ಕಿವಿಮಾತು ಹೇಳಿದರು.

ಸಹಕಾರ ಕ್ಷೇತ್ರದಿಂದ ಕೆ.ಜಿ.ಶಂಕರನಾರಾಯಣ ಶಾಸ್ತ್ರಿ, ಸಾಂಸ್ಕೃತಿಕ ಕ್ಷೇತ್ರದಿಂದ ಕೆ.ರಾಮಮೂರ್ತಿರಾವ್, ಮಾಧ್ಯಮ ಕ್ಷೇತ್ರದಿಂದ ಲೋಹಿತ್, ಸಮಾಜ ಸೇವಾ ಕ್ಷೇತ್ರದಿಂದ ಅಯೂಬ್ ಅಹ್ಮದ್ ಹಾಗೂ ಮಹದೇವು ಅವರನ್ನು ಈ ವೇಳೆ ಸನ್ಮಾನಿಸಲಾಯಿತು. ಮೇಲುಕೋಟೆಯ ವಂಗೀಪುರ ಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ವಾಸು, ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾರಾಯಣ ವಿ.ಹೆಗಡೆ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಹಾಗೂ ಮೈಸೂರು ಹೋಟೆಲ್ ಮಾಲೀಕರ ಧರ್ಮದತ್ತಿ ಅಧ್ಯಕ್ಷ ವಿ.ಎಸ್.ರವಿಶಾಸ್ತ್ರಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಚಾಮುಂಡಿಬೆಟ್ಟದಲ್ಲಿ ಬೈಕ್‌ಗೆ ಕಾರು ಡಿಕ್ಕಿ

ಮೈಸೂರು, ಅ.5– ಚಾಮುಂಡಿಬೆಟ್ಟದ ರಸ್ತೆಯಲ್ಲಿ ಕಾರೊಂದು ಬೈಕ್‌ಗೆ ಗುದ್ದಿದ ಬಳಿಕ ಚಾಲಕನ ನಿಯಂತ್ರಣ ಕಳೆದುಕೊಂಡು ಮಗಚಿ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿರುವ ಘಟನೆ ಗುರುವಾರ ರಾತ್ರಿ ಸಂಭವಿಸಿದೆ. ಚಾಮುಂಡಿಬೆಟ್ಟದಿಂದ ಮೈಸೂರು ಕಡೆಗೆ ಬರುತ್ತಿದ್ದ ಕಾರು, ರಾತ್ರಿ ಸುಮಾರು 8ಗಂಟೆ ಸಮಯದಲ್ಲಿ ದೇವಿಕೆರೆ ಬಳಿ ಎದುರಿನಿಂದ ಬಂದ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಇದರಿಂದ ಚಾಲಕನ ನಿಯಂತ್ರಣ ತಪ್ಪಿ, ಮಗುಚಿ ರಸ್ತೆಬದಿ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದೆ. ಘಟನೆಯಲ್ಲಿ ನಾಲ್ವರು ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ವಾಹನಗಳು ಜಖಂ ಆಗಿವೆ ಎಂದು ಸಿದ್ಧಾರ್ಥ ಸಂಚಾರ ಠಾಣೆ ಇನ್‌ಸ್ಪೆಕ್ಟರ್ ಯೋಗೀಶ್ ತಿಳಿಸಿದ್ದಾರೆ.



ಕಾವೇರಿ ಹೋರಾಟಕ್ಕೆ ಪುಣ್ಯಕೋಟಿ ಸೇವಾ ಟ್ರಸ್ಟ್ ಬೆಂಬಲ



ಮೈಸೂರು, ಅ.5(ಜಿಎ)–ತಮಿಳುನಾಡಿಗೆ ಕಾವೇರಿ ನೀರನ್ನು ಹರಿಸುತ್ತಿರುವುದನ್ನು ಖಂಡಿಸಿ, ಕಾವೇರಿ ಕ್ರಿಯಾ ಸಮಿತಿ ವತಿಯಿಂದ ನಗರದ ಪುರಭವನದ ಬಳಿ ನಡೆಸುತ್ತಿರುವ 6ನೇ ದಿನದ ಧರಣಿಗೆ ಪುಣ್ಯಕೋಟಿ ಸೇವಾ ಟ್ರಸ್ಟ್ ಬೆಂಬಲ ಸೂಚಿಸಿ ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ಟ್ರಸ್ಟ್‌ನ ಅಧ್ಯಕ್ಷ ಹನುಮಂತೇಶ್ ಮಾತನಾಡಿ, ಕಾವೇರಿ ವಿಚಾರವಾಗಿ ರಾಜ್ಯ ಸರ್ಕಾರ ಕೇಂದ್ರಕ್ಕೆ ನಿಯೋಗ ಕರೆದುಕೊಂಡು ಹೋಗಿ ಕಾವೇರಿ ಕಣಿವೆಯ ಭಾಗದಲ್ಲಿ ಇರುವ ವಸ್ತುಸ್ಥಿತಿಯ ಬಗ್ಗೆ ಮನವರಿಕೆ ಮಾಡಿಕೊಡಬೇಕು. ಈ ಕೆಲಸಕ್ಕೆ ರಾಜ್ಯದಿಂದ ಲೋಕಸಭೆಗೆ ಆಯ್ಕೆಗೊಂಡಿರುವ 28 ಸಂಸದರು ಸಾಥ್ ನೀಡಬೇಕು. ಕಾವೇರಿ ನೀರಾವರಿಗಾಗಿ ಒಂದು ಸಮಿತಿ ರಚಿಸಿ ಒಬ್ಬ ಸಚಿವರನ್ನು ನೇಮಿಸಬೇಕೆಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಸಮಿತಿಯ ಮೂಗೂರು ನಂಜುಂಡಸ್ವಾಮಿ, ಮೋಹನ್‌ಕುಮಾರ್‌ಗೌಡ, ಬಾಲಕೃಷ್ಣ, ಮೆಲ್ಲಹಳ್ಳಿ ಮಹದೇವಸ್ವಾಮಿ, ಪುಣ್ಯಕೋಟಿ ಸೇವಾ ಟ್ರಸ್ಟ್‌ನ ಭರತ್‌ರಾಜ್, ಸಂಪತ್‌ಕುಮಾರ್, ಆಶಾ, ಭರತ್, ಮಾಯಣ್ಣ, ರಮೇಶ್, ಶಿವೇಗೌಡ, ಮಲ್ಲೇಶ್, ಪುಷ್ಪವತಿ, ಶುಭಶ್ರೀ ಮತ್ತು ಮಂಜುಳಾ ಸೇರಿದಂತೆ ಮತ್ತಿತರರು ಭಾಗಿಯಾಗಿದ್ದರು.

ದೆಹಲಿ ಪತ್ರಕರ್ತರ ಬಂಧನ ಖಂಡಿಸಿ ಪ್ರತಿಭಟನೆ



ಮೈಸೂರು, ಅ.5(ಜಿಎ)–ದೆಹಲಿಯಲ್ಲಿ ಪತ್ರಕರ್ತರು, ಸಾಮಾಜಿಕ ಹಾಗೂ ವಿಜ್ಞಾನ ಚಳವಳಿ ಕಾರ್ಯಕರ್ತರ ಮೇಲಿನ ಪೊಲೀಸರ ದಾಳಿಯನ್ನು ಖಂಡಿಸಿ ಮೈಸೂರು ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಪ್ರಗತಿಪರ ಸಂಘಟನೆಗಳ ಒಕ್ಕೂಟ ಪ್ರತಿಭಟನೆ ನಡೆಸಿತು.

ಪ್ರಜಾಪ್ರಭುತ್ವದ ನೆಲೆ ಎಂದು ಬಣ್ಣಿಸಲ್ಪಡುತ್ತಿರುವ ಭಾರತದಲ್ಲಿ ಪ್ರಜಾಪ್ರಭುತ್ವದ ಕಗ್ಗೊಲೆ ನಡೆಯುತ್ತಿದ್ದು, ದೆಹಲಿಯಲ್ಲಿ ಹಲವು ಪತ್ರಕರ್ತರ ಮತ್ತು ಸಾಮಾಜಿಕ ಕಾರ್ಯಕರ್ತರ ಮನೆಗಳಿಗೆ, ದೆಹಲಿ ಪೊಲೀಸರು, ನುಗ್ಗಿ ಅವರ ವೈಯಕ್ತಿಕ ಲ್ಯಾಪ್‌ಟಾಪ್, ಮೊಬೈಲ್, ಹಾರ್ಡ್‌ಡಿಸ್ಕ್‌ಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ವರದಿಗಳಾಗಿವೆ. ಕೆಲವು ಪತ್ರಕರ್ತರನ್ನು ವಶಕ್ಕೆ ಪಡೆಯಲಾಗಿದೆ. ಸ್ವತಂತ್ರ ಸುದ್ದಿ ವಾಹಿನಿಯಾದ ನ್ಯೂಸ್ ಕ್ಲಿಕ್ ವಿರುದ್ಧ ಯು.ಎ.ಪಿ.ಎ ಅಡಿಯಲ್ಲಿ ಹೊಸ ಪಕರಣವನ್ನು ದಾಖಲಿಸಲಾಗಿದೆ. ಅವರ ಕಚೇರಿಗೆ ಬೀಗ ಹಾಕಲಾಗಿದೆ. ಹಿರಿಯ ಪತ್ರಕರ್ತ ಊರ್ಮಿಳೇಶ್‌ರವರನ್ನು ವಶಕ್ಕೆ ಪಡೆದುಕೊಂಡಿದ್ದು, ಇತರ ಪತ್ರಕರ್ತರಾದ ಪರಂಜಯ್ ಗುಹಾ ಠಾಕುರ್ತಾ, ಅಭಿಸಾರ್ ಶರ್ಮಾ, ಆನಂದ ಚಕ್ರವರ್ತಿ, ಭಾಷಾ ಸಿಂಗ್, ವ್ಯಂಗ್ಯ ಚಿತ್ರಕಾರ ಸಂಜಯ್ ರಾಜೇರಾ, ಸಾಮಾಜಿಕ ಹೋರಾಟಗಾರ, ಫಿಲ್ ಮೇಕರ್ ಮತ್ತು ಚರಿತ್ರೆಕಾರರೂ ಆದ ಸೋಹೈಲ್ ಹಷಿಯವರುಗಳು ದಾಳಿಗೆ ಗುರಿಯಾಗಿರುವುದು ಬೇಸರದ ಸಂಗತಿ ಎಂದು ವಿಷಾದಿಸಿದರು.

ಕರಾಳ ಯು.ಎ.ಪಿ.ಎ ಅಡಿಯಲ್ಲಿ ಪ್ರಕರಣವನ್ನು ದಾಖಲಿಸುವುದು ಇವು ಭಿನ್ನ ಅಭಿಪ್ರಾಯ ಧ್ವನಿ ಅಡಗಿಸುವ ಹುನ್ನಾರಲ್ಲದೇ ಮತ್ತೇನೂ ಅಲ್ಲ. ಇಂತಹವರ ಧ್ವನಿ ಅಡಗಿಸಲು ನಡೆಸಿರುವ ನಿರಂತರ ಪ್ರಯತ್ನವನ್ನು ನಾವು ವಿರೋಧಿಸುತ್ತೇವೆ. ದೇಶದ ಸಂವಿಧಾನ ನೀಡಿದ ಅಭಿವ್ಯಕ್ತಿ ಸ್ವಾತಂತ್ರ್ಯದ ಪರವಾಗಿ ಕೆಲಸ ಮಾಡುವವರನ್ನು ತಮ್ಮನ್ನು ವಿರೋಧಿಸುವವರನ್ನು ಕ್ರೂರವಾಗಿ ಬೇಟೆ ಯಾಡುವುದನ್ನು ಈ ಕೂಡಲೇ ನಿಲ್ಲಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಪ್ರಗತಿಪರ ಸಂಘಟನೆಗಳ ಒಕ್ಕೂಟದ ಪ್ರೊ.ಕಾಳಚನ್ನೇಗೌಡ, ಹೊರೆಯಾಲ ದೊರೆಸ್ವಾಮಿ, ಸೀಮಾ, ನಾ.ದಿವಾಕರ್, ರಂಗಕರ್ಮಿ ಬಸವಲಿಂಗಯ್ಯ ಮತ್ತಿತರರು ಪಾಲ್ಗೊಂಡಿದ್ದರು.

ಪ್ರಾಚ್ಯಾವಶೇಷಗಳ ಪತ್ತೆ ಮತ್ತು ಸಂರಕ್ಷಣೆ ಎಲ್ಲರ ಜವಾಬ್ದಾರಿ

ಸಂಘ-ಸಂಸ್ಥೆಗಳು ಪಾರಂಪರಿಕ ಸ್ಮಾರಕಗಳ ದತ್ತು ಪಡೆಯಬೇಕು: ಎ.ದೇವರಾಜು



ಮೈಸೂರು,ಅ.5(ಆರ್‌ಕೆ)–ರಾಜ್ಯದಲ್ಲಿರುವ ಪ್ರಾಚ್ಯಾವಶೇಷ (ಆಂಟಿಕ್ಯುಟೀಸ್)ಗಳನ್ನು ಪತ್ತೆ ಮಾಡಿ ಸಂರಕ್ಷಿಸುವುದು ಪ್ರತಿಯೊಬ್ಬ ನಾಗರಿಕರ ಜವಾಬ್ದಾರಿ ಎಂದು ಪಾರಂಪರಿಕ ಆಯುಕ್ತ ಎ.ದೇವರಾಜು ಇಂದಿಲ್ಲಿ ತಿಳಿಸಿದ್ದಾರೆ.

ಮೈಸೂರಿನ ಹೊರವಲಯದ ಸೈಲೆಂಟ್ ಶೋರ್ಸ್ ರೆಸಾರ್ಟ್‌ನಲ್ಲಿ ಸ್ಕಾಲ್ ಇಂಡಿಯಾ ಸಮ್ಮೇಳನದ ಅಂಗವಾಗಿ ಆಯೋಜಿಸಿದ್ದ 'ಪಾರಂಪರಿಕ ಸ್ವತ್ತುಗಳ ಪುನರುಜ್ಜೀವನದ ಪ್ರಾಮುಖ್ಯತೆ' ಕುರಿತ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡುತ್ತಿದ್ದ ಅವರು, ಪುರಾತತ್ವ, ಸಂಗ್ರಹಾಲಯಗಳು ಹಾಗೂ ಪರಂಪರೆ ಇಲಾಖೆ ವತಿಯಿಂದ ಆರಂಭಿಸಿರುವ ಪ್ರಾಚ್ಯಾವಶೇಷಗಳ ಸರ್ವೆ ಕಾರ್ಯದಲ್ಲಿ ಹಲವು ಅಪರೂಪದ ಪುರಾತನ ಐತಿಹಾಸಿಕ ಶಿಲಾ ಶಿಲ್ಪ, ಸ್ಮಾರಕಗಳು ಪತ್ತೆಯಾಗಿವೆ. ಅವುಗಳನ್ನು ಸಂರಕ್ಷಿಸಿ ಮುಂದಿನ ತಲೆಮಾರಿಗೆ ಪರಿಚಯಿಸುವುದು ಅತ್ಯವಶ್ಯ ಎಂದರು.

ಕಳೆದ ಮೂರು ವರ್ಷಗಳಲ್ಲಿ 38 ತಾಲೂಕುಗಳ 5,000 ಹಳ್ಳಿಗಳಲ್ಲಿ ಶೋಧ ನಡೆಸಲಾಗಿ, 20,000 ಸ್ಮಾರಕಗಳು ಪತ್ತೆಯಾಗಿವೆ. ಉಳಿದ 241 ತಾಲೂಕುಗಳಲ್ಲೂ ಶೋಧ ಕಾರ್ಯ ನಡೆಯಬೇಕು. ಸುಳಿವು ಸಿಕ್ಕಿದಲ್ಲಿ ಗ್ರಾಮಸ್ಥರು, ನಾಗರಿಕರು ಇಲಾಖೆಗೆ ಮಾಹಿತಿ ನೀಡಿ, ಅವುಗಳ ಸಂರಕ್ಷಣೆಗೆ ಸಹಕರಿಸಿದ್ದಲ್ಲಿ ಪ್ರಾಚ್ಯಾವಶೇಷಗಳನ್ನು ಹೊರ ತೆಗೆಯಬಹುದು ಎಂದು ಅವರು ನುಡಿದರು.

'ಸಂರಕ್ಷಣಾ' ಯೋಜನೆಯಡಿ ಇಲಾಖೆ ಕೈಗೊಂಡಿರುವ ಪ್ರಾಚ್ಯಾವಶೇಷ ಶೋಧ ಕಾರ್ಯದಲ್ಲಿ ಸಾರ್ವಜನಿಕರು, ಸಂಘ–ಸಂಸ್ಥೆಗಳು ಪಾಲ್ಗೊಳ್ಳಬೇಕು ಹಾಗೂ ಪಾರಂಪರಿಕ ಸ್ಮಾರಕಗಳನ್ನು ಸಂಘ–ಸಂಸ್ಥೆ, ಕೈಗಾರಿಕೆಗಳು ದತ್ತು ಪಡೆದು ಅಭಿವೃದ್ಧಿಪಡಿಸಿ ನಿರ್ವಹಣೆ ಮಾಡಿದಲ್ಲಿ, ಅವುಗಳನ್ನು ಉಳಿಸಬಹುದು ಎಂದು ಎ.ದೇವರಾಜು ತಿಳಿಸಿದರು.

ಪ್ರತಿಯೊಂದು ಸ್ಮಾರಕಗಳೂ ಸಹ ಪ್ರವಾಸಿ ಕೇಂದ್ರವಾದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಯಾಗುವುದಲ್ಲದೆ, ಉದ್ಯೋಗಾವಕಾಶ ಸೃಷ್ಟಿಯಾಗಿ ಉದ್ದಿಮೆಗಳಿಗೂ ಅನುಕೂಲವಾಗಲಿದೆ. ಈ ನಿಟ್ಟಿನಲ್ಲಿ ಸ್ಕಾಲ್ ಇಂಡಿಯಾ ಸಂಸ್ಥೆ ಪೂರಕವಾಗಿ ಸ್ಪಂದಿಸಬೇಕೆಂದು ತಿಳಿಸಿದರು.

ಇತಿಹಾಸ ತಜ್ಞ ಪ್ರೊ.ಎನ್.ಎಸ್.ರಂಗರಾಜು, ಅಂತಾರಾಷ್ಟ್ರೀಯ ಪ್ರವಾಸೋದ್ಯಮ ಸ್ಟೀಫನ್ ಬ್ರೂಸ್, ಡಾ.ಧರ್ಮಪ್ರಸಾದ್, ಬಿ.ಎಸ್.ಪ್ರಶಾಂತ್ ಸೇರಿದಂತೆ ಸ್ಕಾಲ್ ಇಂಡಿಯಾ ಪದಾಧಿಕಾರಿಗಳು ಚರ್ಚೆಯಲ್ಲಿ ಪಾಲ್ಗೊಂಡು ಪಾರಂಪರಿಕ ಸ್ವತ್ತುಗಳ ಪುನರುಜ್ಜೀವನ, ಸಂರಕ್ಷಣೆ ಬಗ್ಗೆ ಮಹತ್ವದ ಸಲಹೆಗಳನ್ನು ನೀಡಿದರು.

ನೀರಿನ ಮಟ್ಟ


ಕೆಆರ್‌ಎಸ್ ಅಣೆಕಟ್ಟು	ಕಬಿನಿ ಅಣೆಕಟ್ಟು	ಹಾರಂಗಿ ಅಣೆಕಟ್ಟು
ಗರಿಷ್ಠ ಮಟ್ಟ 124.80 ಅಡಿ	ಗರಿಷ್ಠ ಮಟ್ಟ 2,284.00 ಅಡಿ	ಗರಿಷ್ಠ ಮಟ್ಟ 2,859.00 ಅಡಿ
ಇಂದಿನ ಮಟ್ಟ 100.82 ಅಡಿ	ಇಂದಿನ ಮಟ್ಟ 2,276.28 ಅಡಿ	ಇಂದಿನ ಮಟ್ಟ 2,855.38 ಅಡಿ
ಹಿಂದಿನ ವರ್ಷದ ಮಟ್ಟ 123.56 ಅಡಿ	ಹಿಂದಿನ ವರ್ಷದ ಮಟ್ಟ 2,282.41 ಅಡಿ	ಹಿಂದಿನ ವರ್ಷದ ಮಟ್ಟ 2,854.67 ಅಡಿ
ನಿನ್ನೆಯ ಮಟ್ಟ 100.36 ಅಡಿ	ನಿನ್ನೆಯ ಮಟ್ಟ 2,276.06 ಅಡಿ	ನಿನ್ನೆಯ ಮಟ್ಟ 2,855.16 ಅಡಿ
ಇಂದಿನ ಒಳಹರಿವು 5,861 ಕ್ಯುಸೆಕ್	ಇಂದಿನ ಒಳಹರಿವು 2,479 ಕ್ಯುಸೆಕ್	ಇಂದಿನ ಒಳಹರಿವು 1,746 ಕ್ಯುಸೆಕ್
ಇಂದಿನ ಹೊರಹರಿವು 1,482 ಕ್ಯುಸೆಕ್	ಇಂದಿನ ಹೊರಹರಿವು 1,000 ಕ್ಯುಸೆಕ್	ಇಂದಿನ ಹೊರಹರಿವು 1,400 ಕ್ಯುಸೆಕ್

ಶಾಮನೂರು ಶಿವಶಂಕರಪ್ಪ ಹೇಳಿಕೆಗೆ ವೀರಶೈವ ಲಿಂಗಾಯತ ಯುವಸೇನೆ ಬೆಂಬಲ

ಮೈಸೂರು, ಅ.5(ಜಿಎ)–ಲಿಂಗಾಯತ ಸಮುದಾಯದ ಅಧಿಕಾರಿಗಳ ಕಡೆಗಣನೆ ಬಗ್ಗೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ನೀಡಿರುವ ಹೇಳಿಕೆಗೆ ನಮ್ಮ ಬೆಂಬಲವಿದೆ ಎಂದು ಮೈಸೂರು ನಗರ–ಜಿಲ್ಲೆ ವೀರಶೈವ ಲಿಂಗಾಯತ ಯುವಸೇನೆ ಅಧ್ಯಕ್ಷ ಗುರೂರು ಶಿವು ತಿಳಿಸಿದರು.

ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಹೆಚ್ಚು ಜನಸಂಖ್ಯೆ ಸಮುದಾಯ ಹೊಂದಿದ್ದು, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಹೆಚ್ಚು ಶಾಸಕರನ್ನು ನೀಡಿದೆ. ಆದರೆ, ಇತ್ತೀಚೆಗೆ ಜಾತಿ ವಿಚಾರದಿಂದ ಸಮುದಾಯದ ಅಧಿಕಾರಿ ವರ್ಗವನ್ನು ಕಡೆಗಣಿಸುತ್ತಿದ್ದು, ಹಾಗೇ ಹಳೆ ಮೈಸೂರು ಭಾಗದಲ್ಲಿ ರಾಜಕೀಯ ಷಡ್ಯಂತ್ರದಿಂದ ಸಮುದಾಯದ ನಾಯಕರನ್ನು ಮರೆಮಾಚಲಾಗುತ್ತಿದೆ ಎಂದು ಆರೋಪಿಸಿದರು. ಸುದ್ದಿಗೋಷ್ಠಿಯಲ್ಲಿ ಯಡಹಳ್ಳಿ ಷಣ್ಮುಖ, ದೇಬೂರು ಶಿವು, ಪವನ್ ಪಟೇಲ್, ತಾಂಡಪುರ ಭರತ್ ಹಾಗೂ ಸತೀಶ್ ಬಹದ್ದೂರ್ ಉಪಸ್ಥಿತರಿದ್ದರು.

ಜಯರಾಮು ನಿಧನ



ಮೈಸೂರು, ಅ.5(ಎಸ್‌ಪಿಎನ್)–ಮೈಸೂರು ಮೇಟಗಳ್ಳಿ ನಿವಾಸಿ, ಗ್ರಾಪಂ ಮಾಜಿ ಉಪಾಧ್ಯಕ್ಷ ಟಿ.ಜಯರಾಮು(70) ಬುಧವಾರ ನಿಧನರಾದರು. ಮೃತರು ಪತ್ನಿ ಜಯಮ್ಮ ಮತ್ತು ಕುಟುಂಬ ವರ್ಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ ಬಿಎಂಶ್ರೀನಗರದ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬ ಮೂಲಗಳು ತಿಳಿಸಿವೆ.

ಡಾ.ಪಾರ್ಶ್ವನಾಥಯ್ಯ ನಿಧನ



ಮೈಸೂರು, ಅ.5–ಪಶುವೈದ್ಯಕೀಯ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ, ಮೈಸೂರಿನ ಸಿದ್ಧಾರ್ಥನಗರದ ಆನಂದ ಮಾರ್ಗ ನಿವಾಸಿ ಡಾ.ಎಸ್.ಪಾರ್ಶ್ವನಾಥಯ್ಯ (84) ಗುರುವಾರ ನಿಧನರಾದರು.

ಮೃತರು ಪತ್ನಿ ಪದ್ಮಾ ಪಾರ್ಶ್ವನಾಥಯ್ಯ, ಪುತ್ರಿಯರಾದ ಪದ್ಮಿನಿ ನಾಗರಾಜ್, ಪ್ರಭಾಮಣಿ ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಅ.6) ಮಾಯಸಂದ್ರದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...




ಇಂದಿನ ಪಂಚಾಂಗ

6.10.2023 ಶುಕ್ರವಾರ, ಮಳೆ ನಕ್ಷತ್ರ: ಹಸ್ತ, 28.09.2023ರಿಂದ 10.10.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ,
ಕೃಷ್ಣ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ಆರಿದ್ರಾ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

- **ಅಭಿವೃದ್ಧಿ ಆಯುಕ್ತರು (ಕೈಮಗ್ಗ), ಜವಳಿ ಮಂತ್ರಾಲಯ, ಕೈಮಗ್ಗ ಮತ್ತು ಜವಳಿ ಇಲಾಖೆ, ರಾಜ್ಯ ಸಹಕಾರಿ ಕೈಮಗ್ಗ ನೇಕಾರರ ಮಹಾ ಮಂಡಳಿ ನಿಯಮಿತ, ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್:** ವಿಶೇಷ ಕೈಮಗ್ಗ ಮೇಳ, ಸಂಸ್ಕೃತಿ–ಹತ್‌ಕರ್ಗ–2023, ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆಯಿಂದ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.
- **ರಾಮ್‌ಸನ್ಸ್ ಬೊಂಬೆ ಮನೆ:** ಬೊಂಬೆ ಮನೆ ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.
- **ಜಂಟಿ ಕರ್ನಾಟಕ :** ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ, ಉಪಸ್ಥಿತರು : ಸಂಘಟನೆ ರಾಜ್ಯಾಧ್ಯಕ್ಷ ಡಾ.ಬಿ.ಎನ್.ಜಗದೀಶ್, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ.
- **ರಂಗಾಯಣ :** ಸಂಜೆ 5.30ಕ್ಕೆ ಬಿ.ವಿ. ಕಾರಂತ ಕಾಲೇಜು ರಂಗೋತ್ಸವ, ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳಿಂದ ಪರಿಜು ನಾಟಕ ಪ್ರದರ್ಶನ, ರಚನೆ : ಬೇಲೂರು ರಘುನಂದನ, ನಿರ್ದೇಶನ : ಪ್ರವೀಣ್ ಬೆಳ್ಳಿ, ಸ್ಥಳ: ವನರಂಗ.
- **ಚಿನ್ಮಯ ಮಿಷನ್ :** ಪಂಡಿತ್ ದತ್ತಪಾದಾನಂದ ಅವರಿಂದ ಗೀತಾ ಜ್ಞಾನ ಯಜ್ಞ ಕರ್ಮಸಂನ್ಯಾಸಯೋಗ (ಭಗವದ್ಗೀತೆಯ 5ನೇ ಅಧ್ಯಾಯ) ಕುರಿತು ಪ್ರವಚನ, ಸ್ಥಳ: ಚಿನ್ಮಯ ಮಿಷನ್, ರಾಮಕ್ಷೇತ್ರ, ಸಾರ್ವಜನಿಕ ಹಾಸ್ಟೆಲ್ ರಸ್ತೆ, ವಿದ್ಯಾರಣ್ಯಪುರಂ, ಸಂಜೆ 6.30 ರಿಂದ.
- **ಸ್ವರಾಮೃತ ಮೆಲೋಡಿಸ್:** ಪಿ.ಬಿ.ಶ್ರೀನಿವಾಸ್ ಅವರ ಸುಮಧುರ ಚಿತ್ರಗೀತೆಗಳ ಗಾಯನ ಸಂಜೆ, ಹಾಡೊಂದ ಹಾಡುವೆ ನೀ ಕೇಳು ಮಗುವೇ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಲಕ್ಷ್ಮೀಪುರಂ, ಸಂಜೆ 5.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ–ಡಾ.ಎಸ್.ವಿ.ನರಸಿಂಹನ್, ಪ್ರಸ್ತುತಿ– ಜಿ.ಶಾಂತ ಕುಮಾರ್, 6.40 ಪದಸಂಸ್ಕೃತಿ–ಡಾ.ಸಂಗಮೇಶ ಸವದತ್ತಿಮಠ್, 7.15 ಭಾವಗೀತೆಗಳು–ಡಾ.ರಾಜ್‌ಕುಮಾರ್, ರತ್ನಮಾಲಾ ಪ್ರಕಾಶ್, 9.05 ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 10.00 ಅನುರಾಧ ಸುರೇಶ್ ಕೃಷ್ಣಮೂರ್ತಿ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ– ಉಮೇಶ್ ಎಸ್.ಎಸ್., 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಆರೂರ್ ಪಿ.ಮನೋಹರ್–ಹಾಡುಗಾರಿಕೆ, 4.00 ಮಹಿಳಾರಂಗ, 6.50 ಕೃಷಿರಂಗ–ಮೀನುಗಾರಿಕಾ ಇಲಾಖೆಯಿಂದ ದೊರೆಯುವ ಸೌಲಭ್ಯಗಳನ್ನು ಕುರಿತು ಆರ್.ಗಣೇಶ್ ಅವರೊಂದಿಗೆ ಸಂದರ್ಶನ. ಸಂದರ್ಶಕರು– ಎನ್.ಕೇಶವಮೂರ್ತಿ, 9.30 ಮಣಿಕೃಷ್ಣಸ್ವಾಮಿ–ಹಾಡುಗಾರಿಕೆ, 10.00 ಜನಪದ ರೂಪಕ 'ನೆಲದ ಹಾಡು', ಪ್ರಸ್ತುತಿ–ಡಾ.ಮೈಸೂರು ಉಮೇಶ್, 10.30 ಸವಿನೆನಪು

ಅ.20ರಿಂದ ಮೂರು ದಿನ ರೈತ ದಸರಾ

ಬರದ ಹಿನ್ನೆಲೆ ಗ್ರಾಮೀಣ ದಸರೆಗೆ ಕೊಕ್





ಮೈಸೂರು,ಅ.5(ಜಿಎ)–ಕಾವೇರಿ ಕದನದ ನಡುವೆಯು ರೈತಾಪಿ ವರ್ಗದವರಿಗೆ ವೈಜ್ಞಾನಿಕವಾಗಿ ನೀರಿನ ಅರಿವು ಮೂಡಿಸಲು ಅ.20ರಿಂದ ಮೂರು ದಿನ ರೈತ ದಸರಾ ಆಯೋಜಿಸಲು ಕೃಷಿ ಇಲಾಖೆ ಮುಂದಾಗಿದೆ. ಪ್ರಸಕ್ತ ಸಾಲಿನ ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದಲ್ಲಿ ಈ ಬಾರಿ ರಾಜ್ಯದಲ್ಲಿ ಬರದ ಛಾಯೆ ಮೂಡಿದ್ದು, ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಸಾಂಪ್ರದಾಯಿಕ ದಸರಾ ನಡೆಸಲು ನಿರ್ಧರಿಸಿದೆ. ಅದರಂತೆ ಕೆಲವು ಕಾರ್ಯಕ್ರಮಗಳಿಗೆ ಬ್ರೇಕ್ ಹಾಕಲು ಚಿಂತಿಸಿ ರೈತ ದಸರಾಗೆ ಕೊಕ್ ನೀಡಲು ಮುಂದಾಗಿತ್ತು. ಆದರೆ ಅ.20, 21 ಮತ್ತು 22ರಂದು ರೈತರಿಗಾಗಿ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

ಅ.20ರಂದು ರೈತ ದಸರಾ ಆರಂಭಗೊಳ್ಳಲಿದ್ದು ಅಂದು ಬೆಳಗ್ಗೆ ಜಿಲ್ಲಾ ಉಸ್ತುವಾರಿ ಸಚಿವ, ಕೃಷಿ ಸಚಿವ ನಗರದ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗ ಚಾಲನೆ ನೀಡಲಿದ್ದಾರೆ ಎಂದು ಮೈಸೂರು ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಮತ್ತು ಉಪ ವಿಶೇಷಾಧಿಕಾರಿಯೂ ಆದ ಡಾ.ಎಂ.ಕೃಷ್ಣರಾಜು 'ಮೈಸೂರು ಮಿತ್ರ' ನಿಗೆ ತಿಳಿಸಿದರು.

ಈ ಬಾರಿ ರಾಜ್ಯದಲ್ಲಿ ಬರ ಇರುವುದರಿಂದ ರೈತ ದಸರಾ ಕೈಬಿಡಲಾಗಿತ್ತು. ಆದರೆ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಅವರ ಸೂಚನೆಯಂತೆ ರೈತ ದಸರಾ ನಡೆಸಲು ಸಮಿತಿ ಮುಂದಾಗಿದೆ. ರಾಜ್ಯದಲ್ಲಿ ಬರ ಇರುವ ಕಾರಣ ರೈತರಿಗೆ ಕೃಷಿಯಲ್ಲಿ ವೈಜ್ಞಾನಿಕ ತಂತ್ರಜ್ಞಾನ ಬಳಸಿಕೊಂಡು ಹೇಗೆ ಕಡಿಮೆ ನೀರಿನಲ್ಲಿ ಹೆಚ್ಚು ಇಳುವರಿ ಪಡೆಯುವ ವಿಧಾನದ ಬಗ್ಗೆ ನುರಿತ ತಜ್ಞರು ತಿಳಿಸಿಕೊಡಲಿದ್ದು ಈ ರೈತ ದಸರಾ ಬರದ ವಿಷಯದಡಿ ಸಾಗಲಿದೆ ಎಂದರು.

ಉದ್ಘಾಟನೆಯ ದಿನದಂದು ಕೃಷಿ, ತೋಟಗಾರಿಕೆ ಮತ್ತು ಪಶುಸಂಗೋಪನ ಇಲಾಖೆ ಬೃಹತ್ ಮೆರವಣಿಗೆ ಆಯೋಜಿಸಿದ್ದು ಎತ್ತಿನ ಗಾಡಿ ಮೂಲಕ ಮೆರವಣಿಗೆ ಸಾಗಲಿದೆ. ಮೆರವಣಿಗೆಗೆ ಜಾನಪದ ಕಲಾವಿದರು ಸಾಥ್ ನೀಡಲಿದ್ದಾರೆ. ಮೆರವಣಿಗೆ ಜೆ ಕೆ ಮೈದಾನ ತಲುಪಿದ ನಂತರ ಎಂಎಂಸಿಆರ್ಐ ಸಭಾಂಗಣದಲ್ಲಿ ಕೃಷಿ ವಿಜ್ಞಾನಿ, ರೈತ ಮಹಿಳೆ ಮತ್ತು ಯುವ ಪ್ರಗತಿಪರ ರೈತರನ್ನು ಕೃಷಿ ಸಚಿವರು ಅಭಿನಂದಿಸಲಿದ್ದಾರೆ. ನಗರದ ಜೆ ಕೆ ಮೈದಾನದಲ್ಲಿ ರೈತರಿಗಾಗಿ ಕೃಷಿ ವಸ್ತು ಪ್ರದರ್ಶನ ಏರ್ಪಡಿಸಲಾಗುತ್ತಿದ್ದು ಇದನ್ನು ಪಶುಸಂಗೋಪನ ಸಚಿವ ಕೆ.ವೆಂಕಟೇಶ್ ಉದ್ಘಾಟಿಸಲಿದ್ದಾರೆ. ಕಳೆದ ಬಾರಿಯಂತೆ ಈ ಬಾರಿ ಗ್ರಾಮೀಣ ದಸರಾ ನಡೆಸಲಾಗುತ್ತಿಲ್ಲ. ರೈತ ಕ್ರೀಡಾಕೂಟಗಳಾದ ಕೆಸರು ಗದ್ದೆ ಓಟ, ಗೋಣಿಚೀಲದ ಓಟ ಸೇರಿದಂತೆ ಎಲ್ಲಾ ರೀತಿಯ ಕ್ರೀಡೆಗಳು ಇರುವುದಿಲ್ಲ. ಆದರೆ, ರಾಜ್ಯ ಮಟ್ಟದ ಹಾಲು ಕರೆಯುವ ಮತ್ತು ಸಾಕು ಪ್ರಾಣಿಗಳ ಸ್ಪರ್ಧೆ ಏರ್ಪಡಿಸಲಾಗುತ್ತಿದ್ದು, ಪಶುಸಂಗೋಪನ ಸಚಿವರು ಉದ್ಘಾಟಿಸಲಿದ್ದಾರೆ ಎಂದು ಮಾಹಿತಿ ನೀಡಿದ್ದರು.

> “ರೈತ ದಸರಾದಲ್ಲಿ ಈ ಬಾರಿ ವೈಜ್ಞಾನಿಕವಾಗಿ ರೈತರಿಗೆ ನೀರಿನ ಬಗ್ಗೆ ನುರಿತ ತಜ್ಞರು ಸಂವಾದಗಳ ಮೂಲಕ ಅರಿವು ಮೂಡಿಸಲಿದ್ದಾರೆ.
> **–ಡಾ.ಕೃಷ್ಣರಾಜು, ಉಪವಿಶೇಷಾಧಿಕಾರಿ, ರೈತ ದಸರಾ ಉಪಸಮಿತಿ**

> “ಬರದ ಸಂದರ್ಭದಲ್ಲಿ ಆಯೋಜಿಸುತ್ತಿರುವ ರೈತ ದಸರಾದಲ್ಲಿ ರೈತರಿಗೆ ಅನುಕೂಲವಾಗುವ ರೀತಿ ಸಂವಾದದ ಜೊತೆಗೆ ರೈತ ಮುಖಂಡರ ಜೊತೆಗೆ ಚರ್ಚೆಗಳನ್ನು ಏರ್ಪಡಿಸುವುದು ಉತ್ತಮ.
> **–ಕುರುಬೂರು ಶಾಂತಕುಮಾರ್, ರೈತ ಮುಖಂಡ**

ಪಾಶ್ಚಿಮಾತ್ಯ ಶೈಲಿಗೆ ಆದ್ಯತೆ ನೀಡಿದರೆ ಮೈಸೂರಿನ 'ಪಾರಂಪರಿಕ ನಗರ' ಟ್ಯಾಗ್ ಕಳೆದುಕೊಳ್ಳುವ ಅಪಾಯವಿದೆ

ದಸರಾ ಪ್ರಯುಕ್ತ ರಾಜ್ಯ ಮಟ್ಟದ ಶಿಲ್ಪಕಲಾ ಶಿಬಿರ ಉದ್ಘಾಟಿಸಿದ ಡಿಸಿ ಡಾ.ಕೆ.ವಿ.ರಾಜೇಂದ್ರ ಎಚ್ಚರಿಕೆ



ಮೈಸೂರಿನ ಕಲಾಮಂದಿರದ ಸುಚಿತ್ರ ಕಲಾ ಗ್ಯಾಲರಿಯಲ್ಲಿ ಗುರುವಾರ ರಾಜ್ಯ ಮಟ್ಟದ ಶಿಲ್ಪಕಲಾ ಶಿಬಿರವನ್ನು ಉಳಿ ಹಿಡಿದು ಸಾಂಕೇತಿಕವಾಗಿ ಕೆತ್ತನೆ ಮಾಡುವ ಮೂಲಕ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಉದ್ಘಾಟಿಸಿದರು.

ಮೈಸೂರು,ಅ.5(ಪಿಎಂ)– ಮೈಸೂರಿಗೆ ಇರುವ 'ಪಾರಂಪರಿಕ ನಗರ' ಎಂಬ ಟ್ಯಾಗ್ ಉಳಿಸಿಕೊಳ್ಳುವ ದೊಡ್ಡ ಹೊಣೆಗಾರಿಕೆ ಮೈಸೂರಿನ ಇಡೀ ಸಮುದಾಯದ ಮೇಲಿದೆ. ಪಾಶ್ಚಿಮಾತ್ಯ ಶೈಲಿಗೆ ಆದ್ಯತೆ ನೀಡುತ್ತಾ ಹೋದರೆ ಮುಂದೊಂದು ದಿನ ಈ ಟ್ಯಾಗ್ ಕಳೆದುಕೊಳ್ಳಬೇಕಾಗುತ್ತದೆ. ಈ ನಿಟ್ಟಿನಲ್ಲಿ ನಮ್ಮ ಸಮಾಜದ ಮನಸ್ಥಿತಿಯನ್ನು ನಮ್ಮ ಪರಂಪರೆಗೆ ಪೂರಕವಾಗಿ ಉಳಿಸಿಕೊಳ್ಳಬೇಕಿದೆ ಎಂದು ದಸರಾ ವಿಶೇಷಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅಭಿಪ್ರಾಯಪಟ್ಟರು.

ದಸರಾ ಪ್ರಯುಕ್ತ ಲಲಿತಕಲೆ ಮತ್ತು ಕರಕುಶಲ ಉಪಸಮಿತಿ ಹಾಗೂ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಜಂಟಿ ಆಶ್ರಯದಲ್ಲಿ ಮೈಸೂರಿನ ಕಲಾಮಂದಿರ ಆವರಣದಲ್ಲಿ 10 ದಿನಗಳ ಕಾಲ ಹಮ್ಮಿಕೊಂಡಿರುವ ರಾಜ್ಯ ಮಟ್ಟದ ಶಿಲ್ಪಕಲಾ ಶಿಬಿರವನ್ನು ಇಲ್ಲಿನ ಕಲಾಮಂದಿರದ ಸುಚಿತ್ರ ಕಲಾ ಗ್ಯಾಲರಿಯಲ್ಲಿ ಗುರುವಾರ ಉದ್ಘಾಟಿಸಿ ಅವರು ಮಾತನಾಡಿದರು.

ಮೈಸೂರಿಗೆ ರಾಜಮನೆತನದ ಸುಗಂಧವಿದೆ. ಆಧುನಿಕತೆ ಮತ್ತು ನಗರೀಕರಣದ ಭರದಲ್ಲಿ ಅದನ್ನು ಕಳೆದುಕೊಳ್ಳಬಾರದು. ಇಲ್ಲಿನ ಪ್ರತಿಯೊಬ್ಬರು ಪಾಶ್ಚಿಮಾತ್ಯ ಶೈಲಿಗೆ ಆದ್ಯತೆ ನೀಡುತ್ತಾ ಹೋದರೆ ಮುಂದೊಂದು ದಿನ ಪ್ರವಾಸೋದ್ಯಮದ ಟ್ಯಾಗ್ ಕೂಡ ಕಳೆದುಕೊಳ್ಳಬೇಕಾಗುತ್ತದೆ. ಹಾಗಾಗಿ ನಮ್ಮ ಪರಂಪರೆ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಇಂತಹ ಶಿಬಿರಗಳು ಮಹತ್ತರ ಪಾತ್ರ ವಹಿಸಬೇಕು ಎಂದು ಸಲಹೆ ನೀಡಿದರು.

ಸಾಮಾನ್ಯವಾಗಿ ಶಿಲ್ಪಿಗಳಿಗೂ ವಿಜ್ಞಾನಕ್ಕೂ ಸಂಬಂಧವಿರುವುದಿಲ್ಲ ಎಂದು ಭಾವಿಸುತ್ತೇವೆ. ಆದರೆ ಶಿಲ್ಪಿಗಳಿಗಿಂತ ದೊಡ್ಡ ವಿಜ್ಞಾನಿಗಳಿಲ್ಲ. ಪ್ರತಿಯೊಂದು ಸುಂದರ ಶಿಲ್ಪಕಲೆಯು ಕಲೆಗಾರನ ಕಲಾಚಾತುರ್ಯ, ಶ್ರಮ, ಏಕಾಗ್ರತೆಯನ್ನು ಪ್ರತಿಬಿಂಬಿಸುತ್ತದೆ. ಈ ನಿಟ್ಟಿನಲ್ಲಿ ಶಿಲ್ಪಿಗಳ ಕೈಚಳಕ ಶ್ಲಾಘನೀಯ. ಇಲ್ಲಿ ಗಣಿತಶಾಸ್ತ್ರ, ಭೌತಶಾಸ್ತ್ರ ಅಡಗಿದೆ. ಶಿಲ್ಪಕಲೆಗೆ ಗೌರವ ಹೆಚ್ಚಿಸುವ ಕೆಲಸವನ್ನು ನಾವು ಮಾಡಬೇಕಿದೆ ಎಂದರು.

ಸಾಂಪ್ರದಾಯಿಕ ದಸರಾದಲ್ಲಿ ಈ ಶಿಲ್ಪಕಲಾ ಶಿಬಿರ ನಿಜವಾದ ಅವಿಭಾಜ್ಯ ಅಂಗವಾಗಿದೆ. ಇದು ನನಗೆ ಮೊದಲನೇ ದಸರಾ ವಾಗಿದ್ದು, ಬಹಳಷ್ಟು ಅಭಿವೃದ್ಧಿ ಸಾಧಿಸಲು ನಮಗೆ ಅವಕಾಶವಿದೆ. ಈ ನಿಟ್ಟಿನಲ್ಲಿ ಜಿಲ್ಲಾಡಳಿತ ಕ್ರಮ ವಹಿಸಲು ಸಿದ್ಧವಾಗಿದೆ. ಕಲಾವಿದರು ಹಾಗೂ ಕಲಾಸಕ್ತರು ತಮ್ಮ ಪ್ರತಿಕ್ರಿಯೆ ನೀಡಿದರೆ, ಕಲಾ ಪ್ರಾಕಾರಗಳನ್ನು ಪರಿಣಾಮಕಾರಿಯಾಗಿ ಜನರಿಗೆ ಮುಟ್ಟಿಸಲು ಸಾಧ್ಯವಾಗುತ್ತದೆ. ಮಕ್ಕಳು, ಪಾಲಕರು ಹಾಗೂ ಜನಸಾಮಾನ್ಯರಿಗೆ ಕಲೆಯ ಪ್ರಾಮುಖ್ಯತೆ ತಿಳಿಸಿಕೊಡಬೇಕು ಎಂದರು.

ಕಲಾಕೃತಿ ಅಲಂಕಾರಿಕ ಸ್ಥಾನ: ಶಿಬಿರದಲ್ಲಿ ಸಿದ್ಧಗೊಳ್ಳುವ ಕಲಾಕೃತಿಗಳನ್ನು ಸರ್ಕಾರದಿಂದಲೇ ಖರೀದಿಸಿ, ಅವುಗಳನ್ನು ಸರ್ಕಾರಿ ಕಚೇರಿಗಳಲ್ಲಿ ಅಲಂಕಾರಕ್ಕೆ ಇಡಲು ವ್ಯವಸ್ಥೆ ಮಾಡಲಾಗುವುದು. ಆ ಮೂಲಕ ಕಲೆಗಳಿಗೆ ಮೌಲ್ಯ ಕಲ್ಪಿಸಿಕೊಡಲು ಉದ್ದೇಶಿಸಲಾಗಿದೆ. ಇದರಿಂದ ಕಲಾವಿದರ ಪ್ರತಿಭೆ ಅನಾವರಣದ ಜೊತೆಗೆ ಕಲಾಕೃತಿಗೂ ಪ್ರಾಮುಖ್ಯತೆ ದೊರೆಯಲಿದೆ ಎಂದರು.

ಪ್ಲಾಸ್ಟಿಕ್ ತೆಗೆಸಿದ ಡಿಸಿ: ಸಮಾರಂಭದಲ್ಲಿ ಅತಿಥಿಗಳಿಗೆ ವಿತರಿಸುವ ಪುಸ್ತಕ, ಗುಲಾಬಿ ಹೂಗೆ ಬಳಸಲಾಗಿದ್ದ ಪ್ಲಾಸ್ಟಿಕ್ ಕವರ್ ಅನ್ನು ಜಿಲ್ಲಾಧಿಕಾರಿ ತೆಗೆಸಿ, ಪ್ಲಾಸ್ಟಿಕ್ ಮುಕ್ತ ದಸರಾ ಆಚರಿಸುವ ನಿರ್ಣಯಕ್ಕೆ ಬದ್ಧರಾಗಿ ನಡೆದುಕೊಂಡರು.

ಕಲಾ ಇತಿಹಾಸಕಾರರೂ ಆದ ಸಂಶೋಧಕಿ ಡಾ.ಚೂಡಾಮಣಿ ನಂದಗೋಪಾಲ್ ಮಾತನಾಡಿ, ಶಿಲ್ಪಿ ಎಂದರೆ ಕಲೆಯ ಸೃಷ್ಟಿಕರ್ತ. ಒಂದು ಕಲ್ಲು, ಒಂದು ಮರಕ್ಕೆ ಹತ್ತು ದಿನದಲ್ಲಿ ದಿವ್ಯವಾದ ರೂಪ ಕೊಡಬಲ್ಲ ಶಕ್ತಿ ಕಲಾವಿದನಿಗಿದೆ. ಶಿಲ್ಪಕಲೆಗೆ ಸಂಬಂಧಿಸಿದಂತೆ 47 ಗ್ರಂಥಗಳಿದ್ದು, ಅವುಗಳು ಡಿಜಿಟಲೀಕರಣವೂ ಆಗಿದೆ. ಇದನ್ನು ಬೆಂಗಳೂರಿನ ಇಂದಿರಾ ಗಾಂಧಿ ರಾಷ್ಟ್ರೀಯ ವಸ್ತು ಸಂಗ್ರಹಾಲಯದಲ್ಲಿ ವೀಕ್ಷಿಸಬಹುದು. ನಮ್ಮ ರಾಜ್ಯದ ಚಾಲುಕ್ಯ, ಹೊಯ್ಸಳ ಮತ್ತು ವಿಜಯನಗರ ಶೈಲಿಯ ಶಿಲ್ಪಕಲೆಗಳಿಗೆ ವಿಶ್ವ ಮಾನ್ಯತೆ ಸಿಕ್ಕಿದೆ ಎಂದು ಹೇಳಿದರು.

ಇದಕ್ಕೂ ಮುನ್ನ ಪ್ರಾಸ್ತಾವಿಕವಾಗಿ ಮಾತನಾಡಿದ ಲಲಿತಕಲೆ ಮತ್ತು ಕರಕುಶಲ ಉಪಸಮಿತಿ ಉಪವಿಶೇಷಾಧಿಕಾರಿ ಎ.ದೇವರಾಜು, ಶಿಬಿರವು ಅ.14ರವರೆಗೆ ನಡೆಯಲಿದ್ದು, ಅ.15ರಂದು ಶಿಬಿರದಲ್ಲಿ ಸಿದ್ಧಗೊಂಡ ಕಲಾಕೃತಿಗಳ ಪ್ರದರ್ಶನ ನಡೆಯಲಿದೆ. ಇದರೊಂದಿಗೆ ಅ.12ರಿಂದ 14ರವರೆಗೆ ಚಿತ್ರಕಲಾ ಶಿಬಿರ ನಡೆಯಲಿದೆ. ಅ.15ರಂದು ಇವುಗಳ ಪ್ರದರ್ಶನ ಕೂಡ ಇರಲಿದೆ. ಶಿಬಿರದಲ್ಲಿ ಕಲಾವಿದರ ಕೆತ್ತನೆಯನ್ನು ಸಾರ್ವಜನಿಕರು ವೀಕ್ಷಿಸಲು ಅವಕಾಶವಿದೆ. ಶಿಲ್ಪಕಲಾ ಅಕಾಡೆಮಿಯಿಂದ ಆಯ್ಕೆಗೊಂಡ 12 ಮಂದಿ ಕಲಾವಿದರು ಶಿಲ್ಪಕಲಾ ಶಿಬಿರದಲ್ಲಿ ಪಾಲ್ಗೊಂಡಿದ್ದಾರೆ ಎಂದು ತಿಳಿಸಿದರು.

ಜಿಪಂ ಸಿಇಒ ಕೆ.ಎಂ.ಗಾಯಿತ್ರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ ರಿಜಿಸ್ಟ್ರಾರ್ ಆರ್.ಚಂದ್ರಶೇಖರ್, ಲಲಿತಕಲೆ ಮತ್ತು ಕರಕುಶಲ ಉಪಸಮಿತಿ ಕಾರ್ಯಾಧ್ಯಕ್ಷ ನಾಜೀಯಾ ಸುಲ್ತಾನ, ಕಾರ್ಯದರ್ಶಿ ಬಿ.ರಶ್ಮಿ ಮತ್ತಿತರರು ಹಾಜರಿದ್ದರು.

ಅ.17, ಮಕ್ಕಳ ಚಿತ್ರಕಲಾ ಸ್ಪರ್ಧೆ

ಅ.17ರಂದು ರಾಜ್ಯ ಮಟ್ಟದ ಮಕ್ಕಳ ಚಿತ್ರಕಲಾ ಸ್ಪರ್ಧೆ ಆಯೋಜಿಸಲಾಗಿದೆ. 1ರಿಂದ 4, 5ರಿಂದ 7, 8ರಿಂದ 10ನೇ ತರಗತಿವರೆಗೆ ಮೂರು ವಿಭಾಗಗಳಲ್ಲಿ ಈ ಮಕ್ಕಳ ಚಿತ್ರಕಲಾ ಸ್ಪರ್ಧೆ ನಡೆಯಲಿದೆ. ಅ.19ರಿಂದ 22ರವರೆಗೆ ರಾಜ್ಯ ಮತ್ತು ಅಂತರ್ ರಾಜ್ಯಮಟ್ಟದ ಕರಕುಶಲ ಕಲೆಗಳ ಪ್ರದರ್ಶನ, ಪ್ರಾತ್ಯಕ್ಷಿಕೆ ಮತ್ತು ಮಾರಾಟ ಮೇಳ ಹಮ್ಮಿಕೊಳ್ಳಲಾಗಿದೆ. ಅ.22 ರಂದು ಸಮಾರೋಪ ಹಾಗೂ ಬಹುಮಾನ ವಿತರಣೆ ಸಮಾರಂಭ ನಡೆಯಲಿದೆ.

–ಎ.ದೇವರಾಜು, ಲಲಿತಕಲೆ ಮತ್ತು ಕರಕುಶಲ ಉಪಸಮಿತಿ ಉಪ ವಿಶೇಷಾಧಿಕಾರಿ.

ನಾಳೆ, ನಾಡಿದ್ದು ಬ್ಯಾಡರಹಳ್ಳಿಯಲ್ಲಿ ಮದ್ದು–ಗುಂಡುಗಳ ತರಬೇತಿ

ಮೈಸೂರು, ಅ.5– ಅ.7 ಮತ್ತು 8ರಂದು ರೈಲ್ವೆ ರಕ್ಷಣಾದಳ ಮೈಸೂರು ವಿಭಾಗದ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗ ಮೊದಲನೆ ಹಂತದ ಮದ್ದು–ಗುಂಡುಗಳ ವಾರ್ಷಿಕ ತರಬೇತಿ ಕಾರ್ಯಾಗಾರ ಪೊಲೀಸ್ ಫೈರಿಂಗ್ ರೇಂಜ್ ಅನ್ನು ದೊಡ್ಡ ಬ್ಯಾಡರಹಳ್ಳಿಯಲ್ಲಿ (ಮಂಡ್ಯ ಜಿಲ್ಲೆ) ಆಯೋಜಿಸಲಾಗಿರುವುದರಿಂದ ಈ ಮೇಲೆ ತಿಳಿಸಿದ ವ್ಯಾಪ್ತಿಯಲ್ಲಿ ಸಾಕುಪ್ರಾಣಿಗಳ ಹಾಗೂ ಜನರ ಸಂಚಾರವನ್ನು ಬೆಳಗ್ಗೆ 5 ಗಂಟೆಯಿಂದ ನಿಷೇಧಿಸಿದೆ. ಈ ಕಾರಣಕ್ಕಾಗಿ ಸಾರ್ವಜನಿಕರು ಸಹಕರಿಸಬೇಕಾಗಿ ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು ಮತ್ತು ಸಾರ್ವಜನಿಕ ಸಂಪರ್ಕಾಧಿಕಾರಿ ಲೋಹಿತೇಶ್ವರ ಜೆ. ಪತ್ರಿಕಾ ಪ್ರಕಟಣೆ ತಿಳಿಸಿದೆ.

ಸಿಕ್ಕಿಂ ಪ್ರವಾಹ: ಮೃತರ ಸಂಖ್ಯೆ 14ಕ್ಕೆ ಏರಿಕೆ, 23 ಸೇನಾ ಸಿಬ್ಬಂದಿ ಸೇರಿ 102 ಮಂದಿ ನಾಪತ್ತೆ; ಮುಂದುವರಿದ ಶೋಧ ಕಾರ್ಯ

ಗ್ಯಾಂಗ್ಟೋಕ್, ಅ.5– ಉತ್ತರ ಸಿಕ್ಕಿಂನ ಲೊನಾಕ್ ಸರೋವರದಲ್ಲಿ ಮೇಘಸ್ಫೋಟದಿಂದಾಗಿ ತೀಸ್ತಾ ನದಿಯ ಜಲಾನಯನ ಪ್ರದೇಶದಲ್ಲಿ ಉಂಟಾದ ಹಠಾತ್ ಪ್ರವಾಹದಲ್ಲಿ ಮೃತಪಟ್ಟವರ ಸಂಖ್ಯೆ 14ಕ್ಕೆ ಏರಿಕೆಯಾಗಿದ್ದು, 23 ಸೇನಾ ಸಿಬ್ಬಂದಿ ಸೇರಿ 102 ಜನ ನಾಪತ್ತೆಯಾಗಿದ್ದಾರೆ. ಕಣ್ಮರೆಯಾದವರಿಗಾಗಿ ರಕ್ಷಣಾ ಸಿಬ್ಬಂದಿ ಶೋಧ ಕಾರ್ಯ ನಡೆಸುತ್ತಿದ್ದಾರೆ.

ಇಲ್ಲಿವರೆಗೆ, 2,011 ಜನರನ್ನು ರಕ್ಷಿಸಲಾಗಿದೆ. ಆದರೆ ಬುಧವಾರ ಸಂಭವಿಸಿದ ವಿಪತ್ತು 22,034 ಜನರ ಮೇಲೆ ಪರಿಣಾಮ ಬೀರಿದೆ ಎಂದು ಸಿಕ್ಕಿಂ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ತಿಳಿಸಿದೆ.

ರಾಜ್ಯ ಸರ್ಕಾರವು 4 ಪೀಡಿತ ಜಿಲ್ಲೆಗಳಲ್ಲಿ 26 ಪರಿಹಾರ ಶಿಬಿರಗಳನ್ನು ಸ್ಥಾಪಿಸಿದೆ. ಗ್ಯಾಂಗ್ಟಾಕ್ ಜಿಲ್ಲೆಯ 8 ಪರಿಹಾರ ಶಿಬಿರಗಳಲ್ಲಿ ಒಟ್ಟು 1,025 ಜನರು ಆಶ್ರಯ ಪಡೆಯುತ್ತಿದ್ದಾರೆ. ಪ್ರವಾಹದಿಂದಾಗಿ ರಾಜ್ಯದಲ್ಲಿ 11 ಸೇತುವೆಗಳು ನಾಶವಾಗಿದ್ದು, ಮಂಗನ್ ಜಿಲ್ಲೆಯೊಂದರಲ್ಲೇ ಎಂಟು ಸೇತುವೆಗಳು ಕೊಚ್ಚಿ ಹೋಗಿವೆ. ನಾಮ್ಚಿಯಲ್ಲಿ ಎರಡು ಸೇತುವೆಗಳು ಮತ್ತು ಗ್ಯಾಂಗ್‌ಟಾಕ್‌ನಲ್ಲಿ ಒಂದು ಸೇತುವೆಗಳು ನಾಶವಾಗಿವೆ. ನಾಲ್ಕು ಪೀಡಿತ ಜಿಲ್ಲೆಗಳಲ್ಲಿ ನೀರಿನ ಪೈಪ್‌ಲೈನ್‌ಗಳು, ಒಳಚರಂಡಿ ಮಾರ್ಗಗಳು ಮತ್ತು 277 ಮನೆಗಳು ಹಾನಿಗೊಳಗಾಗಿವೆ.

ನಕ್ಕರೆ ಅದೇ ಸ್ವರ್ಗ

ಅಭ್ಯರ್ಥಿ : (ಕೆಲಸವೊಂದರ ಸಂದರ್ಶನದಲ್ಲಿ) ನನಗೆ ಒಂದು ಲಕ್ಷ ರೂ.ಸಂಬಳ ಕೊಡಬೇಕು. ಇರುವುದಕ್ಕೆ ಒಂದು ಮನೆ ಬೇಕು. ಓಡಾಡುವುದಕ್ಕೆ ಕಾರು ಬೇಕು.

ಬಾಸ್ : ಅದಕ್ಕೇನಂತೆ. 5 ಲಕ್ಷ ಸಂಬಳ ಕೊಡೋಣ. ಎರಡು ಮನೆ ಕೊಡೋಣ. ಒಂದೇನು ಎರಡು ಕಾರು ಕೊಡೋಣ.

ಅಭ್ಯರ್ಥಿ : ಏನು ಜೋಕಾ?

ಬಾಸ್ : ಜೋಕ್ ಶುರು ಮಾಡಿದ್ದು ಯಾರು?

ಮೈಸೂರು ಮಿತ್ರ

ಶುಕ್ರವಾರ, 6 ಅಕ್ಟೋಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಇನ್ನೊಬ್ಬರಿಗೆ ಒಳ್ಳೆಯದನ್ನು ಮಾಡುವುದರಿಂದ ಮಾತ್ರ ತನ್ನ ಒಳ್ಳೆಯದನ್ನು ಸಾಧಿಸಬಹುದು – ಸ್ವಾಮಿ ವಿವೇಕಾನಂದರು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಷ್ಟವಿಲ್ಲದೆ ಇಷ್ಟ ಈಡೇರದು

ನಿಮ್ಮ ಪತ್ರಗಳು

ಗ್ರಾಮ ಪಂಚಾಯಿತಿಗೊಂದು ಮದ್ಯದಂಗಡಿ ಬೇಕೆ?

ಮಾನ್ಯರೆ,

ಹೊಸ ಮದ್ಯದಂಗಡಿಗಳನ್ನು ಪ್ರತಿ ಗ್ರಾಮ ಪಂಚಾಯಿತಿಗೆ ಒಂದರಂತೆ ತೆರೆಯಲು ಮುಂದಾಗಿರುವ ಕಾಂಗ್ರೆಸ್ ಸರ್ಕಾರದ ವಿರುದ್ಧ ಮೈಸೂರಿನ ಗಾಂಧಿ ವೃತ್ತದಲ್ಲಿ ಸೋಶಿಯಲ್ ಡೆಮಾಕ್ರೆಟಿಕ್ ಪಾರ್ಟಿ ಆಫ್ ಇಂಡಿಯಾದ ಕಾರ್ಯಕರ್ತರು ನಡೆಸಿರುವ ಪ್ರತಿಭಟನೆ ತುಂಬಾ ಶ್ಲಾಘನೀಯ. ಹೆಣ್ಣುಮಕ್ಕಳು ತಮ್ಮ ಮದುವೆಯ ಸಮಯದಲ್ಲಿ ದೇವರಲ್ಲಿ ಮೊರೆ ಇಡುವುದೇನೆಂದರೆ ಕೊಡು ವರವನೊಂದನು ಕುಡುಕನಲ್ಲದ ಗಂಡನ ಎಂಬ ಮಾತಿಗೆ ವ್ಯತಿರಿಕ್ತವಾಗಿ ಸರ್ಕಾರವು ಹೊಸದಾಗಿ ಒಂದು ಸಾವಿರ ಮದ್ಯದಂಗಡಿ ತೆರೆಯಲು ಅನುಮತಿ ನೀಡುತ್ತಿದೆ. ಇದರಿಂದ ಕರ್ನಾಟಕ ರಾಜ್ಯ ಮದ್ಯವ್ಯಸನಿಗಳ ರಾಜ್ಯವಾಗಿ ಹೊರಹೊಮ್ಮುವುದರಲ್ಲಿ ಯಾವುದೇ ಸಂಶಯವಿಲ್ಲ. ಮದ್ಯಪಾನದಿಂದ ಸಾಮಾಜಿಕ ಸಮಸ್ಯೆಗಳು, ಅಪರಾಧ ಪ್ರಕರಣಗಳು, ಕುಟುಂಬದಲ್ಲಿ ಕಲಹಗಳು ಹೆಚ್ಚಾಗುವುದರಲ್ಲಿ ಯಾವುದೇ ಅನುಮಾನವಿಲ್ಲ. ಇನ್ನೂ ಕಾಲ ಮಿಂಚಿಲ್ಲ. ರಾಜ್ಯ ಸರ್ಕಾರ ಈ ತನ್ನ ನಿರ್ಧಾರದಿಂದ ಹಿಂದೆ ಸರಿದು ಕರ್ನಾಟಕ ರಾಜ್ಯವನ್ನು ರಾಮರಾಜ್ಯವಾಗಿಸುವ ಮೂಲಕ ತನ್ನ ಘನತೆಯನ್ನು ಹೆಚ್ಚಿಸಿಕೊಳ್ಳಬೇಕು.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ಕಾವೇರಿ ನೀರಿನ ಸಮಸ್ಯೆಗೆ ರಾಜಕೀಯ ವ್ಯಕ್ತಿಗಳು ಪರಿಹಾರ ಸೂಚಿಸುವರೆ?

ಮಾನ್ಯರೆ,

ಮೂರು ವರ್ಷಗಳಿಂದ ಸ್ತಬ್ಧವಾಗಿದ್ದ ಕಾವೇರಿ ನೀರಿನ ಸಮಸ್ಯೆ ಈ ವರ್ಷ ಉಲ್ಬಣಗೊಂಡಿದೆ. ದುರಂತವೆಂದರೆ ಕಾವೇರಿ ಹುಟ್ಟುವುದು ಕರ್ನಾಟಕದಲ್ಲಿ. ತುಂಬುವುದು ಕೃಷ್ಣರಾಜಸಾಗರದಲ್ಲಿ. ಹೀಗಿದ್ದರೂ ಸಹ ಕರ್ನಾಟಕ ನೀರಿಗಾಗಿ ತನ್ನ ಹಕ್ಕಿಗಾಗಿ ಚಳವಳಿ ಮಾಡುತ್ತಿದೆ. ತಮಿಳುನಾಡಿನಲ್ಲಿ ಯಾವುದೇ ಸರಕಾರವಿರಲಿ ಅವರು ಕೇಂದ್ರಕ್ಕೆ, ನ್ಯಾಯಾಲಯಕ್ಕೆ ತಮ್ಮ ವಾದ ಮಂಡಿಸಿ ಸಫಲರಾಗುತ್ತಿದ್ದಾರೆ. ಕರ್ನಾಟಕದಲ್ಲಿ ಬಿಜೆಪಿ, ಜನತಾದಳ, ಕಾಂಗ್ರೆಸ್ ಸರಕಾರಗಳಿದ್ದರೂ ಕಾವೇರಿಯನ್ನು ಉಳಿಸುವ ಕಾರ್ಯಗಳನ್ನು ಇವರು ಮಾಡಲಾಗುತ್ತಿಲ್ಲ. ಈಗಿನ ಸರಕಾರ ಅವಧಿ ಮುನ್ನವೇ ಕಾವೇರಿ ನೀರನ್ನು ತಮಿಳುನಾಡಿಗೆ ಬಿಟ್ಟಿದೆ. ಇವೆಲ್ಲವನ್ನೂ ಗಮನಿಸಿದಾಗ ಕರ್ನಾಟಕದ ಜನ ಅಭಿಮಾನ ಶೂನ್ಯರೇ ಎಂಬ ಸಂಶಯ ಬರುತ್ತದೆ. ಅನಗತ್ಯ ದೊಂಬಿಗಳಿಂದ ಜನಸಾಮಾನ್ಯರ ಜೀವನ ದುಸ್ತರವಾಗಿದೆ. ಬಡ ರೈತರ ವ್ಯಾಪಾರಸ್ಥರ ದೈನಂದಿನ ಬದುಕಿಗೆ ಇದು ಮಾರಕವಾಗಿದೆ. ಬಂದ್‌ಗಳು ಬೇಕು. ಆದರೆ ಇದರಿಂದ ದೇಶಕ್ಕೆ ಕೋಟ್ಯಾಂತರ ರೂಗಳ ನಷ್ಟ ಉಂಟಾಗುತ್ತದೆ. ಕೊರೊನಾ ಸಮಯದ ಆರ್ಥಿಕ ಸಂಕಷ್ಟ ಇನ್ನೂ ಸಾರ್ವಜನಿಕರನ್ನು ಕಾಡುತ್ತಿದೆ. ರಾಜಕೀಯ ವ್ಯಕ್ತಿಗಳು ಇದಕ್ಕೆ ಪರಿಹಾರ ಸೂಚಿಸುವರೆ? – ರಘುವೀರ ಪುರಾಣಿಕ, ಮೈಸೂರು.

ಇಂತಹ ಕಲಾಪೋಷಕರ ಸಂಖ್ಯೆ ಹೆಚ್ಚಾಗಲಿ

ಮಾನ್ಯರೆ,

ಇಂದಿನ ಯಾಂತ್ರಿಕ ಒತ್ತಡದ ಬದುಕಿನಲ್ಲಿ ಮನುಷ್ಯ ಹಲವಾರು ಸಮಸ್ಯೆಗಳಿಂದ ಕುಗ್ಗಿ ಹೋಗಿದ್ದಾನೆ. ಇದಕ್ಕೆ ಬಹುಶಃ ಸುಶ್ರಾವ್ಯವಾದ ಸಂಗೀತವನ್ನು ಆಲಿಸುವುದರಿಂದ ಮನುಷ್ಯ ನೆಮ್ಮದಿ ಕಂಡುಕೊಳ್ಳಬಹುದು. ಮೈಸೂರು ಹೇಳಿ ಕೇಳಿ ಸಾಂಸ್ಕೃತಿಕ ನಗರಿ. ಸಂಗೀತ ಕಾರ್ಯಕ್ರಮಗಳು ಆಗಾಗ್ಗೆ ನಡೆಯುತ್ತಲೇ ಇರುತ್ತವೆ. ಮೈಸೂರು 8ನೇ ಕ್ರಾಸ್, ವಿ.ವಿ. ಮೊಹಲ್ಲಾದಲ್ಲಿ ಪ್ರತಿವರ್ಷದಂತೆ ಈ ವರ್ಷವೂ 15 ದಿನ ಸಂಗೀತ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದ ರೂವಾರಿಗಳಾದ ಸಿ.ಆರ್. ಹಿಮಾಂಷು, ಮಾಜಿ ಶಾಸಕ ವಾಸು, ಉದ್ಯಮಿ ಜಗನ್ನಾಥ್ ಶೆಣೈ ಇವರ ಕೊಡುಗೆಯನ್ನು ಮರೆಯಲು ಸಾಧ್ಯವೇ? ಆಡು ಮುಟ್ಟದ ಸೊಪ್ಪಿಲ್ಲ. ವಾಸು ಅವರು ಇಲ್ಲದ ಕ್ಷೇತ್ರವಿಲ್ಲ. ರಾಜಕೀಯ, ಕ್ರೀಡೆ, ಸಹಕಾರ, ಶಿಕ್ಷಣ, ಕಲೆ ಹೀಗೆ ಇಂತಹ ಕಲಾಪೋಷಕರ ಸಂಖ್ಯೆ ಹೆಚ್ಚಾಗಲಿ.

–ಜಿ.ಪಿ.ರಾಜೇಶ್, ವಿ.ವಿ. ಪುರಂ, ಮೈಸೂರು.

ಡಾ.ಎಂ.ಕೆ.ಸೂರಪ್ಪನವರನ್ನು ಗುರುತಿಸಿ ಸನ್ಮಾನಿಸದಿರುವುದು ವಿಷಾದನೀಯ!

ಮಾನ್ಯರೆ,




ಮೈಸೂರು ಜಿಲ್ಲೆಯ ಮಹಾನ್ ಸಾಧಕ, ಶಿಕ್ಷಣತಜ್ಞ, ವಿಜ್ಞಾನಿ, ಸಂಶೋಧಕ, ಲೇಖಕ ಡಾ.ಎಂ.ಕೆ.ಸೂರಪ್ಪನವರು 1951ರಲ್ಲಿ ಜಿಲ್ಲೆಯ ಸಾಲಿಗ್ರಾಮ ತಾಲೂಕಿನ ಮಿರ್ಲೆ ಗ್ರಾಮದ ರೈತ ಕುಟುಂಬದಲ್ಲಿ ಜನಿಸಿ ಅಲ್ಲಿಯೇ ಕನ್ನಡ ಮಾಧ್ಯಮದಲ್ಲಿ ಪ್ರೌಢಶಾಲೆಯವರೆಗೆ ವಿದ್ಯಾಭ್ಯಾಸ ಮಾಡಿ 1970ರಲ್ಲಿ ಮೈಸೂರಿನ ಯುವರಾಜ ಕಾಲೇಜಿನಲ್ಲಿ ಬಿಎಸ್‌ಸಿ ಪದವಿ ಪಡೆದು ಸ್ವಪ್ರತಿಭೆಯಿಂದ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಪ್ರವೇಶ ಪಡೆದು ಲೋಹಶಾಸ್ತ್ರದಲ್ಲಿ ಬಿಇ, ಎಂಎಸ್ ಹಾಗೂ ಪಿಹೆಚ್‌ಡಿ ಪದವಿಯನ್ನು ಪಡೆದವರು. ವಿದ್ಯಾಭ್ಯಾಸದ ನಂತರ ಎರಡು ವರ್ಷಗಳ ಕಾಲ ತ್ರಿವೇಂಡ್ರಮ್‌ನಲ್ಲಿ ಹಿರಿಯ ವಿಜ್ಞಾನಿಯಾಗಿ ಕಾರ್ಯನಿರ್ವಹಿಸಿ, 1981–1987ರ ಅವಧಿಯಲ್ಲಿ ಅಮೆರಿಕಾದ ಡ್ರೆಕ್ಸೆಲ್ ವಿಶ್ವವಿದ್ಯಾನಿಲಯ, ಕೆಂಬ್ರಿಡ್ಜ್ ವಿಶ್ವವಿದ್ಯಾನಿಲಯ ಹಾಗೂ ಸ್ವಿಟ್ಜರ್‌ಲ್ಯಾಂಡ್‌ನ ಫೆಡರಲ್ ಇನ್‌ಸ್ಟಿಟ್ಯೂಟ್‌ಗಳಲ್ಲಿ ಸಂಶೋಧಕರಾಗಿ ಸೇವೆ ಸಲ್ಲಿಸಿ ತಾವು ಕಲಿತ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಗೆ ಸೇರಿ ಪ್ರೊಫೆಸರ್ ಹುದ್ದೆಯಲ್ಲಿ ನಿಷ್ಠೆಯಿಂದ ಕೆಲಸ ಮಾಡಿದರು.

ಸಂಸ್ಥಾಪಕ ನಿರ್ದೇಶಕರಾಗಿ ಆರು ವರ್ಷಗಳ ಕಾಲ ಪ್ರತಿಷ್ಠಿತ ಐಐಟಿ(ರೋಪಾರ್) ಇಂಜಿನಿಯರಿಂಗ್ ಕಾಲೇಜಿನಲ್ಲಿ ದುಡಿದು ಸೈ ಎನಿಸಿಕೊಂಡರು. 2016ರ ರ‍್ಯಾಂಕಿಂಗ್‌ನಲ್ಲಿ ಭಾರತದ ಮೊದಲ ನೂರು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಒಂಬತ್ತನೇ ಸ್ಥಾನ ಪಡೆದಿದ್ದು ಇವರ ಸಾಧನೆ. ಇದಕ್ಕೂ ಮೀರಿದ ಹುದ್ದೆ ಪಕ್ಕದ ರಾಜ್ಯ ಚೆನ್ನೈನ ಅಣ್ಣಾ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ 2018ರಲ್ಲಿ ಪ್ರಭಾರ ವಹಿಸಿಕೊಂಡು ಹಲವಾರು ಸವಾಲುಗಳನ್ನು ಧೈರ್ಯದಿಂದ ಎದುರಿಸಿ ಅಲ್ಲಿದ್ದ ದುರಾಡಳಿತವನ್ನು ಒತ್ತಡಗಳಿಗೆ ಮಣಿಯದೆ ತೊಲಗಿಸಿ ರಾಜ್ಯಕ್ಕೆ ಹಾಗೂ ಹುಟ್ಟಿದೂರಿಗೆ ಹೆಸರು ತಂದರು.

ಮೂರು ದಶಕಗಳ ಸುದೀರ್ಘ ಕಾಲ ಸಂಶೋಧನೆ ನಡೆಸಿ ಮೆಟಲ್ ಮೆಟ್ರಿಕ್ಸ್ ಕಾಂಪೋಸಿಟ್ಸ್ (ಎಂಎಂಸಿ) ವಿಷಯ ಹಾಗೂ ಲೋಹಗಳ ಬಗ್ಗೆ ಹೊಸ ಆವಿಷ್ಕಾರಗಳ ಕೊಡುಗೆ ನೀಡಿದ್ದಾರೆ. ಇವರು ಬರೆದಿರುವ ವಿಜ್ಞಾನ ಲೇಖನಗಳು ಪ್ರಪಂಚದ ಪ್ರತಿಷ್ಠಿತ ಪತ್ರಿಕೆಗಳಲ್ಲಿ ಪ್ರಕಟವಾಗಿ ಪೇಟೆಂಟ್‌ಗಳನ್ನು ಸಹ ಪಡೆದಿವೆ. ಇವರ ಸಾಧನೆಯು ಬೆಟ್ಟದಷ್ಟಿದೆ. ಹಾಗೆಯೇ ಸಾಕಷ್ಟು ಗೌರವ ಬಿರುದುಗಳು ರಾಷ್ಟ್ರಮಟ್ಟದಲ್ಲಿ ಸಂದಿವೆ.


ಈಗ ಅವರಿಗೆ 73 ವರ್ಷಗಳು, ಹೊರಗಡೆ ಅಪಾರ ಮನ್ನಣೆ ಗಳಿಸಿರುವ ಡಾ.ಎಂ.ಕೆ. ಸೂರಪ್ಪನವರನ್ನು ಮೈಸೂರು ಜಿಲ್ಲೆ ಗುರುತಿಸಿರುವುದು ಬಹಳ ಕಡಿಮೆಯೇ. ಇವರಿಗೆ ಮೈಸೂರಿನಲ್ಲಿ ಹಾಗೂ ಹುಟ್ಟಿದ ಮಿರ್ಲೆ ಗ್ರಾಮದಲ್ಲಿ ಅದ್ದೂರಿಯಾಗಿ ಸಾರೋಟಿನಲ್ಲಿ ಮೆರವಣಿಗೆ ಮಾಡಿ ನಾಗರಿಕ ಸನ್ಮಾನ ಮಾಡುವುದರಿಂದ ಅವರ ಮಹತ್ತರವಾದ ಸಾಧನೆಗೆ ಗೌರವ ನೀಡಿದಂತಾಗುವುದು. ಮುಂದಿನ ದಸರೆಯ ಉದ್ಘಾಟಕರನ್ನಾಗಿ ಆಯ್ಕೆ ಮಾಡಿದರೆ ಮತ್ತಷ್ಟು ಮೆರಗು ನಮ್ಮ ಮೈಸೂರಿಗೆ, ನಮ್ಮ ನಾಡಿಗೆ ಸಿಗುವುದು. –ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ಸುಧಾರಣೆಯಾಗಬೇಕಾಗಿದೆ ಮಾನವ ಸಂಬಂಧಗಳು!!



“ ನಾನು ಕಂಡಿದ್ದೇ ಸತ್ಯ ಎಂದು ವಾದಿಸುವುದು ಮೂರ್ಖತನವಾಗಿ ಬಿಡುತ್ತದೆ. ಅನೇಕ ಸಲ ನ್ಯಾಯಾಲಯದಲ್ಲೇ ಹೊಡೆದಾಟಗಳು, ಕೊಲೆಯ ಪ್ರಯತ್ನಗಳು ಆಗುತ್ತವೆ. ನ್ಯಾಯಾಧೀಶರ ಮುಂದೆಯೇ ಇಂತಹುದು ಆಗಿಬಿಡಬಹುದು. ಆದರೆ ನ್ಯಾಯಾಧೀಶರು ಘಟನೆ ನಡೆದ ತಕ್ಷಣವೇ ಅದು ತಪ್ಪು ಎಂದು ತೀರ್ಪು ನೀಡುವುದಿಲ್ಲ. ಆ ಘಟನೆ ಏಕಾಯಿತು, ಅದರ ಹಿನ್ನೆಲೆ ಏನು, ತಪ್ಪು ಮಾಡಿದವನ ಮನಸ್ಥಿತಿ ಹೇಗಿತ್ತು ಎಂಬುದನ್ನೆಲ್ಲಾ ಅವಲೋಕಿಸದ ನಂತರವೇ ತೀರ್ಪು ನೀಡುತ್ತಾರೆ. ಆದ್ದರಿಂದ ನಮ್ಮ ಕಣ್ಣಿಗೆ ಕಂಡದ್ದೇ ಸರಿ ಎಂದು ವಾದ ಮಾಡಲು ಹೋಗಬಾರದು. ಹೀಗೆ ಕಣ್ಣಿಗೆ ಕಂಡದ್ದೇ ಸರಿ ಎಂದು ನಾವು ವಾದ ಮಾಡಿ ಇಕ್ಕಟ್ಟಿಗೆ ಸಿಲುಕಿಕೊಳ್ಳುತ್ತೇವೆ.

ಮಾನವ ಸಂಘಜೀವಿ. ನಾವು ಈ ಸಮಾಜದಲ್ಲಿಯೇ ಬದುಕಬೇಕಾಗಿದೆ. ನಾವು ನೆಮ್ಮದಿಯಿಂದ ಬಾಳಬೇಕಾದರೆ ಸಮಾಜದಲ್ಲಿ ಕೆಲವೊಂದು ಹೊಂದಾಣಿಕೆ ಮಾಡಿಕೊಳ್ಳುವುದು ಅನಿವಾರ್ಯ. ಎಲ್ಲವೂ ನಾನು ಹೇಳಿದಂತೆಯೇ ಆಗಬೇಕು ಎಂದರೆ ಸಾಧ್ಯವಾಗುವುದಿಲ್ಲ. ನಮ್ಮ ಮನೆಯಲ್ಲೇ ಅನೇಕ ಸಲ ನಾವು ಹೇಳಿದ ಹಾಗೆ ನಡೆಯುವುದಿಲ್ಲ. ನೆಮ್ಮದಿ ಬೇಕೆಂದರೆ ಮನೆಯಲ್ಲೂ ಹೊಂದಾಣಿಕೆ ಮಾಡಿಕೊಳ್ಳಲೇಬೇಕಾಗುತ್ತದೆ. ಅನೇಕ ಸಲ ನಾವು ನಾನು ಹೇಳಿದ್ದೇ ಸರಿ, ನನ್ನ ಆಲೋಚನೆಯೇ ಸರಿ ಎಂದು ಭಾವಿಸಿ ಎಲ್ಲರೂ ನನ್ನ ಮಾತಿನಂತೆಯೇ ನಡೆಯಬೇಕು ಎಂದುಕೊಳ್ಳುತ್ತೇವೆ. ಆದರೆ ನನಗಿಂತ ಇತರರು ಬುದ್ಧಿವಂತರಾಗಿರಬಹುದು ಎಂಬುದನ್ನು ನಾವು ಯೋಚಿಸುವುದೇ ಇಲ್ಲ. ಅನೇಕ ಸಲ ನಾನು ಹೇಳುತ್ತಿರುವುದು ಸರಿಯಲ್ಲ ಎಂದೋ ಅಥವಾ ನಾನು ಹೇಳಿದ ನಂತರ ಹಾಗೆ ಹೇಳಬಾರದಿತ್ತು ಎಂದೋ ಗೊತ್ತಾಗುತ್ತದೆ. ಆದರೆ ನಮ್ಮ ಅಹಂ ಅದನ್ನು ಒಪ್ಪಿಕೊಳ್ಳಲು ಬಿಡುವುದಿಲ್ಲ. ಹೀಗೇ ನಮ್ಮ ಮಾತು ಕೆಲಸಕ್ಕೆ ಬಾರದು ಎಂಬುದು ಪದೇಪದೆ ಗೊತ್ತಾಗುತ್ತಾ ಹೋದಹಾಗೆ ನಾವು ಯಾರಿಗೂ ಬೇಡದವರಾಗಿಬಿಡುತ್ತೇವೆ. ಕ್ರಮೇಣ ಇತರರು ನಮ್ಮ ಮಾತು ಕೇಳುವುದಕ್ಕೆ ಇಷ್ಟವೇ ಪಡುವುದಿಲ್ಲ. ಒಂದು ಸಲ ಈ ರೀತಿಯ ಭಾವನೆ ಮೂಡಿದರೆ ಮುಂದೆ ಅದು ಸರಿಪಡಿಸಲಾಗದ ಹಂತಕ್ಕೆ ಹೋಗಿಬಿಡಬಹುದು.

ನಮ್ಮ ಈ ಅಹಂಗೆ ನಮ್ಮ ನೋಟವೂ ಕಾರಣವಾಗಿರಬಹುದು. ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡಬೇಕು ಎಂಬ ಬುದ್ಧಿವಂತಿಕೆಯ ಮಾತಿದೆ. ನಾವು ಕಂಡದ್ದೇ ಸತ್ಯವಾಗಿರುವುದಿಲ್ಲ. ನಾವು ಕಂಡದ್ದು ಸತ್ಯದ ಒಂದು ಭಾಗವಾಗಿರಬಹುದು ಅಷ್ಟೆ. ಆದರೆ ಅದೇ ಸತ್ಯವಾಗಿರುವುದಿಲ್ಲ. ಇಂತಹ ಸಮಯದಲ್ಲಿ ನಾನು ಕಂಡಿದ್ದೇ ಸತ್ಯ ಎಂದು ವಾದಿಸುವುದು ಮೂರ್ಖತನವಾಗಿ ಬಿಡುತ್ತದೆ. ಅನೇಕ ಸಲ ನ್ಯಾಯಾಲಯದಲ್ಲೇ ಹೊಡೆದಾಟಗಳು, ಕೊಲೆಯ ಪ್ರಯತ್ನಗಳು ಆಗುತ್ತವೆ. ನ್ಯಾಯಾಧೀಶರ ಮುಂದೆಯೇ ಇಂತಹುದು ಆಗಿಬಿಡಬಹುದು. ಆದರೆ ನ್ಯಾಯಾಧೀಶರು ಘಟನೆ ನಡೆದ ತಕ್ಷಣವೇ ಅದು ತಪ್ಪು ಎಂದು ತೀರ್ಪು ನೀಡುವುದಿಲ್ಲ. ಆ ಘಟನೆ ಏಕಾಯಿತು, ಅದರ ಹಿನ್ನೆಲೆ ಏನು, ತಪ್ಪು ಮಾಡಿದವನ ಮನಸ್ಥಿತಿ ಹೇಗಿತ್ತು ಎಂಬುದನ್ನೆಲ್ಲಾ ಅವಲೋಕಿಸದ ನಂತರವೇ ತೀರ್ಪು ನೀಡುತ್ತಾರೆ. ಆದ್ದರಿಂದ ನಮ್ಮ ಕಣ್ಣಿಗೆ ಕಂಡದ್ದೇ ಸರಿ ಎಂದು ವಾದ ಮಾಡಲು ಹೋಗಬಾರದು. ಹೀಗೆ ಕಣ್ಣಿಗೆ ಕಂಡದ್ದೇ ಸರಿ ಎಂದು ನಾವು ವಾದ ಮಾಡಿ ಇಕ್ಕಟ್ಟಿಗೆ ಸಿಲುಕಿಕೊಳ್ಳುತ್ತೇವೆ. ಇದು ಕೆಲವೊಮ್ಮೆ ಅಪಹಾಸ್ಯಕ್ಕೂ ಕಾರಣವಾಗಿ ಬಿಡಬಹುದು. ಆದ್ದರಿಂದ ಕಣ್ಣಿಗೆ ಕಂಡಿದ್ದೆಲ್ಲವೂ ನಿಜವಲ್ಲ, ಅದರ ಹಿಂದು–ಮುಂದುಗಳನ್ನು ಅವಲೋಕಿಸಬೇಕು.

ಇತ್ತೀಚೆಗೆ ಓದಿದ ಒಂದು ಪ್ರಸಂಗ ಇಂತಹ ಮನೋಭಾವವನ್ನು ತೆರೆದಿಡುತ್ತದೆ. ಒಬ್ಬರು ವ್ಯಕ್ತಿ ತಮ್ಮ ಪತ್ನಿಯೊಡನೆ ರೈಲಿನಲ್ಲಿ ಪ್ರಯಾಣಿಸುತ್ತಾರೆ. ಕೆಲವು ಸಮಯದ ನಂತರ ಅವರಿಬ್ಬರಿಗೂ ಕಾಫಿ ಕುಡಿಯಬೇಕೆನಿಸುತ್ತದೆ. ರೈಲು ಒಂದು ನಿಲ್ದಾಣದಲ್ಲಿ ನಿಲ್ಲುತ್ತದೆ. ಇವರು ಕುಳಿತ ಬೋಗಿ ಇಂಜಿನಿನ ನಂತರದ್ದು, ಅಲ್ಲಿಗೆ ಕಾಫಿ/ಟೀ ಮಾರುವವರು ಬರುವುದು ಕಡಿಮೆಯೇ. ಇವರು ಕಾಫಿ ಕುಡಿಯಲು ಬಯಸಿದಂತೆ ಒಬ್ಬ ಫುಟ್ ಪಾತಿನಲ್ಲಿ ಕಾಫಿ ಮಾರಲು ಬರುತ್ತಾನೆ. ಇವರು ಎರಡು ಕಾಫಿ ಕೊಡಲು ಕೋರುತ್ತಾರೆ, ಅದರಂತೆ ಕಾಫಿ ಪಡೆದ ನಂತರ ಹಣ ಪಾವತಿಸಲು ಹೋದಾಗ ಇವರಲ್ಲಿ ಇನ್ನೂರು ರೂಪಾಯಿಯ ನೋಟು ಮಾತ್ರ ಇರುತ್ತದೆ, ಚಿಲ್ಲರೆ ಹಣ ಇರುವುದಿಲ್ಲ. ಬೆಲೆ ಎಷ್ಟಾಯಿತು ಎಂದಾಗ ಕಾಫಿ ಮಾರುವವ ಇಪ್ಪತ್ತು ರೂಪಾಯಿ ಎನ್ನುತ್ತಾನೆ. ಇವರು ಅವನಿಗೆ ಇನ್ನೂರು ರೂಪಾಯಿಯ ನೋಟು ನೀಡಿ ತನ್ನಲ್ಲಿ ಚಿಲ್ಲರೆ ಇಲ್ಲ, ಉಳಿದ ಚಿಲ್ಲರೆ ಕೊಡಿ ಎನ್ನುತ್ತಾರೆ. ಆತ ಹಣ ಪಡೆದು ಚಿಲ್ಲರೆ ಎಣಿಸಿ ನೀಡಬೇಕೆನ್ನುವಷ್ಟರಲ್ಲಿ ರೈಲು ಹೊರಟುಬಿಡುತ್ತದೆ. ಕಾಫಿ ಮಾರುವವನು ಹಣ ವಾಪಸ್ಸು ನೀಡಲು ಪ್ರಯತ್ನಿಸಿದರೂ ಸಾಧ್ಯವಾಗುವುದಿಲ್ಲ. ಇದರಿಂದ ಇವರಿಗೆ ಸ್ವಲ್ಪ ಬೇಸರವಾಗುತ್ತದೆ. ನಾನು ಮೊದಲು ಅವನಲ್ಲಿ ಚಿಲ್ಲರೆ ಇದೆಯೇ? ಎಂದು ಕೇಳಬೇಕಾಗಿತ್ತು ಎನಿಸುತ್ತದೆ. ಪಕ್ಕದಲ್ಲಿದ್ದ ಪತ್ನಿ ಇದನ್ನು ಮೂರ್ಖತನ ಎಂದು ಭಾವಿಸುತ್ತಾಳೆ. ಆತ ಬೇಕೆಂದೇ ಚಿಲ್ಲರೆ ನೀಡಲು ತಡಮಾಡಿದ. ಇದು ಉದ್ದೇಶಪೂರ್ವಕವಾದದ್ದು, ಹೀಗೆ ದಿನಕ್ಕೆ ಹತ್ತಾರು ಜನರಿಗೆ ಮೋಸ ಮಾಡಿ ಇಂತಹವರು ಜೀವನ ಮಾಡುತ್ತಾರೆ ಎಂಬ ಅಭಿಪ್ರಾಯ ನೀಡುತ್ತಾಳೆ. ರೈಲಿನಲ್ಲಿದ್ದ ಉಳಿದ ಪ್ರಯಾಣಿಕರೂ ಅದೇ ರೀತಿಯ ಅಭಿಪ್ರಾಯ ನೀಡುತ್ತಾರೆ. ಇವರಿಗೆ ತಾನು ತಪ್ಪು ಮಾಡಿದೆನೇನೋ ಎನಿಸುತ್ತದೆ, ಆದರೆ ಅವರಿಗೆ ಕಾಫಿ ಮಾರುತ್ತಿದ್ದವನ ಬಗ್ಗೆ ತಪ್ಪು ಅಭಿಪ್ರಾಯ ಮೂಡುವುದಿಲ್ಲ. ಸುಮ್ಮನೆ ಅವನ ಪ್ರಾಮಾಣಿಕತೆ ಪ್ರಶ್ನಿಸಿದಂತೆ ಆಗುತ್ತಿದೆ ಎನಿಸುತ್ತದೆ. ರೈಲಿನಲ್ಲಿ ಅವರ ಪತ್ನಿ ಬಹಳ ಹೊತ್ತು ಹೀಗೇ ವಾದ ಮಾಡುತ್ತಾ, ಪತಿಯನ್ನು ಪೇಚಿಗೆ ಸಿಲುಕಿಸುತ್ತಾಳೆ, ಇತರೆ ಪ್ರಯಾಣಿಕರೂ ಇವರ ದಡ್ಡತನವನ್ನು ಹಾಸ್ಯ ಮಾಡಿ ಮುಸುಮುಸು ನಗುತ್ತಾರೆ. ಕೆಲ ಸಮಯದ ನಂತರ ಎಲ್ಲರಿಗೂ ಈ ವಿಷಯ ಮರೆತುಹೋಗುತ್ತದೆ. ಆದರೆ ಆ ಪತಿಗೆ ಮಾತ್ರ ಒಳಗೊಳಗೇ ಅವಮಾನವಾದಂತಾಗುತ್ತದೆ. ಮುಂದಿನ ಎರಡು ನಿಲ್ದಾಣದ ನಂತರ ಒಬ್ಬ ಯುವಕ ಅವರ ಬಳಿ ಬಂದು ನೀವು ಕಾಫಿಗೆ ಇಪ್ಪತ್ತರ ಬದಲು ಇನ್ನೂರು ರೂಪಾಯಿಯ ನೋಟು ನೀಡಿದವರಲ್ಲವೇ? ನಿಮಗೆ ಉಳಿಕೆ ಚಿಲ್ಲರೆ ಸಿಗಲಿಲ್ಲ ಅಲ್ಲವೇ? ಎನ್ನುತ್ತಾನೆ. ಆಗ ಈತ ಹೌದು ಆದರೆ ನಾನು ಹಣ ನೀಡಿದ್ದು ಬೇರೆಯವರಿಗೆ ಎನ್ನುತ್ತಾನೆ. ಆಗ ಆ ಯುವಕ ಅವರು ನನ್ನ ತಂದೆ, ಅವರೊಬ್ಬ ಪ್ರಾಮಾಣಿಕ ಮನುಷ್ಯ. ಹಲವು ಸಲ ಹೀಗೆ ಆಗುತ್ತದೆ. ಆ ನಿಲ್ದಾಣದಲ್ಲಿ ರೈಲು ಹೆಚ್ಚುಹೊತ್ತು ನಿಲ್ಲುವುದಿಲ್ಲ. ಕೆಲವರು ಹೀಗೆ ಹೆಚ್ಚು ಹಣ ನೀಡುತ್ತಾರೆ, ಚಿಲ್ಲರೆ ಕೊಡುವುದರಲ್ಲಿ ರೈಲು ಹೊರಟುಬಿಡುತ್ತದೆ. ಇಂತಹುದನ್ನು ನಿರೀಕ್ಷಿಸಿ ನಾನು ಅದೇ ರೈಲಿನಲ್ಲಿ ಪ್ರಯಾಣಿಸುತ್ತೇನೆ. ನಾನು ತಂದೆಯವರಿಗೆ ಸಹಾಯಕನಾಗಿ ಕೆಲಸ ಮಾಡುತ್ತೇನೆ. ತಂದೆಯವರು ದೂರವಾಣಿಯಲ್ಲಿ ನನಗೆ ವಿಷಯ ತಿಳಿಸುತ್ತಾರೆ, ಇಂತಹ ಸಂದರ್ಭ ಬಂದಾಗ ನಾನು ಆ ರೀತಿ ಹಣ ಬಾಕಿ ಕೊಡಬೇಕಾದವರನ್ನು ಹುಡುಕಿ ಹಣ ತಲುಪಿಸುತ್ತೇನೆ, ಎಂದು ಹೇಳಿ ನೂರೆಂಭತ್ತು ರೂಪಾಯಿಯನ್ನು ಹಿಂದಿರುಗಿಸಿ, ನಡೆದ ಘಟನೆಗಾಗಿ ಕ್ಷಮಾಪಣೆ ಕೇಳುತ್ತಾನೆ. ಇದನ್ನು ಕೇಳಿ ಇವರಿಗೆ ರೋಮಾಂಚನವಾಗುತ್ತದೆ. ಅವನ ತಂದೆಯ ಮೊಬೈಲ್ ನಂಬರು ಪಡೆದು ಕರೆ ಮಾಡಿ ತಮ್ಮ ಸಂತೋಷ ವ್ಯಕ್ತಪಡಿಸುತ್ತಾರೆ. ಇದನ್ನು ಕಂಡ ಆತನ ಪತ್ನಿ ಹಾಗೂ ಸಹಪ್ರಯಾಣಿಕರು ಸಂಕೋಚದಿಂದ ತಲೆ ತಗ್ಗಿಸುತ್ತಾರೆ. ಹೀಗೆ ವಾಸ್ತವತೆ ಅರಿಯದೇ ಅಭಿಪ್ರಾಯ ನೀಡಿದಾಗ ಮುಜುಗರ ಅನುಭವಿಸಬೇಕಾಗುತ್ತದೆ.

ಇದನ್ನೇ ಮಾನವೀಯ ಸಂಬಂಧ ಎನ್ನುವುದು. ಇತ್ತೀಚೆಗೆ ನಮಗೆ ಎಲ್ಲೆಲ್ಲೂ ಮೋಸ ಮಾಡುವವರೇ ಕಂಡುಬರುವುದರಿಂದ ನಾವು ಪ್ರಾಮಾಣಿಕರನ್ನೂ ಸಂದೇಹದಿಂದ ಕಾಣುವಂತೆ ಆಗುತ್ತದೆ. ಆದರೆ ಮೋಸ ಮಾಡುವವರ ಸಂಖ್ಯೆ ಶೇಕಡಾ ಐದೋ, ಹತ್ತೋ ಆಗಿರುತ್ತದೆ. ಉಳಿದಂತೆ ನಾವು ಎಲ್ಲರನ್ನು ಅನುಮಾನದಿಂದ ಕಂಡಾಗ ಪ್ರಾಮಾಣಿಕತೆಗೇ ಅವಮಾನ ಮಾಡಿದಂತೆ ಆಗುತ್ತದೆ.

ಮಾನವೀಯ ಸಂಬಂಧಗಳ ಬಗ್ಗೆ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಹೇಳಿದ್ದ ಒಂದು ಘಟನೆ ಕಣ್ಣು ತೆರೆಸುವಂತೆ ಇದೆ. ಅವರು ಹೇಳುತ್ತಿದ್ದರು: 'ನನ್ನ ಗಂಡ ನನಗಿಂತ ಮೊದಲೇ ಸಾಯಲಿ ಎಂದು ಬಯಸಿದ್ದ ಒಬ್ಬ ಹೆಂಡತಿಯ ಕಥೆಯದು. ನನ್ನ ಗಂಡ ನನಗಿಂತ ಮೊದಲೇ ಸಾಯಲಿ ಎಂಬ ಮಾತು ಕೇಳಿದಾಗ ನಂಬಲು ಕಷ್ಟವಾಗುತ್ತದೆ. ಸಾಮಾನ್ಯವಾಗಿ ಹೆಂಗಸರು ತಮಗೆ ಮುತ್ತೈದೆ ಸಾವು ಬರಬೇಕು, ಆದ್ದರಿಂದ ಗಂಡ ಉಳಿಯಬೇಕು ಎಂದು ಕೇಳಿಕೊಳ್ಳುವುದು ಸಹಜ, ಹಾಗಿರುವಾಗ ಇಂತಹ ಕ್ರೂರಿ ಹೆಂಗಸರೂ ಇದ್ದಾರಲ್ಲಾ ಎಂದು ಕೇಳಿದ ಕೂಡಲೇ ಅನಿಸುತ್ತದೆ. ಆ ಸಮಯದಲ್ಲಿ ಮಾಸ್ತಿಯವರು ಉಪವಿಭಾಗಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದರು. ಅವರ ಪ್ರವಾಸದ ಸಮಯದಲ್ಲಿ ಒಂದು ಗ್ರಾಮಕ್ಕೆ ಹೋಗಿದ್ದಾಗ 80 ವರ್ಷದ ಒಬ್ಬ ವೃದ್ಧರೊಬ್ಬರು ತೀರಿಕೊಂಡಿದ್ದಾರೆ, ಅವರ ಹೆಂಡತಿಗೂ ಹೆಚ್ಚೂ ಕಡಿಮೆ ಅದೇ ವಯಸ್ಸು. ಆ ದಂಪತಿಗಳು ಸುಮಾರು 65 ವರ್ಷಕ್ಕೂ ಹೆಚ್ಚಿನ ಸಮಯದಿಂದ ಒಟ್ಟಿಗೆ ಸಂಸಾರ ನಡೆಸಿದ್ದರು. ಗಂಡ ತೀರಿಕೊಂಡಿದ್ದರೂ ಆಕೆ ಸ್ವಲ್ಪವೂ ಕಣ್ಣೀರು ಸುರಿಸದೇ ಗಂಭೀರವಾಗಿ ಪತಿಯ ಮೃತದೇಹದ ಬಳಿ ಕುಳಿತಿದ್ದಾಳೆ, ಸಾಧ್ಯವಾದರೆ ನೀವು ಹೋಗಿ ಅವರಿಗೆ ಸಾಂತ್ವನ ಹೇಳಬಹುದು ಎಂದು ಅವರ ಸಹಾಯಕರು ಹೇಳಿದರು. ಅದರಂತೆ ಮಾಸ್ತಿಯವರು ಅವರ ಮನೆಗೆ ಹೋದರು. ಆ ವೃದ್ಧೆಗೆ ಅವರು ಹೇಳಿದರು: 'ತಾಯಿ! ಆರೇಳು ದಶಕಗಳ ಕಾಲ ಸಂಸಾರ ಮಾಡಿದ್ದ ನಿಮಗೆ ನಿಮ್ಮ ಪತಿಯ ಸಾವು ತೀವ್ರ ಆಘಾತವನ್ನುಂಟು ಮಾಡಿರುವುದು ಸಹಜ. ಆದರೆ ದುಃಖವನ್ನು ಹೀಗೆ ಅದುಮಿಟ್ಟುಕೊಳ್ಳಬಾರದು. ಅದನ್ನು ಹೊರಗೆ ಚೆಲ್ಲಬೇಕು, ಅತ್ತುಬಿಡಿ' ಎಂದರು. ಅದಕ್ಕೆ ಆಕೆ ಕೊಟ್ಟ ಉತ್ತರವೇನೆಂದರೆ 'ನಾವು ಮದುವೆಯಾದ ಮೊದಲ ದಿನದಿಂದಲೂ ಅವರ ಸ್ನಾನಕ್ಕೆ ನೀರು ಸಿದ್ಧಪಡಿಸುವುದರಿಂದ ಹಿಡಿದು ಎಲ್ಲಾ ಕೆಲಸವನ್ನೂ ನಾನೇ ಮಾಡುತ್ತಿದ್ದೆ. ಅವರಿಗೆ ವಯಸ್ಸಾದ್ದರಿಂದ ಇತ್ತೀಚೆಗೆ ಎಲ್ಲದಕ್ಕೂ ನನ್ನನ್ನೇ ಅವಲಂಬಿಸಿದ್ದರು. ಆಕಸ್ಮಿಕವಾಗಿ ಅವರಿಗಿಂತ ನನಗೆ ಮೊದಲು ಸಾವು ಬಂದರೆ ಅವರ ಯೋಗಕ್ಷೇಮ ನೋಡಿಕೊಳ್ಳುವವರಾರು? ಎಂಬ ಚಿಂತೆ ನನಗಿತ್ತು. ಹಾಗಾಗಿ ಅವರು ನನಗಿಂತ ಮೊದಲು ಪ್ರಾಣಬಿಡಲಿ ಎಂದು ಯೋಚಿಸುತ್ತಿದ್ದೆ, ಅದರಂತೆ ಅವರು ನನಗಿಂತ ಮುಂಚೆ ಪ್ರಾಣ ಬಿಟ್ಟಿದ್ದಾರೆ. ನನ್ನ ಪ್ರಾರ್ಥನೆಯನ್ನು ದೇವರು ಈಡೇರಿಸಿದ್ದಾನೆ. ನನ್ನ ಆತಂಕ, ಚಿಂತೆ ದೂರವಾಗಿದೆ. ನನ್ನ ಬದುಕು ಹೇಗೋ ಸಾಗುತ್ತದೆ. ನನ್ನ ಪ್ರಾರ್ಥನೆಯನ್ನು ದೇವರು ಕೇಳಿದ್ದಾನೆ, ಆದ್ದರಿಂದ ನಾನೇಕೆ ಅಳಬೇಕು?' ಎಂದು ಕೇಳಿದಳಂತೆ. ಮಾಸ್ತಿಯವರಿಗೆ ಏನು ಹೇಳಬೇಕೋ ತೋಚಲಿಲ್ಲ. ಬದಲಾಗಿ ಆಕೆಯ ಕಾಲಿಗೆ ನಮಸ್ಕರಿಸಿ ಹೊರಟರಂತೆ. ಅದಾದ ಸ್ವಲ್ಪ ಹೊತ್ತಿನಲ್ಲೇ ಅವರಿಗೆ ಮತ್ತೊಂದು ಆಘಾತದ ಸುದ್ದಿ ಬಂತು. ಆ ಹೆಂಗಸೂ ತೀರಿಕೊಂಡರು ಎಂದು. ಅವರಿಬ್ಬರ ಅಂತ್ಯಕ್ರಿಯೆ ಒಟ್ಟಾಗಿ ಆಯಿತು' ಎಂಬುದು ಆ ಘಟನೆ. ಇಂತಹ ಹಲವು ಘಟನೆಗಳು ನಮ್ಮ ಸುತ್ತಾ ನಡೆಯುತ್ತಿರುತ್ತವೆ. ನಾವು ಗಮನಿಸುವುದಿಲ್ಲ ಅಷ್ಟೆ.

ಹೀಗೆ ನಮ್ಮ ನಡುವೆ ಮಾನವೀಯ ಬಾಂಧವ್ಯ ಇಟ್ಟುಕೊಂಡಿರುವವರು ಸಾಕಷ್ಟು ಜನರು ಕಾಣಸಿಗುತ್ತಾರೆ. ಎಲ್ಲವನ್ನೂ ದುಡ್ಡಿನಿಂದ ಅಳೆಯಲಾಗದ ಇಂತಹ ಸಂಬಂಧಗಳನ್ನು ನಾವು ಕಾಣಬಹುದು. ಎಲ್ಲರೂ ಮೋಸಗಾರರು ಎಂದೇನೂ ಇಲ್ಲ. ಸಾಮಾನ್ಯವಾಗಿ ನಮ್ಮ ಮನೋಭಾವದಂತೆಯೇ ನಮಗೆ ಜನರು ಸಿಗುತ್ತಾರೆ ಎಂದು ಹೇಳಲಾಗುತ್ತದೆ. ಆದರೂ ಎಚ್ಚರಿಕೆ ವಹಿಸಬೇಕು ಎಂಬುದಂತೂ ನಿಜವೇ ಆದರೂ ಎಲ್ಲವನ್ನೂ, ಎಲ್ಲರನ್ನೂ ಅನುಮಾನದಿಂದ ನೋಡದೆ, ಮಾನವೀಯ ಸಂಬಂಧಗಳನ್ನು ವೃದ್ಧಿಗೊಳಿಸುವ ಕಡೆಗೆ ಗಮನ ಹರಿಸುವುದು ಸೂಕ್ತ.

ಹುಣಸೂರು ತಾಲೂಕು ಪಂಚಾಯಿತಿ ಸಾಮಾನ್ಯ ಸಭೆ

ನೀರಿನ ಬವಣೆ ಎದುರಾಗದಂತೆ ಕ್ರಮ ವಹಿಸಲು ತಾಪಂ ಇಓ ಸೂಚನೆ



ಹುಣಸೂರು, ಅ.5– ಮಳೆ ಪ್ರಮಾಣ ಕಡಿಮೆಯಾಗಿದ್ದು, ಮುಂದಿನ ದಿನಗಳಲ್ಲಿ ಜನ–ಜಾನುವಾರುಗಳಿಗೆ ನೀರಿನ ಬವಣೆ ಎದುರಾಗದಂತೆ ಕ್ರಮವಹಿಸಬೇಕು, ಸಂದಿಗ್ಧ ಪರಿಸ್ಥಿತಿ ಎದುರಿಸಲು ತಾಲೂಕು ಆಡಳಿತ ಸನ್ನದ್ಧವಾಗುವಂತೆ ತಾಲೂಕು ಪಂಚಾಯಿತಿ ಆಡಳಿತಾಧಿಕಾರಿ ಸಿದ್ದಗಂಗಮ್ಮ ಸೂಚಿಸಿದರು.

ನಗರದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ ತಾಪಂ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು, ಈ ಸಾಲಿನಲ್ಲಿ ಮಳೆ ಕೊರತೆಯಾಗಿದ್ದು, ಕುಡಿಯುವ ನೀರಿನ ಸಮಸ್ಯೆ ಎದುರಾಗದಂತೆ ಕ್ರಮವಹಿಸುವಂತೆ ಸೂಚಿಸಿದರು. ಜಿಪಂ ಕುಡಿಯುವ ನೀರು ವಿಭಾಗದ ಎಇಇ ಮಹಮದ್ ಕಲೀಂ ಮಾತನಾಡಿ, ತಾಲೂಕಿನಲ್ಲಿ ಜೆಜೆಎಂ ಯೋಜನೆಯಲ್ಲಿ 316 ಗ್ರಾಮಗಳಿಗೆ ಕುಡಿಯುವ ನೀರಿನ ಸಂಪರ್ಕ ಕಾಮಗಾರಿ ವಿವಿಧ ಹಂತದಲ್ಲಿ ಪ್ರಗತಿಯಲ್ಲಿದೆ. ಈ ಪೈಕಿ ಬಿಳಿಕೆರೆ ಹೋಬಳಿ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ನೀಗಿಸಲಾಗಿದೆ ಎಂದರು.

ಹಳ್ಳಿಗಳಿಗೆ ಕಾವೇರಿ ನೀರು ಪೂರೈಕೆ: ತಾಲೂಕಿನಲ್ಲಿ ನೀರಿನ ಸಮಸ್ಯೆ ಎದುರಾಗಬಹುದಾದ 13 ಗ್ರಾಮಗಳನ್ನು ಗುರುತಿಸಿದ್ದು, ಪರ್ಯಾಯ ವ್ಯವಸ್ಥೆ ಮಾಡಲು ಸಿದ್ಧರಿದ್ದೇವೆ. ಮುಂದಿನ 8 ತಿಂಗಳೊಳಗಾಗಿ ತಾಲೂಕಿನ ಪ್ರತಿಯೊಂದು ಗ್ರಾಮಕ್ಕೂ ಕಾವೇರಿ ಕುಡಿಯುವ ನೀರು ಸರಬರಾಜಿಗೆ ಸಿದ್ಧತೆ ನಡೆದಿದೆ ಎಂದು ತಿಳಿಸಿದರು.

30 ಕೋಟಿ ರೂ. ವಿದ್ಯುತ್ ಬಿಲ್ ಬಾಕಿ: ಸೆಸ್ಕ್ ಎಇಇ ಸಿದ್ದಪ್ಪ ಮಾತನಾಡಿ, ಗ್ರಾಪಂಗಳವರು ಕುಡಿಯುವ ನೀರು, ಬೀದಿದೀಪದ ಬಿಲ್ ಬಾಕಿ ಪಾವತಿಗಾಗಿ ನೋಟೀಸ್ ನೀಡಿದ್ದರೂ ಈವರೆಗೂ ಪಾವತಿಸಿಲ್ಲ. ಹುಣಸೂರು ಮತ್ತು ಬಿಳಿಕೆರೆ ವಿಭಾಗದಿಂದ ಒಟ್ಟು 31 ಕೋಟಿ ರೂ. ಬಿಲ್ ಬಾಕಿ ಉಳಿದಿದೆ. ವಿದ್ಯುತ್ ಸರಬರಾಜು ಸ್ಥಗಿತಗೊಳಿಸಲು ಆದೇಶವಿದೆ. ಬಾಕಿ ಪಾವತಿಗೆ ಗ್ರಾಪಂಗಳವರಿಗೆ ಸೂಚನೆ ನೀಡಬೇಕೆಂದರು. ತಾ.ಪಂ. ಕಾರ್ಯನಿರ್ವಹಣಾಧಿಕಾರಿ ಮನು ಉತ್ತರಿಸಿ, ಅ.12 ರಂದು ಗ್ರಾಪಂ ಪಿಡಿಓಗಳೊಂದಿಗೆ ಸಭೆ ನಡೆಸಿ ಬಿಲ್ ಬಾಕಿ ಪಾವತಿಸಲು ಕ್ರಮವಹಿಸುತ್ತೇನೆ ಎಂದರು.

ಹಾಸ್ಟೆಲ್ ಕರೆಂಟ್ ಕಟ್ ಮಾಡಬೇಡಿ, ಬಿಇಓ ಮನವಿ: ಬಿಇಓ ರೇವಣ್ಣ ಮಾತನಾಡಿ, ರತ್ನಪುರಿಯ ಕಿತ್ತೂರು ರಾಣಿ ಚೆನ್ನಮ್ಮ ಬಾಲಕಿಯರ ಹಾಸ್ಟೆಲ್ ಬಳಿ ಹುಡುಗರ ಹಾವಳಿ ಜಾಸ್ತಿಯಾಗಿದೆ. ಹೀಗಾಗಿ ಹಾಸ್ಟೆಲ್‌ನ ಕಾಂಪೌಂಡ್ ಎತ್ತರಿಸಬೇಕು, ಚೆಸ್ಕಾಂನವರು ಬಿಲ್ ಕಟ್ಟಿಲ್ಲವೆಂದು ಕರೆಂಟ್ ಕಟ್ ಮಾಡಲು ಬಂದಿದ್ದಾರೆ. ನಮ್ಮಲ್ಲಿ ಹಣವಿದೆ. ಆದರೆ ತಾಂತ್ರಿಕ ಸಮಸ್ಯೆಯಿಂದ ಬಿಲ್ ಪಾವತಿಸಲು ತಡವಾಗುತ್ತಿದೆ. ಬಾಲಕಿಯರ ಹಿತದೃಷ್ಟಿಯಿಂದ ವಿದ್ಯುತ್ ಸ್ಥಗಿತಗೊಳಿಸದಂತೆ ಮನವಿ ಮಾಡಿದರೆ, ಚೆಸ್ಕಾಂ ಎಇಇ ಸಿದ್ದಪ್ಪ ಅವರು, ಹಣವಿದ್ದರೆ ಕಟ್ಟಬೇಕು. ಹಿರಿಯ ಅಧಿಕಾರಿಗಳ ಆದೇಶದಂತೆ ಆರೋಗ್ಯ, ಪೊಲೀಸ್ ಹಾಗೂ ನ್ಯಾಯಾಲಯ ಹೊರತಾಗಿ ಎಲ್ಲರೂ ಕಾಲಕಾಲಕ್ಕೆ ಪಾವತಿಸಬೇಕು. ಇಲ್ಲದಿದ್ದಲ್ಲಿ ವಿದ್ಯುತ್ ಸ್ಥಗಿತವಾಗಲಿದೆ ಎಂದರು.

ಬೆಳೆಗಳು ಒಣಗುತ್ತಿವೆ, 5.89 ಕೋಟಿ ನಷ್ಟ: ತಾಲೂಕಿನಲ್ಲಿ ನಿರೀಕ್ಷಿತ ಮಳೆ ಇಲ್ಲದೆ ವಾಣಿಜ್ಯ ಬೆಳೆ ಮುಸುಕಿನಜೋಳ 6635 ಸಾವಿರ ಹೆಕ್ಟೇರ್ ಹಾಗೂ ಹತ್ತಿ 485 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ 12,808 ರೈತರು ಬೆಳೆ ಒಣಗಿದ್ದು, ಅಂದಾಜು 5.89 ಕೋಟಿ ನಷ್ಟವಾಗಿದೆ ಎಂದು ಅಂದಾಜಿಸಿ ಪರಿಹಾರಕ್ಕೆ ವರದಿ ಸಲ್ಲಿಸಲಾಗಿದೆ ಎಂದು ಕೃಷಿ ಇಲಾಖೆ ಅಧಿಕಾರಿ ವೆಂಕಟಾಚಲ ಮಾಹಿತಿ ನೀಡಿದರು.

ವಿವಿಧ ಇಲಾಖೆ ಅಧಿಕಾರಿಗಳು ಆಯಾಯ ಇಲಾಖೆಗಳ ಮಾಹಿತಿ ನೀಡಿದರು. ತಾಲೂಕು ಯೋಜನಾಧಿಕಾರಿ ರಾಜೇಶ್ ಇದ್ದರು.

ಒಂದನೇ ಪುಟದಿಂದ

ಮುಂಗಾರು ಬೆಳೆಗೆ ನೀರಿನ ಕೊರತೆ ಇಲ್ಲ

ರಾಜ್ಯದಲ್ಲಿ ನೀರಾವರಿ ವಿಚಾರವಾಗಿ ರಾಜಕೀಯ ಮಾಡುತ್ತಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಮಾಡಲಿ ಬಿಡಿ. ಅವರು ಕೂಡ ಸಾರ್ವಜನಿಕವಾಗಿ ಗುರುತಿಸಿಕೊಳ್ಳಲು ಕೆಲಸ ಬೇಕಲ್ಲವೇ? ಅವರ ಧ್ವನಿ ನಿಲ್ಲಿಸಲು ಆಗುತ್ತದೆಯೇ? ನಮ್ಮ ಕೆಲಸ ನಾವು ಮಾಡೋಣ ಎಂದರು. ನಿಮ್ಮಷ್ಟು ಮುಖ್ಯಮಂತ್ರಿಗಳು ಸಮರ್ಥನೆ ಮಾಡಿಕೊಳ್ಳುತ್ತಿಲ್ಲ ಎಂದು ಕೇಳಿದಾಗ, ನೀರಾವರಿ ಸಚಿವನಾಗಿ ನಾನು ಇದ್ದೇನೆ. ನಾನು ಸಮರ್ಥನೆ ಮಾಡಿಕೊಳ್ಳುತ್ತಿದ್ದೇನೆ ಎಂದರು. ತಮಿಳುನಾಡಿಗೆ ನೀರು ಹರಿಸುವ ಹಾಗೂ ಮೇಕೆದಾಟು ವಿಚಾರವಾಗಿ ಕೇಳಿದಾಗ, ತಮಿಳುನಾಡಿಗೆ 3 ಸಾವಿರ ಕ್ಯೂಸೆಕ್ ನೀರು ಹರಿಬಿಡಲು ನಮ್ಮಲ್ಲಿ ನೀರಿಲ್ಲ ಎಂದು ಮೇಲ್ಮನವಿ ಸಲ್ಲಿಸಿದ್ದೇವೆ. ಮೇಕೆದಾಟು ಯೋಜನೆ ಜಾರಿ ಪ್ರಸ್ತಾವನೆಯನ್ನು ಮಾಡಿದ್ದು, ಇದಕ್ಕೆ ಸಂಬಂಧಿಸಿದಂತೆ ಕಾನೂನು ಸಿದ್ಧತೆ ಮಾಡುತ್ತಿದ್ದೇವೆ. ಹಂತಹಂತವಾಗಿ ನಾವು ಹೋಗಬೇಕು. ಕರ್ನಾಟಕ ಸರ್ಕಾರ ಎಲ್ಲರ ಅನುಭವ, ಅಭಿಪ್ರಾಯ ಪಡೆದು ಎಚ್ಚರಿಕೆಯಿಂದ ಹೆಜ್ಜೆ ಇಡುತ್ತಿದೆ ಎಂದು ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು ಹೇಳಿಲ್ಲವೇ? ಎಂದು ಪ್ರಶ್ನಿಸಿದರು.

ಸಿಬಿಐನಿಂದ FIR ದಾಖಲು

ಒಟ್ಟು 300 ಕೋಟಿ ರೂ.ಗಳ ಅಕ್ರಮ ನಡೆದಿದ್ದು, ಈ ಕುರಿತು ಪ್ರಕರಣ ದಾಖಲಿಸಲಾಗಿದೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಅಕ್ರಮ ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ ಇತ್ತೀಚಿಗೆ ಕೆಎಸ್‌ಓಯು ನಿರ್ದೇಶಕರ ಮಂಡಳಿಯು, ಸಿಬಿಐ ತನಿಖೆಗೆ ಒತ್ತಾಯಿಸಿತ್ತು. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಪ್ರಕರಣವನ್ನು ಸಿಬಿಐಗೆ ವಹಿಸಿದೆ.

ಮಹಾನಗರ ಪಾಲಿಕೆ ಪ್ರಶಸ್ತಿಗೆ ಭಾಜನ

ಪ್ರಶಸ್ತಿಯನ್ನು ಸ್ವೀಕರಿಸಿದರು. ನಗರಪಾಲಿಕೆಯ ಉಪ ಆಯುಕ್ತ (ಆಡಳಿತ) ಸೋಮಶೇಖರ್ ಅವರೂ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ದೂರವಾಣಿ ಮೂಲಕ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಪಾಲಿಕೆಯ ಉಪ ಆಯುಕ್ತ (ಆಡಳಿತ) ಸೋಮಶೇಖರ್, ಇಂಟಿಗ್ರೇಟೆಡ್ ಗವರ್ನಮೆಂಟ್ ಆನ್‌ಲೈನ್ ಟ್ರೇನಿಂಗ್–ಮಿಷನ್ ಕರ್ಮಯೋಗಿ (ಐಜಿಓಟಿ–ಕರ್ಮಯೋಗಿ) ಎಂಬುದು ಕೇಂದ್ರ ಸರ್ಕಾರದ ಆನ್‌ಲೈನ್ ತರಬೇತಿ ಕಾರ್ಯಕ್ರಮವಾಗಿದೆ. ಇದರಡಿ ಅಧಿಕಾರಿ ವರ್ಗದ ವೃತ್ತಿ ಆಧಾರಿತ ಸಾಮರ್ಥ್ಯ ಅಭಿವೃದ್ಧಿಗೆ ತರಬೇತಿ ನೀಡಲಾಗುತ್ತದೆ ಎಂದು ತಿಳಿಸಿದರು.



11 ವಿಧದ ತರಬೇತಿಗಳನ್ನು ಆನ್‌ಲೈನ್‌ನಲ್ಲಿ ಪಡೆಯಬೇಕು. ಇದರಲ್ಲಿ ನಮ್ಮ ಪಾಲಿಕೆಯ 282 ಮಂದಿ ಪಾಲ್ಗೊಂಡಿದ್ದರು. ಈ ಪೈಕಿ 70 ಮಂದಿ ಕೋರ್ಸ್‌ಗಳನ್ನು ಪೂರ್ಣಗೊಳಿಸಿದ್ದಾರೆ. ಕಳೆದ 15 ದಿನಗಳಿಂದ ಈ ಪ್ರಕ್ರಿಯೆ ಆನ್‌ಲೈನ್‌ನಲ್ಲಿ ನಡೆಯಿತು. ಉಳಿದವರು ಪೂರ್ಣಗೊಳಿಸಲು ತಮ್ಮ ಪ್ರಯತ್ನ ಮುಂದುವರೆಸಲಿದ್ದಾರೆ. ಇಂತಹ ಪ್ರಶಸ್ತಿಗೆ ದಕ್ಷಿಣ ಭಾರತದಿಂದ ಆಯ್ಕೆಯಾಗಿರುವ ಏಕೈಕ ಸ್ಥಳೀಯ ಸಂಸ್ಥೆಯಾಗಿ 'ಮೈಸೂರು ಮಹಾನಗರ ಪಾಲಿಕೆ' ಹೊರಹೊಮ್ಮಿದೆ ಎಂದು ಮಾಹಿತಿ ನೀಡಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com



ಮೈಸೂರು ದಸರಾ ಮಹೋತ್ಸವ ಆರಂಭಕ್ಕೆ ಕೆಲವೇ ದಿನಗಳು ಬಾಕಿಯಿದ್ದು, ದೀಪಾಲಂಕಾರ ಕಾರ್ಯ ಆರಂಭವಾಗಿದೆ.



ಮೈಸೂರಿನ ಫೌಂಟೇನ್ ವೃತ್ತದ ಬಳಿ ತ್ರಿಭುಜಾಕಾರ ಮಾದರಿ ನಿರ್ಮಾಣಕ್ಕೆ ಬಣ್ಣ ಬಳಿಯುತ್ತಿರುವ ಕಾರ್ಮಿಕರು.

ದಸರಾ ಕಾರ್ಯಕ್ರಮಗಳ ಪ್ರಾಯೋಜಕತ್ವ ಸಂಬಂಧ ಜಿಲ್ಲಾಧಿಕಾರಿ ಸಭೆ

'ದಸರಾ' ಟೈಟಲ್ ಸ್ಪಾನ್ಸರ್‌ಗೆ 3 ಕೋಟಿ ನಿಗದಿ



ಮೈಸೂರಿನ ಲಲಿತ ಮಹಲ್ ಪ್ಯಾಲೇಸ್‌ನಲ್ಲಿ ಗುರುವಾರ ಏರ್ಪಡಿಸಿದ್ದ ದಸರಾ ಪ್ರಾಯೋಜಕತ್ವ ಕುರಿತ ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮಾತನಾಡಿದರು.

ಮೈಸೂರು, ಅ.5(ಪಿಎಂ)- ಈ ಬಾರಿಯ ದಸರಾ ಕಾರ್ಯಕ್ರಮಗಳಿಗೆ ವಿವಿಧ ಕಂಪನಿಗಳು, ಉದ್ಯಮಿಗಳು ಪ್ರಾಯೋಜಕತ್ವ ನೀಡಲು ಅವಕಾಶ ವಿದ್ದು, ಆ ಮೂಲಕ ನಮ್ಮೊಂದಿಗೆ ಕೈಜೋಡಿಸಿ ದಸರಾ ಯಶಸ್ವಿಗೊಳಿಸು ವುದರೊಂದಿಗೆ ತಮ್ಮ ವ್ಯಾಪಾರ-ವಹಿ ವಾಟು ವೃದ್ಧಿಪಡಿಸಿಕೊಳ್ಳಬಹುದು ಎಂದು ಉದ್ಯಮಿಗಳಿಗೆ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಸಲಹೆ ನೀಡಿದರು.

ಮೈಸೂರಿನ ಲಲಿತಮಹಲ್ ಪ್ಯಾಲೇಸ್ ನಲ್ಲಿ ಗುರುವಾರ ಹಮ್ಮಿಕೊಂಡಿದ್ದ ದಸರಾ ಪ್ರಾಯೋಜಕತ್ವ ಕುರಿತ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಈ ಬಾರಿ ಸರಳವೂ ಆಗಿರದ ಸಾಂಪ್ರದಾಯಿಕ ದಸರಾ ಆಚರಣೆ ಮಾಡಲಾಗುತ್ತಿದೆ.



ಪ್ರಾಯೋಜಕತ್ವದ ಬ್ರೋಷರ್ ಅನ್ನು ಚಿತ್ರದಲ್ಲಿ ಕಾಣಬಹುದು.

ದಸರಾ ಕಾರ್ಯಕ್ರಮಗಳಿಗೆ ವಿವಿಧ ರೀತಿಯ ಪ್ರಾಯೋಜಕತ್ವ ನೀಡಲು ಅವ ಕಾಶ ಕಲ್ಪಿಸಲಾಗಿದೆ ಎಂದರು.

'ದಸರಾ' ಟೈಟಲ್ ಸ್ಪಾನ್ಸರ್‌ಗೆ 3 ಕೋಟಿ, ಪ್ಲಾಟಿನಂ ಸ್ಪಾನ್ಸರ್‌ಗೆ 1 ಕೋಟಿ, ಗೋಲ್ಡ್ ಸ್ಪಾನ್ಸರ್‌ಗೆ 50 ಲಕ್ಷ, ಸಿಲ್ವರ್ ಸ್ಪಾನ್ಸರ್‌ಗೆ 25 ಲಕ್ಷ, ಅಸೋಸಿಯೇಟ್ ಮತ್ತು ಇವೆಂಟ್ ಸ್ಪಾನ್ಸರ್‌ಗೆ 3 ಲಕ್ಷ ರೂ.ಗಳನ್ನು ನಿಗದಿ ಮಾಡಲಾಗಿದೆ. ಪ್ರಾಯೋಜಕತ್ವ ನೀಡುವವರಿಗೆ ದಸರಾ ಕಾರ್ಯಕ್ರಮಗಳಲ್ಲಿ ತಮ್ಮ ಕಂಪನಿಯ ಜಾಹೀರಾತುಗಳನ್ನು ಪ್ರದರ್ಶನ ಮಾಡಲು ಅವಕಾಶ ಕಲ್ಪಿಸಲಾಗು ವುದು ಎಂದು ಮಾಹಿತಿ ನೀಡಿದರು.

ಪೂರ್ಣ ಒಂದು ಈವೆಂಟ್ ಅಥವಾ ಒಂದು ದಿನ, ಒಂದು ಕಾರ್ಯಕ್ರಮ ಸೇರಿದಂತೆ ಇದರಲ್ಲಿ ಯಾವ ರೀತಿ ಯಾದರೂ ಪ್ರಾಯೋಜಕತ್ವ ನೀಡ ಬಹುದು. ದಸರಾ ಹೋರ್ಡಿಂಗ್ಸ್, ಬ್ಯಾನರ್ಸ್‌ಗಳಲ್ಲಿ ಜಾಹೀರಾತಿಗೆ ಅವಕಾಶ ಇರಲಿದ್ದು, ಕಾರ್ಯಕ್ರಮ ನಿರೂಪಕ ರಿಂದ ನಿಮ್ಮ ಉತ್ಪನ್ನಗಳ ಹೆಸರು ಗಳನ್ನು ಹೇಳಿಸುವ ಮೂಲಕ ಬ್ರ್ಯಾಂಡ್ ಮಾಡಬಹುದಾಗಿದೆ. ಇದರಿಂದ ನೀವು ಬೆಳೆಯುವುದರೊಂದಿಗೆ ನಿಮ್ಮ ಉದ್ಯಮಗಳ ಬೆಳವಣಿಗೆಯೂ ಆಗಲಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ದಸರಾ ಆಚರಣೆಗೆ ವಿವಿಧ ಸಮಿತಿಗಳನ್ನು ಮಾಡಿ ಅಧಿಕಾರಿಗಳನ್ನು ನೇಮಿಸಲಾಗಿದೆ. ಪ್ರಾಯೋಜಕತ್ವ ನೀಡುವವರು ನಾಳೆ ಬೆಳಗ್ಗೆ 12 ಗಂಟೆಯೊಳಗೆ ಮಾಹಿತಿ ನೀಡಬೇಕು. ರೈತ ದಸರಾಗೆ ರಸಗೊಬ್ಬರ ಕಂಪನಿಗಳು, ಟ್ರಾಕ್ಟರ್ ಹಾಗೂ ಕೃಷಿ ಉಪಕರಣಗಳ ಕಂಪನಿಗಳೂ ಪ್ರಾಯೋಜಕತ್ವ ವಹಿಸಿ ಕೊಳ್ಳಬಹುದಾಗಿದೆ. ಇದೇ ರೀತಿ ಉಳಿದ ಉದ್ಯಮಿಗಳು ತಮಗೆ ಅನುಕೂಲವಾಗುವ ಕಾರ್ಯಕ್ರಮಗಳಿಗೆ ಪ್ರಾಯೋಜಕತ್ವ ನೀಡ ಬಹುದು ಎಂದು ಮಾಹಿತಿ ನೀಡಿದರು.

ಮುಡಾ ಆಯುಕ್ತ ದಿನೇಶ್, ಮಹಾನಗರ ಪಾಲಿಕೆ ಉಪಆಯುಕ್ತರಾದ ರೂಪಶ್ರೀ, ಆಹಾರ ಇಲಾಖೆ ಜಂಟಿ ನಿರ್ದೇಶಕಿ ಕುಮುದಾ ಸೇರಿದಂತೆ ವಿವಿಧ ಕಂಪನಿ, ಬ್ಯಾಂಕ್, ಹೋಟೆಲ್ ಉದ್ಯಮಿಗಳು ಸಭೆ ಯಲ್ಲಿ ಪಾಲ್ಗೊಂಡಿದ್ದರು.

ಪ್ರಮಾಣ ಪತ್ರ

ಮೈಸೂರು ನಗರ ಬೃಂದಾವನ 1ನೇ ಹಂತ, ನಂದಿ ರಸ್ತೆಯ 287/ಎ ರಲ್ಲಿನ ಶ್ರೀನಿವಾಸ್ ಅಪ್ಪೂಗೌಡರ ಮಗನಾದ ಶ್ರೀ ಪಿ.ಎಸ್. ನಟರಾಜ್ ಆದ ನಾನು ಈ ಕೆಳಕಂಡಂತೆ ಪ್ರಮಾಣೀ ಕರಿಸುವುದೇನೆಂದರೆ, ಶ್ರೀನಿವಾಸ್ ಅಪ್ಪೂಗೌಡ ಮತ್ತು ಪಾಲಹಳ್ಳಿ ಶ್ರೀನಿವಾಸ್‌ಗೌಡ ಈ ಎರಡೂ ಹೆಸರುಗಳೂ ನನ್ನ ತಂದೆ ಯವರದ್ದೇ ಆಗಿರುತ್ತದೆ. ಪಾಸ್‌ಪೋರ್ಟ್‌ನಲ್ಲಿ ಇರುವ ಪಾಲಹಳ್ಳಿ ಶ್ರೀನಿವಾಸಗೌಡ ಬದಲಾಗಿ ಶ್ರೀನಿವಾಸ್ ಅಪ್ಪೂಗೌಡ ಎಂದು ತಿದ್ದುಪಡಿಗೆ ಕೋರಿದ್ದೇನೆ. ಇದನ್ನು ನೋಟರಿ ಎಂ. ಗೀತಾ ರವರ ಎದುರು ದಿನಾಂಕ 5-10-2023 ರಂದು ಪ್ರಮಾಣೀಕರಿಸಿರುತ್ತೇನೆ. ಈ ಬಗ್ಗೆ ತಂಟೆ ತಕರಾರಿಗೆ ನಾನೇ ಜವಾಬ್ದಾರಿ ಆಗಿರುತ್ತೇನೆ.


ಸಹಿ/- ಪಿ.ಎಸ್. ನಟರಾಜ್



ಅರಮನೆ ಉತ್ತರ ದ್ವಾರದ ಎದುರಿನ ಚಾಮರಾಜ ಒಡೆಯರ್ ವೃತ್ತಕ್ಕೆ ಬಣ್ಣ ಬಳಿದು, ಚೆಂದಗೊಳಿಸುವ ಕಾರ್ಯ ಆರಂಭವಾಗಿದೆ.

ಬೆಂಗಳೂರಲ್ಲಿ 55 ಸಾವಿರ ಕೋಟಿ ವೆಚ್ಚದಲ್ಲಿ ಸುರಂಗ ರಸ್ತೆ

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರಕಟ





ಬೆಂಗಳೂರು, ಅ.5(ಕೆಎಂಶಿ)- ಕೆನಡಾ, ಅಮೇರಿಕಾ ಮಾದರಿಯಲ್ಲಿ ಬೆಂಗಳೂರಿನಲ್ಲೂ 55 ಸಾವಿರ ಕೋಟಿ ರೂ. ವೆಚ್ಚದಲ್ಲಿ ಸುರಂಗ ರಸ್ತೆಗಳನ್ನು ನಿರ್ಮಿಸುವುದಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರಕಟಿಸಿದ್ದಾರೆ.

ರಾಜಧಾನಿಯ ಸಂಚಾರ ದಟ್ಟಣೆ ತಗ್ಗಿಸಲು 190 ಕಿ.ಮೀ. ಉದ್ದ ಸುರಂಗ ರಸ್ತೆ ನಿರ್ಮಿಸಲು 8 ಕಂಪನಿಗಳು ಅರ್ಹತೆ ಪಡೆದುಕೊಂಡಿವೆ ಎಂದು ಸುದ್ದಿಗೋಷ್ಠಿಯಲ್ಲಿ ಪ್ರಕಟಿಸಿದರು. ರಸ್ತೆ ನಿರ್ಮಾಣದ ಕಾಮಗಾರಿ ಕೈಗೊಳ್ಳಲು ಟೆಂಡರ್ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು. ಯಾರು ಕಡಿಮೆ ಹಾಗೂ ಗುಣಮಟ್ಟದ ಕೆಲಸ ಮಾಡುತ್ತಾರೋ ಅಂಥವರಿಗೆ ಗುತ್ತಿಗೆ ನೀಡಲಾಗುವುದು ಎಂದರು.

ರಾಷ್ಟ್ರದ ವಿವಿಧ ರಾಜ್ಯಗಳಲ್ಲಿ ಈಗಾಗಲೇ ಸುರಂಗ ರಸ್ತೆ ನಿರ್ಮಾಣವಾಗಿವೆ. ಕೆಲವೆಡೆ ಕಾಮಗಾರಿ ನಡೆಯುತ್ತಿವೆ. ವಿಶ್ವ ಮಟ್ಟದಲ್ಲಿ ತನ್ನದೇ ಆದ ಸ್ಥಾನಮಾನ ಹೊಂದಿ ರುವ ಬೆಂಗಳೂರಿಗೆ ಮತ್ತಷ್ಟು ಮೆರಗು ನೀಡಲು ಹಾಗೂ ಸಂಚಾರ ದಟ್ಟಣೆ ಕಡಿಮೆ ಮಾಡಲು ಈ ಬೃಹತ್ ಯೋಜನೆ ಕೈಗೆತ್ತಿಕೊಳ್ಳುತ್ತಿದ್ದೇವೆ. ಟನಲ್ ರಸ್ತೆ ನಿರ್ಮಾ ಣಕ್ಕೆ ಸಂಬಂಧಿಸಿದಂತೆ 45 ದಿನಗಳ ಒಳಗಾಗಿ ಸಾರ್ವ ಜನಿಕ ಟೆಂಡರ್ ಕರೆಯಲು ನಾವು ಸಿದ್ಧತೆ ಮಾಡಿಕೊಳ್ಳು ತ್ತಿದ್ದೇವೆ. ಬೆಂಗಳೂರಿನ ಟ್ರಾಫಿಕ್ ಸಮಸ್ಯೆ ನಿಯಂತ್ರಿಸಲು ಕಾರಿಡಾರ್ ಅಭಿವೃದ್ಧಿಪಡಿಸಲು ಟೆಂಡರ್ ಕರೆದಿದ್ದೆವು.

ರಸ್ತೆ ಮೂಲಸೌಕರ್ಯ, ದಟ್ಟಣೆ ನಿವಾರಣೆ, ಟನಲ್ ರಸ್ತೆ, ರಸ್ತೆ ಅಗಲೀಕರಣ ವಿಚಾರವಾಗಿ ಸಲಹೆ ಪಡೆದಿದ್ದೆವು. ಟನಲ್ ರಸ್ತೆ ವಿಚಾರದಲ್ಲಿ ಬಂಡವಾಳವನ್ನು ತರಬೇಕು ಎಂದು ನಾವು ಸೂಚಿಸಿದ್ದೆವು. ಅಂತಾರಾಷ್ಟ್ರೀಯ ಬಿಡ್ಡಿಂಗ್ ಮಾಡಿದ ಪರಿಣಾಮ 9 ಕಂಪನಿಗಳು ಇದರಲ್ಲಿ ಭಾಗ ವಹಿಸಿದ್ದು, ಕೊನೆ ದಿನಾಂಕ ಮುಕ್ತಾಯವಾಗಿದೆ.

ಟನಲ್ ರಸ್ತೆ 4 ಪಥದಲ್ಲಿ ಮಾಡಬೇಕೇ, 6 ಪಥದಲ್ಲಿ ಮಾಡಬೇಕೇ? ಎಲ್ಲಿ ಆರಂಭವಾಗಿ ಎಲ್ಲಿ ಅಂತ್ಯವಾಗ ಬೇಕು? ಎಲ್ಲೆಲ್ಲಿ ತೆರೆದುಕೊಳ್ಳಬೇಕು? ಬೆಂಗಳೂರಿನಾ ದ್ಯಂತ ವಿಸ್ತರಣೆ ಮಾಡಬೇಕಾ? ಎಂಬ ವಿಚಾರವಾಗಿ ನಾವು ತೀರ್ಮಾನ ಮಾಡಬೇಕು. ಇದೆಲ್ಲವೂ ಒಂದೆ ರಡು ದಿನಗಳಲ್ಲಿ ಮಾಡಲು ಸಾಧ್ಯವಿಲ್ಲ. ಹೀಗಾಗಿ ಈ ಕಂಪನಿಗಳು ಅಧ್ಯಯನ ಮಾಡಿ ವರದಿ ನೀಡಲಿವೆ. ಈ ಯೋಜನೆ ಬಹಳ ದೊಡ್ಡ ಪ್ರಮಾಣದಲ್ಲಿದ್ದು, ಭಾರಿ ಪ್ರಮಾಣದ ಹಣಕಾಸಿನ ಅಗತ್ಯವಿದೆ. ಹೀಗಾಗಿ ಇದನ್ನು ವಿವಿಧ ಹಂತಗಳಲ್ಲಿ ಮಾಡಬೇಕಾಗುತ್ತದೆ. ನಾವು ಸದ್ಯಕ್ಕೆ 190 ಕಿ.ಮೀ.ನಷ್ಟು ಪ್ರಸ್ತಾವನೆ ನೀಡಿದ್ದೇವೆ. ಬಳ್ಳಾರಿ ರಸ್ತೆ, ಹಳೇ ಮದ್ರಾಸ್ ರಸ್ತೆ, ಎಸ್.ಟಿ.ಮಾಲ್ ಜಂಕ್ಷನ್ ನಿಂದ ಮೇಖ್ರಿ ವೃತ್ತ, ಮಿಲ್ಲರ್ ರಸ್ತೆ, ಚಾಲುಕ್ಯ ವೃತ್ತ, ಟ್ರಿನಿಟಿ ವೃತ್ತ, ಸರ್ಜಾಪುರ ರಸ್ತೆ, ಹೊಸೂರು, ಕನಕ ಪುರ ರಸ್ತೆಯಿಂದ ಕೃಷ್ಣರಾವ್ ಪಾರ್ಕ್, ಮೈಸೂರು ರಸ್ತೆ, ಶಿರಸಿ ಸರ್ಕಲ್, ಮಾಗಡಿ ರಸ್ತೆ, ತುಮಕೂರು ರಸ್ತೆ, ಯಶವಂತಪುರ ಜಂಕ್ಷನ್, ಹೊರ ವರ್ತುಲ ರಸ್ತೆಯಲ್ಲಿ ಗುರುಗುಂಟೆ ಪಾಳ್ಯ, ಕೆ.ಆರ್.ಪುರಂ, ಸಿಲ್ಕ್ ಬೋರ್ಡ್ ಪ್ರದೇಶಗಳನ್ನು ಗುರುತಿಸಿದ್ದು, ಆದ್ಯತೆ ಮೇರೆಗೆ ಈ ಪ್ರದೇಶಗಳನ್ನು ಆಯ್ಕೆ ಮಾಡಿದ್ದೇವೆ. ಎಲ್ಲಿ ಯಾವ ರೀತಿ ಈ ಟನಲ್ ರಸ್ತೆ ಮಾಡಬಹುದು ಎಂದು ಕಂಪನಿಗಳು ಅಧ್ಯಯನ ನಡೆಸಲಿವೆ.

ನಮ್ಮಲ್ಲಿ ಟನಲ್ ಕೊರೆಯುವ ಯಂತ್ರ ಚಿಕ್ಕದಿದೆ. ಮುಂಬೈ ಹಾಗೂ ಉತ್ತರ ಭಾರತದಲ್ಲಿ ಈಗ ಟನಲ್ ರಸ್ತೆ ನಿರ್ಮಾಣ ಮಾಡಲಾಗುತ್ತಿದೆ. ಬೆಂಗಳೂರಿನಲ್ಲಿ ಕನಿಷ್ಠ ನಾಲ್ಕು ಪಥದ ಟನಲ್ ರಸ್ತೆ ಬೇಕು. ಈ ರಸ್ತೆ ಗಳು ತೆರೆದುಕೊಳ್ಳಲು ಹೆಚ್ಚಿನ ಜಾಗಗಳು ಬೇಕು. ಗಾಲ್ಫ್ ಕೋರ್ಸ್, ಟರ್ಫ್ ಕ್ಲಬ್, ಅರಮನೆ ಮೈದಾನ ಜಾಗ ಗಳನ್ನು ಬೊಮ್ಮಾಯಿ ಅವರ ಕಾಲದಲ್ಲಿ ಗುತ್ತಿಗೆ ವಿಸ್ತರಣೆ ಮಾಡಿದ್ದು, ಅವರ ಜತೆ ನ್ಯಾಯ ಪಂಚಾಯ್ತಿ ಮಾಡ ಬೇಕಿದೆ. ಇನ್ನು ಮುಂಗಾರು ಅಂತ್ಯವಾಗಿರುವ ಹಿನ್ನೆಲೆ ಯಲ್ಲಿ ಮುಖ್ಯ ಇಂಜಿನಿಯರ್‌ಗಳು ಗುತ್ತಿಗೆದಾರರ ಮೇಲೆ ಒತ್ತಡ ಹಾಕಿ ಮಳೆ ನೀರು ಹರಿದುಹೋಗಲು ಚರಂಡಿ ಕಾಮಗಾರಿಗಳು ಸೇರಿದಂತೆ ಪ್ರಮುಖ ಆದ್ಯತೆ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದು ಜವಾಬ್ದಾರಿ ನೀಡಲಾಗಿದೆ. ಕಳೆದ ವಾರದಲ್ಲಿ ಬೆಂಗಳೂರಿನ ಹೊರವರ್ತುಲ ರಸ್ತೆಯಲ್ಲಿ ಭಾರಿ ಪ್ರಮಾ ಣದ ಟ್ರಾಫಿಕ್ ಜಾಮ್ ಸಮಸ್ಯೆ ಉಂಟಾಗಿದ್ದು, ಸಂಬಂಧ ಪಟ್ಟ ಅಧಿಕಾರಿಗಳು ಹಾಗೂ ಸಂಚಾರಿ ಪೊಲೀಸರ ಜೊತೆ ಚರ್ಚೆ ಮಾಡಿದ್ದೇನೆ. ನಮ್ಮ ಯೋಜನಾ ಆಯೋಗದ ಮುಖ್ಯಸ್ಥರು ಕೂಡ ಈ ವಿಚಾರವಾಗಿ ಒತ್ತು ನೀಡುತ್ತಿದ್ದಾರೆ. ಇದೇ ತಿಂಗಳು 7ರಂದು ಹೊರವರ್ತುಲ ರಸ್ತೆಗೆ ಭೇಟಿ ನೀಡುವುದಾಗಿ ಹೇಳಿದ್ದೇನೆ. ಸರ್ಕಾರ 350 ಕಿ.ಮೀ. ಟೆಂಡರ್ ಶ್ಯೂರ್ ರಸ್ತೆ ಮಾಡಿದ್ದು, ಈ ರಸ್ತೆಯಲ್ಲಿ ಅಂಡರ್ ಗ್ರೌಂಡ್‌ನಲ್ಲಿ ಕೇಬಲ್ ಅಳವಡಿಕೆಗೆ ಅವಕಾಶ ಮಾಡಿ ಕೊಟ್ಟಿದ್ದರೂ ಅವುಗಳನ್ನು ಬಳಸಿಕೊಳ್ಳುತ್ತಿಲ್ಲ. ಹೀಗಾಗಿ ಎಲ್ಲರೂ ಇದನ್ನು ಉಪಯೋಗಿಸಿಕೊಳ್ಳಬೇಕು. ಪ್ರತಿ ಕಿ.ಮೀ. 10 ಕೋಟಿ ರೂ. ಸರಾಸರಿಯಲ್ಲಿ ಖರ್ಚಾಗಿದೆ. ಆದರೂ ಕೇಬಲ್‌ಗಳು ಮೇಲೆಯೇ ಹಾರಾಡುತ್ತಿವೆ. ಇವುಗಳನ್ನು ಕಾನೂನುಬದ್ಧವಾಗಿ ಬಳಸದಿದ್ದರೆ ನಮ್ಮ ಅಧಿಕಾರಿಗಳು ಆ ಕೇಬಲ್‌ಗಳನ್ನು ಕಟ್ ಮಾಡಲಿದ್ದಾರೆ.

ವಿಪತ್ತು ನಿರ್ವಹಣೆಗಾಗಿ ಅರ್ಬನ್ ಫ್ಲಶ್ ಮಿಟಿಗೇಷನ್ ಪ್ರಪೋಸಲ್‌ಗಾಗಿ ವಿಶ್ವ ಬ್ಯಾಂಕ್‌ನಿಂದ 3 ಸಾವಿರ ಕೋಟಿಗೆ ಪ್ರಸ್ತಾವನೆ ನೀಡಲಾಗಿದ್ದು, ಇಂದು ಅದು ಅನುಮತಿ ಪಡೆಯಲಿದೆ. ಮುಂದಿನ ದಿನಗಳಲ್ಲಿ ಪ್ರವಾಹ ಪರಿಸ್ಥಿತಿ ಬರುವ ಕಡೆಗಳಲ್ಲಿ ಆದ್ಯತೆ ಮೇರೆಗೆ ಕಾಮಗಾರಿ ಮುಗಿ ಸಲು ಮುಂದಾಗಿದ್ದೇವೆ. ರಾಷ್ಟ್ರೀಯ ವಿಪತ್ತು ನಿರ್ವಹಣೆ ಯಿಂದ 250 ಕೋಟಿಯಷ್ಟು ಹಣಕ್ಕಾಗಿ ಪ್ರಸ್ತಾವನೆ ಸಲ್ಲಿಸ ಲಾಗಿದೆ. ಟನಲ್ ರಸ್ತೆ ವಿಚಾರವಾಗಿ ಕುಮಾರಸ್ವಾಮಿ ಅವರು ದುಡ್ಡು ಮಾಡುವ ಯೋಜನೆ ಎಂದು ಹೇಳಿಕೆ ನೀಡಿದ್ದರು. ಈ ವಿಚಾರವಾಗಿ ಅವರ ಜತೆ ಚರ್ಚೆ ಮಾಡುತ್ತೀರಾ ಎಂದು ಕೇಳಿದಾಗ, ಜನ ನನಗೆ ಅಧಿಕಾರ, ಜವಾಬ್ದಾರಿ ನೀಡಿದ್ದು, ಅದರ ಮೇಲೆ ನಾನು ಕೆಲಸ ಮಾಡುತ್ತೇನೆ. ವಿರೋಧ ಪಕ್ಷದವರನ್ನು ಕೇಳಿ ಯೋಜನೆ ರೂಪಿಸಲು ಸಾಧ್ಯವೇ? ಕೋಳಿ ಕೇಳಿ ಮಸಾಲೆ ರೆಡಿ ಮಾಡುವುದಿಲ್ಲ ಎಂದರು.

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯ ಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು, ನನ್ನ ಕಕ್ಷೀದಾರರು ಆದರ ಮಾಲೀಕರಾದ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ, ಸಣ್ಣ ಅಮ್ಮನಕೆರೆ, ಹೌಸ್ ಆಫ್ ಹಿರನಂದನಿ, ವಿಲ್ಲಾ ನಂಬರ್: 445 ರಲ್ಲಿ ವಾಸವಿರುವ ಶ್ರೀ. ಮಧುಸೂದನ್ ರಘುನಾಥ್ ಬಿನ್ ಎನ್. ಎಸ್. ರಘುನಾಥ್‌ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಪರಭಾರೆಯ ವಿಚಾರದಲ್ಲಿ ಯಾರಿ ಗಾದರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಹದಿನೈದು (15) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಐಟಂ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಐಟಂ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್:

ಐಟಂ ನಂ.1: ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಕಸಬಾ ಹೋಬಳಿ, ಹಿನಕಲ್ ಗ್ರಾಮದ ಗರುಡ ಚಾರ್ ಲೇಔಟ್‌ರಲ್ಲಿನ, ಪೂರ್ವ-ಪಶ್ಚಿಮ: 24.384 ಮೀಟರ್, ಉತ್ತರ-ದಕ್ಷಿಣ: 15.24 ಮೀಟರ್, ಒಟ್ಟು ವಿಸ್ತೀರ್ಣ 371.61 ಚದರ ಮೀಟರ್ ಅಳತೆಯ ಖಾಲಿ ನಿವೇಶನ ಸಂಖ್ಯೆ: 1750/1 (ನಮೂನೆ-3ರ ಪ್ರಕಾರ ಸ್ವತ್ತಿನ ಸಂಖ್ಯೆ (5567766082) ಇದಕ್ಕೆ ಚಕ್ಕುಬಂದಿ

ಪೂರ್ವಕ್ಕೆ:- ರಸ್ತೆ, ಪಶ್ಚಿಮಕ್ಕೆ:- ಬಿ.ಎಸ್ ಅಚುತ ರವರ ಸ್ವತ್ತು, ಉತ್ತರಕ್ಕೆ: - ಬಿ.ಎಸ್ ಅಚುತ ರವರ ಸ್ವತ್ತು, ದಕ್ಷಿಣಕ್ಕೆ:- ಬಿ.ಎಸ್ ಅಚುತ ರವರ ಸ್ವತ್ತು,

ಐಟಂ ನಂ.2: ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಕಸಬಾ ಹೋಬಳಿ, ಹಿನಕಲ್ ಗ್ರಾಮದ ಗರುಡ ಚಾರ್‌ಲೇಔಟ್‌ರಲ್ಲಿನ, ಪೂರ್ವ-ಪಶ್ಚಿಮ: 24.384 ಮೀಟರ್, ಉತ್ತರ-ದಕ್ಷಿಣ: 15.24 ಮೀಟರ್, ಒಟ್ಟು ವಿಸ್ತೀರ್ಣ: 371.61 ಚದರ ಮೀಟರ್ ಅಳತೆಯ ಖಾಲಿ ನಿವೇಶನ ಸಂಖ್ಯೆ: 1750/2 (ನಮೂನೆ-3ರ ಪ್ರಕಾರ ಸ್ವತ್ತಿನ ಸಂಖ್ಯೆ 6538389375), ಇದಕ್ಕೆ ಚಕ್ಕುಬಂದಿ: ಪೂರ್ವಕ್ಕೆ:- ರಸ್ತೆ, ಪಶ್ಚಿಮಕ್ಕೆ:- ರಸ್ತೆ, ಉತ್ತರ: -ಬಿ ಎಸ್ ಅಚುತ ರವರ ಸ್ವತ್ತು, ದಕ್ಷಿಣಕ್ಕೆ- ರಸ್ತೆ.

Sd/- **M.N. Prakash Kalappa**
KAR-1996-2000, Advocate & Legal Consultant,
67/7A, P.R.I. Complex, No.2 & 3
1st Floor, New Sayyaji Rao Road, Fort Mohalla,
Mysore-04, **Cell: 93431 12535**
E-mail: mnprakashkalappa@gmail.com
ಸ್ಥಳ: ಮೈಸೂರು ದಿನಾಂಕ:05/10/2023

ಜಿಲ್ಲಾ ಪಂಚಾಯಿತಿ: ಮೈಸೂರು ತಾಲ್ಲೂಕು ಪಂಚಾಯಿತಿ: ನಂಜನಗೂಡು

ಹುಲ್ಲಹಳ್ಳಿ ಗ್ರಾಮ ಪಂಚಾಯಿತಿ

ಪಂಚಾಯ್ತಿ ಕಛೇರಿಯ ಮುಂಭಾಗ ಹರಾಜು ಇಸ್ತಿಹಾರ್ ಪ್ರಕಟಣೆ

ಪ್ರಕಟಣೆ ವಿವರ: 04.10.2023 ಠರಾವು ಸಂಖ್ಯೆ : 8/2023-24

ಮಾನ್ಯರೇ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ. ಈ ಕೆಳಗೆ ನಮೂದಿಸಿರುವ ಬಾಬ್ತುಗಳಿಗೆ ಅಧ್ಯಕ್ಷರಾಗಲಿ ಅಥವಾ ಅವರಿಂದ ಅಧಿಕಾರ ಪಡೆದ ಅಧಿಕಾರಿಗಳಿಂದ ಬಹಿರಂಗ ಹರಾಜು ಮಾಡಲಾಗುತ್ತದೆ. ಇಚ್ಛೆವುಳ್ಳವರು ಹರಾಜಿನಲ್ಲಿ ಭಾಗವಹಿಸಿ, ಬಿಡ್ ಮಾಡಿ ಗ್ರಾಮ ಪಂಚಾಯಿತಿ ಷರತ್ತುಗಳಿಗೆ ಒಳಪಟ್ಟು ಹಕ್ಕು ಪಡೆದುಕೊಳ್ಳುವುದು. ತಳ್ಳುವ ಗಾಡಿ ಸುಂಕ ವಸೂಲಿ ಮತ್ತು ಸಂತೆ ಸುಂಕ ವಸೂಲಿ ವ್ಯಾಪಾರದ ಹರಾಜನ್ನು ದಿನಾಂಕ: 12.10.2023ರ ಗುರುವಾರದಂದು ಗ್ರಾಮ ಪಂಚಾಯಿತಿ ಕಛೇರಿ ಆವರಣದಲ್ಲಿ ಬೆಳಗ್ಗೆ 11.00ಕ್ಕೆ ನಡೆಸಲಾಗುತ್ತದೆ.

ಕ್ರ.ಸಂ.	ಬಾಬ್ತುಗಳ ವಿವರ	ಅವಧಿ	ಠೇವಣಿ
1.	ತಳ್ಳುವ ಗಾಡಿಗಳ ಸುಂಕ ವಸೂಲಿ ಹರಾಜು (ಗ್ರಾಮ ಪಂಚಾಯಿತಿಯು ಗುರುತಿಸಿದ ಸ್ಥಳ)	11 ತಿಂಗಳು ಮಾತ್ರ	10000/-
2.	ಸಂತೆ ಸುಂಕ ವಸೂಲಿ ಹರಾಜು	11 ತಿಂಗಳು ಮಾತ್ರ	10000/-

ದಿನಾಂಕ: 12.10.2023ರ ಗುರುವಾರ ಇಸ್ತಿಹಾರ್‌ಗೆ ಸಂಬಂಧಿಸಿದ ಷರತ್ತುಗಳು:

1. ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಾರ್ವಜನಿಕರು ಮಾತ್ರ ಭಾಗವಹಿಸುವುದು.
2. 11-00 ಗಂಟೆಯೊಳಗೆ ನಗದು ರೂ.10,000 ಠೇವಣಿ ಪಾವತಿಸಿದವರು ಮಾತ್ರ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ.
3. ಬಿಡ್ ಆದ ಹಣವನ್ನು ಬಿಡ್‌ದಾರರು ಸಂಜೆ 4.00 ಗಂಟೆ ಒಳಗೆ ಪೂರ್ತಿ ಹಣವನ್ನು ಪಾವತಿಸಬೇಕು. ಇಲ್ಲವಾದರೆ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿ ಕೊಳ್ಳಲಾಗುವುದು.
4. 100 ರೂ. ಛಾಪಾ ಕಾಗದಲ್ಲಿ ಗ್ರಾ.ಪಂ ನಿರ್ದೇಶನದಂತೆ ಕಾನೂನು ರೀತಿ ಒಪ್ಪಂದದ ಕರಾರು ಬರೆದುಕೊಡಬೇಕು.
5. ಕಳೆದ 2 ವರ್ಷಗಳ ಬಿಡ್ ಮೊತ್ತಕ್ಕಿಂತ ಕಡಿಮೆ ಬಿಡ್‌ಗೆ ಹರಾಜಾದರೆ ಗ್ರಾಮ ಪಂಚಾಯಿತಿಯ ತೀರ್ಮಾನ ಅಂತಿಮವಾಗಿರುತ್ತದೆ.
6. ಅಂತಿಮ ತೀರ್ಮಾನ ಗ್ರಾಮ ಪಂಚಾಯಿತಿಗೆ ಸೇರಿರುತ್ತದೆ. ಷರತ್ತುಗಳು ಅನ್ವಯ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ 9164044741, 8951744504

ಸಹಿ/-	ಸಹಿ/-	ಸಹಿ/-	ಸಹಿ/-
ಶ್ರೀಮತಿ ದೇವಮ್ಮ ಅಧ್ಯಕ್ಷರು, ಗ್ರಾ.ಪಂ. ಹುಲ್ಲಹಳ್ಳಿ	ಶ್ರೀ ಹೆಚ್.ಪಿ.ಲೋಕೇಶ ಉಪಾಧ್ಯಕ್ಷರು, ಗ್ರಾ.ಪಂ. ಹುಲ್ಲಹಳ್ಳಿ	ಶ್ರೀ ಶ್ರೀಧರ್.ಹೆಚ್.ಬಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಗ್ರಾ.ಪಂ. ಹುಲ್ಲಹಳ್ಳಿ	ಶ್ರೀ ಬಸವಣ್ಣ.ಕೆ ದ್ವಿ.ದ.ಲೆ.ಸಹಾಯಕರು ಗ್ರಾ.ಪಂ. ಹುಲ್ಲಹಳ್ಳಿ

ನಗರಸಭಾ ಕಾರ್ಯಾಲಯ, ಬಿ.ಎಂ. ರಸ್ತೆ, ಸಂತೇಪೇಟೆ ವೃತ್ತ, ಹಾಸನ.

ದೂ.ಸಂ:08172-268276, 233702 Email:commn_hassan@yahoo.com
ಸಂ:ಪೌಅ/ಹಾನಸ/ಟೆಂಡರ್ ಶಾಖೆ/03/2023-24 ದಿನಾಂಕ:04/10/2023

ಟೆಂಡರ್ ಪ್ರಕಟಣೆ ಇ ಪ್ರೊಕ್ಯೂರ್‌ಮೆಂಟ್ ಮೂಲಕ

ಹಾಸನ ನಗರಸಭಾ ವ್ಯಾಪ್ತಿಯಲ್ಲಿ 2023-24ನೇ ಸಾಲಿನ ನಗರಸಭಾ ಅನುದಾನದಡಿಯಲ್ಲಿ ವಿವಿಧ ಕಾಮಗಾರಿ/ ಕೆಲಸಗಳ ಅನುಷ್ಠಾನಕ್ಕಾಗಿ ಅರ್ಹ ಗುತ್ತಿಗೆದಾರರುಗಳಿಂದ ಪಾರದರ್ಶಕತೆ ಅಧ್ಯಾದೇಶ 2000ದ ಅನ್ವಯಐಟಂವಾರು ದರಗಳ ಟೆಂಡರನ್ನುಹೊಸ ಇ-ಪ್ರೊಕ್ಯೂರ್‌ಮೆಂಟ್ ಕೆ.ಪಿ.ಪಿ.ಪಿ ಪೋರ್ಟಲ್ (https://www.kppp.karnataka.gov.in) ಮೂಲಕ ಕರೆಯಲಾಗಿದ್ದು, ಗುತ್ತಿಗೆದಾರರು ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ:19/10/2023ರ ಸಂಜೆ 5.30 ಗಂಟೆಯೊಳಗೆ ಕೆಲಸಗಳಿಗೆ ಅನ್ವಯಿಸುವ ಟೆಂಡರ್ ದಸ್ತಾವೇಜಿನ ನಿಯಮಾವಳಿಗಳಿಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರಕ್ಕಾಗಿ ನಗರಸಭೆ ಟೆಂಡರ್ ಶಾಖೆ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ನಗರಸಭೆ ಹಾಸನ ಇವರಿಂದ ಕಛೇರಿಯ ವೇಳೆಯಲ್ಲಿ ಪಡೆಯಬಹುದು ದೂರವಾಣಿ: 08172-268276. ಕಾಮಗಾರಿ ವಿವರ ಈ ಕೆಳಕಂಡಂತಿದೆ. 2023-24ನೇ ಸಾಲಿನ ನಗರಸಭಾ ಅನುದಾನ ಕ್ರ.ಸಂ.1)ಕಾಮಗಾರಿ ಹೆಸರು: ಹಾಸನ ನಗರದ ವಾರ್ಡ್ ನಂ: 34 ಕೆ.ಹೆಚ್.ಬಿ. ಕಾಲೋನಿಯಲ್ಲಿ ಹಾದು ಹೋಗಿರುವ ದೊಡ್ಡಚರಂಡಿಯ ಹೂಳು ತೆಗೆಯಲು ಹೊಸದಾಗಿ ರ್‍ಯಾಂಪ್‌ಗಳ ನಿರ್ಮಾಣ ಮಾಡುವುದು ಹಾಗೂ ದೊಡ್ಡಚರಂಡಿಯ ಹೂಳು ತೆಗೆಯುವ ಕಾಮಗಾರಿ. (Indent No: DMA/2023-24/OW/WORK_INDENT3802) ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) 49.00 ಕಾಲಾವಧಿ 06 ತಿಂಗಳು (ಮಳೆಗಾಲ ಹೊರತುಪಡಿಸಿ) ಅನ್ವಯಿಸುವ ಟೆಂಡರ್ ದಸ್ತಾವೇಜು KW-2. ದಿನಾಂಕಗಳಲ್ಲಿ ಸಾರ್ವಜನಿಕ ರಜೆಎಂದು ಘೋಷಣೆ ಮಾಡಿದ್ದಲ್ಲಿ ರಜಾ ದಿನದ ಕೆಲಸದ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸಿಕೊಳ್ಳತಕ್ಕದ್ದು.

ಸಹಿ/-ಅಧ್ಯಕ್ಷರು, ನಗರಸಭೆ, ಹಾಸನ
ಸಹಿ/-ಪೌರಾಯುಕ್ತರು, ನಗರಸಭೆ, ಹಾಸನ

ವಾಸಾಸಂಇ/ಹಿಸನಿ/ಹಾಸನ/367/ಕೆಎಸ್‌ಎಂಸಿಎ/367/2023-24

ಕನ್ನಡ ಒಕ್ಕೂಟ ಕರೆ ನೀಡಿದ್ದ ಕೆಆರ್‌ಎಸ್ ಚಲೋ ಯಶಸ್ವಿ

ಕಾವೇರಿ ವಿಚಾರದಲ್ಲಿ ಮೋದಿ ಕರ್ನಾಟಕ ಕಡೆಗಣಿಸಿದ್ದಾರೆ: ವಾಟಾಳ್ ನಾಗರಾಜ್ ಕಿಡಿ



ಮಂಡ್ಯ, ಅ.5(ಮೋಹನ್‌ರಾಜ್)– ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ 20ಕ್ಕೂ ಹೆಚ್ಚು ಸಂಘಟನೆಗಳನ್ನು ಒಳಗೊಂಡ ಕನ್ನಡ ಒಕ್ಕೂಟವು ಕರೆ ನೀಡಿದ್ದ ಕೆಆರ್‌ಎಸ್ ಚಲೋ ಯಶಸ್ವಿಯಾಗಿದ್ದು, ಬೆಂಗಳೂರಿನಿಂದ ಹೊರಟ ನೂರಾರು ಕನ್ನಡಪರ ಹೋರಾಟಗಾರರು ಕೆಆರ್‌ಎಸ್‌ಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಕನ್ನಡ ಚಳವಳಿ ಹೋರಾಟಗಾರ, ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಗುರುವಾರ ಬೆಂಗಳೂರು ನಗರದಲ್ಲಿ ಜಮಾವಣೆಗೊಂಡು ತಮಿಳುನಾಡಿಗೆ ನೀರು ಹರಿಸುತ್ತಿರುವ ಕ್ರಮವನ್ನು ಖಂಡಿಸಿ ರಾಜ್ಯ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿದ ಪ್ರತಿಭಟನಾಕಾರರು, ನಂತರ ಹಲವು ವಾಹನಗಳಲ್ಲಿ ಮಧ್ಯಾಹ್ನ 12 ಗಂಟೆ ವೇಳೆಗೆ ರಾಜಧಾನಿ ಬೆಂಗಳೂರಿನಿಂದ ಕೆಆರ್‌ಎಸ್‌ನತ್ತ ಹೊರಟರು.

ಬೆಂಗಳೂರಿನಿಂದ ಕೆಂಗೇರಿ, ಬಿಡದಿ, ರಾಮನಗರ, ಚನ್ನಪಟ್ಟಣ, ಮದ್ದೂರು, ಮಂಡ್ಯ, ಶ್ರೀರಂಗಪಟ್ಟಣ ಮಾರ್ಗವಾಗಿ ಕೆಆರ್‌ಎಸ್ ಅಣೆಕಟ್ಟೆ ತಲುಪಿ, ಅಣೆಕಟ್ಟೆ ಮುಂಭಾಗ ಪ್ರತಿಭಟನೆ ನಡೆಸಿದ ಹೋರಾಟಗಾರರನ್ನು ಪೊಲೀಸರು ವಶಕ್ಕೆ ಪಡೆದು ನಂತರ ಬಿಡುಗಡೆ ಮಾಡಿದರು.

ಇದಕ್ಕೂ ಮುನ್ನಾ, ಮಂಡ್ಯದ ಸರ್‌ಎಂವಿ ಪ್ರತಿಮೆ ಬಳಿ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ನಡೆಸುತ್ತಿರುವ ಧರಣಿ ಸ್ಥಳಕ್ಕೆ ಭೇಟಿ ನೀಡಿದ ಹೋರಾಟಗಾರರು, ಕಾವೇರಿ ಹೋರಾಟಕ್ಕೆ ಬೆಂಬಲ ಸೂಚಿಸಿ, ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜು ಮಾತನಾಡಿ, ಕಾವೇರಿ ವಿಚಾರದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಕರ್ನಾಟಕವನ್ನು ಕಡೆಗಣಿಸಿದ್ದಾರೆ. ಬಿಜೆಪಿಯವರದ್ದು ಬರೀ ಮಾತು. ನರೇಂದ್ರ ಮೋದಿ ಅವರು ಎರಡು ರಾಜ್ಯಗಳ ಮಾಹಿತಿ ತರಿಸಿಕೊಂಡು ಈ ಕೂಡಲೇ ಮಧ್ಯಸ್ಥಿಕೆ ವಹಿಸಿ ಸಮಸ್ಯೆ ಬಗೆಹರಿಸಲಿ. 1991ರಲ್ಲಿ ಸಿಎಂ ಆಗಿದ್ದ ಬಂಗಾರಪ್ಪ ಅವರಿಗೆ ನೀರು ಬಿಡದಂತೆ ಹೇಳಿದ್ದು ನಾನೇ. ಅದೇನೇ ಆಗಲಿ ನೀರು ಬಿಡಬೇಡಿ ಎಂದಿದ್ದೆ. ಬಂಗಾರಪ್ಪ ಮಾದರಿಯಲ್ಲಿ ಈಗಿನ ಸಿಎಂ ಸಿದ್ದರಾಮಯ್ಯನವರು ದಿಟ್ಟ ನಿರ್ಧಾರಕ್ಕೆ ಬರಲಿ ಎಂದು ಒತ್ತಾಯಿಸಿದರು.

ಬೇಕಿದ್ದರೆ ಕಾವೇರಿ ವಿಚಾರದಲ್ಲಿ ಸರ್ಕಾರ ವಜಾ ಮಾಡಲಿ. ಜನರನ್ನು ಎದುರು ಹಾಕಿಕೊಂಡು ನೀರು ಬಿಡುವ ಅವಶ್ಯಕತೆ ಇಲ್ಲ. ಇದೊಂದು ಒಳ್ಳೆ ಅವಕಾಶ. ಸಿದ್ದರಾಮಯ್ಯ ನಿರ್ಧಾರ ಐತಿಹಾಸಿಕ ಪುಟ ಸೇರಲಿದ್ದು, ಆದಿದ್ದು ಆಗಲಿ ಈ ಕೂಡಲೇ ನೀರು ನಿಲ್ಲಿಸಿ ಎಂದು ಮನವಿ ಮಾಡಿದರು.

ಕಾವೇರಿ ವಿಚಾರದಲ್ಲಿ ಸರ್ಕಾರ ದಿಟ್ಟ ನಿಲುವು ತೆಗೆದುಕೊಳ್ಳಲಿ. ಸಿದ್ದರಾಮಯ್ಯಗೆ ಇಂತಹ ಸಂದರ್ಭ ತೆಗೆದುಕೊಳ್ಳುವ ದಿಟ್ಟ ನಿರ್ಧಾರ ಮತ್ತೊಮ್ಮೆ ನಿಮ್ಮ ಜೀವನದಲ್ಲಿ ಸಿಗಲ್ಲ. ಯಾರ ಮಾತನ್ನು ಕೇಳದೆ ನೀರು ಬಿಡಲ್ಲ ಅಂತ ಹೇಳಿ. ಅಧಿಕಾರ ಹೋಗುತ್ತಾ ಹೋಗಲಿ, ಮುಖ್ಯಮಂತ್ರಿ ಸ್ಥಾನದಿಂದ ನಿಮ್ಮನ್ನು ತೆಗೆಯಲು ಸಾಧ್ಯವಿಲ್ಲ. ರಾಜ್ಯಪಾಲರ ಆಳ್ವಿಕೆ ತರುತ್ತಾರಾ ತರಲಿ. ಸರ್ಕಾರ ತೆಗೆದು ನೀರು ಬಿಡಲು ಸಾಧ್ಯವಿಲ್ಲ. ನಿಮಗೆ ಅದ್ಭುತ ಚಿಂತನೆ ಇದೆ. ನೀವೇ ಕಾವೇರಿಗಾಗಿ ಕ್ರಾಂತಿಕಾರಿ ನಿರ್ಧಾರ ತೆಗೆದುಕೊಂಡ ಸಿಎಂ ಎಂದು ಹೆಸರಾಗಲಿ. ನಮ್ಮ ಒತ್ತಾಯ ಪಾಲಿಸಿ ಎಂದು ಮನವಿ ಮಾಡಿದರು.

ರಾಜಕಾರಣಿಗಳು ಭಂಡತನ ಬಿಡದಿದ್ದರೆ ಮುಂದಿನ ದಿನಗಳಲ್ಲಿ ಈ ರಾಜ್ಯ ರೌಡಿಗಳ ಕೈಗೆ ಹೋಗುತ್ತದೆ. ರೌಡಿಗಳು ಚುನಾವಣೆಗೆ ನಿಲ್ಲುತ್ತಾರೆ. ಅವರ ಗುರುತು ಲಾಂಗ್ ಆಗಲಿದೆ. ರೌಡಿಗಳೇ ಮುಖ್ಯಮಂತ್ರಿಗಳು ಆದರೂ ಆಶ್ಚರ್ಯವಿಲ್ಲ. ಅಧಿಕಾರಿಗಳನ್ನ ಬಳಕೆ ಮಾಡಿಕೊಂಡು ಅಟ್ಟಹಾಸ ನಡೆಸುತ್ತಾರೆ. 20 ವರ್ಷದ ಹಿಂದೆಯೇ ನಾನು ಅಸೆಂಬ್ಲಿಯಲ್ಲಿ ಈ ವಿಚಾರ ಹೇಳಿದ್ದೆ. ಕರ್ನಾಟಕ ಉಳಿಸಿ ರೈತರಿಗೆ ಬೆಂಬಲ ಕೊಡಿ. ನಾನು ರೈತರಿಗೆ ಬೆಂಬಲ ಕೊಡುತ್ತೇನೆ. ಕಾವೇರಿ ವಿವಾದ ಅಂತ್ಯಕ್ಕೆ ಹೋರಾಟ ನಡೆಯಲೇಬೇಕು ಎಂದರು.

ಪ್ರತಿಭಟನೆಯಲ್ಲಿ ಕನ್ನಡ ಒಕ್ಕೂಟದ ಕೆ.ಆರ್. ಕುಮಾರ್, ಶಿವರಾಮೇಗೌಡ, ಮಂಜುನಾಥ್ ದೇವ್, ಗಿರೀಶ್‌ಗೌಡ, ಹಿತರಕ್ಷಣಾ ಸಮಿತಿಯ ಸುನಂದಾ ಜಯರಾಂ, ಕನ್ನಡ ಸೇನೆ ಮಂಜು, ದಸಂಸ ಕೃಷ್ಣ, ಇಂಡುವಾಳು ಚಂದ್ರಶೇಖರ್, ಬಸವರಾಜು ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ಕೆಆರ್‌ಎಸ್ ಮುತ್ತಿಗೆಗೆ ಯತ್ನ: ವಾಟಾಳ್ ಸೇರಿ ಹೋರಾಟಗಾರರ ಬಂಧನ, ಬಿಡುಗಡೆ



ಶ್ರೀರಂಗಪಟ್ಟಣ, ಅ.5– ಕಾವೇರಿ ನೀರಿಗಾಗಿ ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಕನ್ನಡ ಒಕ್ಕೂಟ ಗುರುವಾರ ಹಮ್ಮಿಕೊಂಡಿದ್ದ ಕೆಆರ್‌ಎಸ್ ಚಲೋ ರಾತ್ರಿ ವೇಳೆಗೆ ಕೆಆರ್‌ಎಸ್ ಡ್ಯಾಂ ಬಳಿಗೆ ಆಗಮಿಸಿತು. ಈ ಸಂದರ್ಭ ಡ್ಯಾಂ ಒಳಗೆ ಪ್ರವೇಶಿಸಲು ಯತ್ನಿಸಿದ ಹೋರಾಟಗಾರರನ್ನು ಪೊಲೀಸರು ವಶಕ್ಕೆ ಪಡೆದರು. ಬಳಿಕ ಠಾಣೆಗೆ ಕರೆದೊಯ್ದು ಬಿಡುಗಡೆ ಮಾಡಿದರು.

ಬೆಂಗಳೂರಿನಿಂದ ಮಂಡ್ಯ ಮಾರ್ಗವಾಗಿ ರ್‍ಯಾಲಿ ಮೂಲಕ ಆಗಮಿಸಿದ ಹೋರಾಟಗಾರರನ್ನು ಶ್ರೀರಂಗಪಟ್ಟಣ ತಾಲೂಕಿನ ಕೆಆರ್‌ಎಸ್ ಅಣೆಕಟ್ಟೆ ಬಳಿ ರೈತ ಸಂಘದ ಕಾರ್ಯಕರ್ತರು ಸ್ವಾಗತಿಸಿದರು. ವಾಟಾಳ್ ನೇತೃತ್ವದಲ್ಲಿ ಹೋರಾಟಗಾರರು ಡ್ಯಾಂ ಬಳಿಗೆ ಆಗಮಿಸುವ ಮುಂಚೆಯೇ ಡ್ಯಾಂ ಬಳಿ ಪೊಲೀಸರು ಅಲರ್ಟ್ ಆಗಿದ್ದರು. ಡ್ಯಾಂನಿಂದ 300 ಮೀಟರ್ ದೂರದಲ್ಲೇ ಹೋರಾಟಗಾರರನ್ನು ತಡೆಯಲು ಪೊಲೀಸರು ಸಜ್ಜುಗೊಂಡಿದ್ದರು. ರಸ್ತೆಯಲ್ಲಿ ಬ್ಯಾರಿಕೇಡ್ ಹಾಕಿ ಹೋರಾಟಗಾರರ ತಡೆಯಲು ಪ್ಲಾನ್ ಮಾಡಿದ್ದ ಪೊಲೀಸರು ಕೆಎಸ್‌ಆರ್‌ಪಿ ತುಕಡಿ ಸೇರಿ 100ಕ್ಕೂ ಹೆಚ್ಚು ಪೊಲೀಸರಿಂದ ಭದ್ರತೆ ಕೈಗೊಳ್ಳಲಾಗಿತ್ತು.

ವಾಟಾಳ್ ನೇತೃತ್ವದ ಹೋರಾಟಗಾರರು ಆಗಮಿಸುತ್ತಿದ್ದಂತೆಯೇ ಡ್ಯಾಂನಿಂದ 300 ಮೀಟರ್ ದೂರದಲ್ಲೇ ಹೋರಾಟಗಾರರನ್ನು ತಡೆಯಲಾಯಿತು. ಈ ಸಂದರ್ಭದಲ್ಲಿ ಡ್ಯಾಂ ಒಳಗೆ ಹೋಗಲು ಅನುಮತಿ ಕೊಡುವಂತೆ ಪೊಲೀಸರಿಗೆ ವಾಟಾಳ್ ನಾಗರಾಜ್ ಮನವಿ ಮಾಡಿದರು.

ವಾಟಾಳ್ ಮನವಿಗೆ ಕ್ಯಾರೆ ಎನ್ನದ ಪೊಲೀಸರು ಒಳಗೆ ಬಿಡಲು ಆಗುವುದಿಲ್ಲ ಎಂದರು. ಈ ಸಂದರ್ಭ ಪೊಲೀಸರ ವಿರುದ್ಧ ಅಸಮಾಧಾನಗೊಂಡ ವಾಟಾಳ್ ಹಾಗಿದ್ದರೆ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರನ್ನು ಹೇಗೆ ಒಳಗೆ ಬಿಟ್ಟಿರಿ ಎಂದು ಪ್ರಶ್ನಿಸಿದರು. ಈ ಸಂದರ್ಭ ತಬ್ಬಿಬ್ಬಾದ ಪೊಲೀಸರು, ಒಳಗೆ ಪ್ರವೇಶಿಸಲು ನಿರಾಕರಿಸಿದರು.

ಧರಣಿ ಸ್ಥಳದಲ್ಲೇ ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಫೋಟೋ ಹರಿದು ತಮಿಳುನಾಡು ನಮಗೆ ಹೆಜ್ಜೆ ಹೆಜ್ಜೆಗೂ ತೊಂದರೆ ಕೊಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿ, ಕಾವೇರಿ ನದಿ ಪವಿತ್ರವಾದದ್ದು. ಬೆಂಗಳೂರಿಗೆ ಕುಡಿಯುವ ನೀರಿಗೆ ಪ್ರಮುಖವಾದುದು. ಪೊಲೀಸರು ಹೋರಾಟಗಾರರನ್ನು ಎಳೆದಾಡಬಾರದು. ಎಂದೂ ಸಹ ನಮ್ಮ ಹೋರಾಟ ವಿಫಲವಾಗಿಲ್ಲ. ಯಾವ ಪೊಲೀಸರು ಏನೂ ಮಾಡೋಕೆ ಆಗಲ್ಲ. ಕ್ಲಾಸ್ ತೆಗೆದುಕೊಳ್ಳುತ್ತಲೆ ಕಾವೇರಿ ನದಿ ಬಗ್ಗೆ ಪೊಲೀಸರಿಗೆ ವಾಟಾಳ್ ನಾಗರಾಜ್ ಪಾಠ ಹೇಳಿದರು.

ಬಳಿಕ ಕೆಆರ್‌ಎಸ್ ಒಳಗೆ ನುಗ್ಗಲು ಯತ್ನಿಸಿದಾಗ ವಾಟಾಳ್ ನಾಗರಾಜ್ ಸೇರಿದಂತೆ ಹೋರಾಟಗಾರರನ್ನು ಪೊಲೀಸರು ವಶಕ್ಕೆ ಪಡೆದರು. ಪೊಲೀಸ್ ವಾಹನ ಹತ್ತುವ ವೇಳೆ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ವಾಟಾಳ್, ಪೊಲೀಸರ ಮೂಲಕ ಹೋರಾಟ ಹತ್ತಿಕ್ಕುವ ಕೆಲಸ ಆಗುತ್ತಿದೆ. ನಮ್ಮ ಹೋರಾಟ ಯಾವುದೇ ಕಾರಣಕ್ಕೂ ನಿಲ್ಲಲ್ಲ. ಕಾವೇರಿ ನಮ್ಮದು, ಹೋರಾಟ ನಿರಂತರವಾಗಿ ಇರುತ್ತದೆ ಎಂದು ಹೇಳಿದರು. ಹೋರಾಟಗಾರರಾದ ಕೆ.ಆರ್.ಕುಮಾರ್, ಪ್ರವೀಣ್ ಶೆಟ್ಟಿ, ಶಿವರಾಮೇಗೌಡ ಸೇರಿದಂತೆ ನೂರಾರು ಮಂದಿಯನ್ನು ಪೊಲೀಸರು ವಶಕ್ಕೆ ಪಡೆದರು. ಬಳಿಕ ಠಾಣೆಗೆ ಕರೆದೊಯ್ದು ಬಿಡುಗಡೆ ಮಾಡಿದರು.

ಅಕ್ಷರ ಜಾತ್ರೆಗೆ ಕವನಗಳ ಆಹ್ವಾನ

ಮಂಡ್ಯ, ಅ.5– ಡಾ.ಜೀಶಂಪ ಸಾಹಿತ್ಯ ವೇದಿಕೆ, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಫಿಲಂ ಇವರ ವತಿಯಿಂದ ಕನ್ನಡ ಚಿತ್ರರಂಗದ ಮೇರುನಟರಾದ ಡಾ.ರಾಜ್‌ಕುಮಾರ್, ಡಾ.ವಿಷ್ಣುವರ್ಧನ್ ಹಾಗೂ ಡಾ.ಅಂಬರೀಶ್ ಅವರ ಸ್ಮರಣಾರ್ಥ ಕರ್ನಾಟಕ ರಾಜ್ಯ ಉದಯಿಸಿದ 50 ವರ್ಷಗಳ ಸುವರ್ಣ ಮಹೋತ್ಸವದ ಕನ್ನಡ ಹಬ್ಬ ಅಂಗವಾಗಿ 4ನೇ ಅಖಿಲ ಕರ್ನಾಟಕ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನ.5 ರಂದು ಭಾನುವಾರ ಮಂಡ್ಯದ ಕರ್ನಾಟಕ ಸಂಘದಲ್ಲಿ ಆಯೋಜಿಸಿದ್ದು, ಆಸಕ್ತರಿಂದ ಕವಿಗೋಷ್ಠಿಗೆ ಕವನ ಆಹ್ವಾನಿಸಿದೆ.

ಆಸಕ್ತರು 20 ಸಾಲಿನ 2 ಕವನಗಳು, 6 ಸಾಲಿನ ನಾಲ್ಕು ಚುಟುಕುಗಳು, ಕಿರು ಪರಿಚಯ, ಫೋಟೋ, ಮೊಬೈಲ್ ಸಂಖ್ಯೆ ಹಾಗೂ ವಿಳಾಸವನ್ನು ಅ.15ರೊಳಗೆ ಕಳುಹಿಸಬೇಕು. ವ್ಯಾಟ್ಸಪ್‌ನಲ್ಲಿ ಮೊದಲು ನೋಂದಣಿ ಮಾಡಿಕೊಂಡು, ನಂತರ ಅಂಚೆ ಮೂಲಕ ಕಳುಹಿಸಬೇಕು. ಕವನಗಳು ಯಾವುದಾದರೂ ವಿಷಯವನ್ನು ಒಳಗೊಂಡಿರಬಹುದು.

50 ಮಂದಿ ಕವಿಗಳಿಗೆ ಕವಿಗೋಷ್ಠಿಯಲ್ಲಿ ಕವನ ವಾಚಲು ಅವಕಾಶ ಕಲ್ಪಿಸಲಾಗುವುದು. 20 ಉತ್ತಮ ಕವನಗಳಿಗೆ ಕಾವ್ಯಶ್ರೀ, 20 ಮಂದಿ ಸಾಧಕರಿಗೆ ಕನ್ನಡ ರತ್ನ, ರಾಜ್ಯ ಮಟ್ಟದ ಪ್ರಶಸ್ತಿ ನೀಡಲಾಗುವುದು. ಜೀವಮಾನದಲ್ಲಿ ಅತ್ಯುತ್ತಮ ಸಾಹಿತ್ಯ ಸೇವೆ ಮಾಡಿದ ಸಾಧಕರನ್ನು 4ನೇ ಅಖಿಲ ಕರ್ನಾಟಕ ಕನ್ನಡ ಸಾಹಿತ್ಯ ಸಮ್ಮೇಳನದ ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಗೌರವಿಸಲಾಗುವುದು.

ಆಸಕ್ತ ಕವಿಗಳು, ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದವರು ಕನ್ನಡ ರತ್ನ ಪ್ರಶಸ್ತಿಗಾಗಿ ಹಾಗೂ ಕವಿಗೋಷ್ಠಿಗೆ ಅ.15ರೊಳಗೆ ಹೆಸರು ನೋಂದಾಯಿಸಿಕೊಳ್ಳಬಹುದು. **ವಿಳಾಸ:** ಎಸ್.ಕೃಷ್ಣಸ್ವರ್ಣಸಂದ್ರ, ಕವಿಮಿತ್ರ, ನಂ–767, ಸ್ವರ್ಣಸಂದ್ರ, ಮಂಡ್ಯ–2 ಕಳುಹಿಸಬೇಕು. ಹೆಚ್ಚಿನ ವಿವರ ಹಾಗೂ ವ್ಯಾಟ್ಸಪ್ ನಂ: 9448424380 ಸಂಪರ್ಕಿಸಿ.

ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಉದ್ಘಾಟನೆ

ಅ.16ರಿಂದ ಶ್ರೀರಂಗಪಟ್ಟಣ ದಸರಾ

ದಸರಾ ಲೋಗೋ ಬಿಡುಗಡೆಗೊಳಿಸಿ ಸಚಿವ ಚೆಲುವರಾಯಸ್ವಾಮಿ ಮಾಹಿತಿ



ಮಂಡ್ಯ, ಅ.5– ಈ ಬಾರಿ ಅ.16ರಿಂದ 3 ದಿನಗಳ ಕಾಲ ನಡೆಯುವ ಶ್ರೀರಂಗಪಟ್ಟಣ ದಸರಾವನ್ನು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಉದ್ಘಾಟಿಸಲಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚೆಲುವರಾಯಸ್ವಾಮಿ ತಿಳಿಸಿದರು.

ನಗರದ ಜಿಪಂ ಕಾವೇರಿ ಸಭಾಂಗಣದಲ್ಲಿ ಗುರುವಾರ ಶ್ರೀರಂಗಪಟ್ಟಣ ದಸರಾ–2023ರ ಲೋಗೋ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಅ.16ರಂದು ಮಧ್ಯಾಹ್ನ 3 ಗಂಟೆಗೆ ಶ್ರೀರಂಗಪಟ್ಟಣ ದಸರಾವನ್ನು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಉದ್ಘಾಟಿಸಲಿದ್ದಾರೆ. 3 ದಿನಗಳ ಕಾಲ ಕಾರ್ಯಕ್ರಮ ನಡೆಯಲಿದ್ದು, ನಾಡಿನ ಪರಂಪರೆ ಸಾರುವ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿವೆ ಎಂದರು. ಈ ಹಿಂದೆ ಶ್ರೀರಂಗಪಟ್ಟಣ ದಸರಾವನ್ನು ಜನಪ್ರತಿನಿಧಿಗಳು, ಸಾಹಿತಿಗಳು, ಪ್ರಗತಿಪರರು ಉದ್ಘಾಟಿಸಿದ್ದು, ಈ ಬಾರಿ ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರಿಗೆ ಉದ್ಘಾಟನೆಗೆ ಅವಕಾಶ ನೀಡಿದ್ದೇವೆ. ಬರ ಹಿನ್ನೆಲೆಯಲ್ಲಿ ಈ ಬಾರಿ ದಸರಾವನ್ನು ಸರಳ ಹಾಗೂ ಸಂಪ್ರದಾಯವಾಗಿ ಆಚರಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದರು. ಬರ ಅಧ್ಯಯನ ತಂಡ ಇಂದು ರಾಜ್ಯಕ್ಕೆ ಆಗಮಿಸಿದ್ದು, 3 ದಿನಗಳ ಕಾಲ ವಿವಿಧ ಜಿಲ್ಲೆಗಳಿಗೆ ಭೇಟಿ ನೀಡಿ ಪರಿಶೀಲಿಸಿ ಮಾಹಿತಿ ಸಂಗ್ರಹಿಸಲಿದೆ ಎಂದರು. ಕಾರ್ಯಕ್ರಮದಲ್ಲಿ ಶಾಸಕರಾದ ರಮೇಶ್ ಬಾಬು ಬಂಡಿಸಿದ್ದೇಗೌಡ, ಪಿ.ರವಿಕುಮಾರ್, ದರ್ಶನ್ ಪುಟ್ಟಣ್ಣಯ್ಯ, ಜಿಲ್ಲಾಧಿಕಾರಿ ಡಾ.ಕುಮಾರ, ಜಿಪಂ ಸಿಇಓ ಶೇಕ್ ತನ್ವೀರ್ ಆಸಿಫ್, ಎಸ್ಪಿ ಎನ್.ಯತೀಶ್ ಸೇರಿದಂತೆ ಇನ್ನಿತರರಿದ್ದರು.

ಪ್ರಚಾರಕ್ಕಾಗಿ ಜೆಡಿಎಸ್, ಬಿಜೆಪಿ ನಾಯಕರಿಂದ ಕಾವೇರಿ ಹೋರಾಟ

ಪ್ರಧಾನಿ ಮಧ್ಯಸ್ಥಿಕೆಗೆ ಪ್ರಯತ್ನಿಸಿ: ಸಚಿವ ಚೆಲುವರಾಯಸ್ವಾಮಿ

ಮಂಡ್ಯ, ಅ.5– ಜೆಡಿಎಸ್, ಬಿಜೆಪಿ ನಾಯಕರು ಕಾವೇರಿ ನದಿ ನೀರಿನ ವಿಚಾರದಲ್ಲಿ ಪ್ರಚಾರಕ್ಕಾಗಿ ಪ್ರತಿಭಟನೆ ಮಾಡುವುದನ್ನು ಬಿಟ್ಟು ಪ್ರಧಾನಿ ಮಧ್ಯಸ್ಥಿಕೆಗಾಗಿ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚೆಲುವರಾಯಸ್ವಾಮಿ ಒತ್ತಾಯಿಸಿದರು.

ಗುರುವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರೈತ ಹಾಗೂ ಕನ್ನಡಪರ ಸಂಘಟನೆಗಳು ಕೇಂದ್ರ ಮತ್ತು ರಾಜ್ಯ ಸರ್ಕಾರದ ಗಮನ ಸೆಳೆಯಲು ಪ್ರತಿಭಟನೆ ನಡೆಸುತ್ತಾರೆ. ಬೆಳೆ ಹಾಗೂ ನೀರಿನ ರಕ್ಷಣೆ ವಿಷಯದಲ್ಲಿ ಅವರಿಗೆ ಕಾಳಜಿ ಇಲ್ಲ ಎಂದರು. ಕಾವೇರಿ ವಿವಾದದಲ್ಲಿ ಸುಪ್ರೀಂಕೋರ್ಟ್ ತೀರ್ಪು ಹಾಗೂ ಕೇಂದ್ರ ಸರ್ಕಾರದ 2 ತಾಂತ್ರಿಕ ಸಮಿತಿಗಳ ಆದೇಶ ಪ್ರಮುಖವಾಗಿದೆ. ಪ್ರಕರಣವನ್ನು ಸೌಹಾರ್ದಯುತವಾಗಿ ಬಗೆಹರಿಸಲು ಕೇಂದ್ರ ಸರ್ಕಾರ ಮಧ್ಯಪ್ರವೇಶ ಮಾಡಬೇಕು. ಬಿಜೆಪಿಯವರಿಗೆ ರಾಜ್ಯದ ಜನರ ವಿಷಯದಲ್ಲಿ ಕನಿಷ್ಠ ಕೃತಜ್ಞತೆ ಇಲ್ಲ. 25 ಜನ ಸಂಸದರು ಗೆದ್ದಿದ್ದಾರೆ. ಕಾವೇರಿ ವಿಷಯದಲ್ಲಿ ಅವರ ಪಾತ್ರ ಏನು. ಮಂಡ್ಯಕ್ಕೆ ಬಂದು ಮಾಧ್ಯಮದವರ ಎದುರು ಪ್ರತಿಭಟನೆ ಮಾಡಿ ಪ್ರಚಾರ ಮಾಡುವುದಕ್ಕಷ್ಟೇ ಸೀಮಿತವೇ ಎಂದು ಪ್ರಶ್ನಿಸಿದರು.



ರಾಜಕಾರಣಕ್ಕಾಗಿ ಪ್ರಧಾನಿ ಅವರನ್ನು ಭೇಟಿ ಮಾಡುವ ನಾಯಕರು ಕಾವೇರಿ ವಿಷಯದಲ್ಲಿ ಪ್ರಧಾನಿಯವರ ಜೊತೆ ಏಕೆ ಚರ್ಚೆ ಮಾಡುತ್ತಿಲ್ಲ. ಬಸವರಾಜ ಬೊಮ್ಮಾಯಿ ಸೇರಿದಂತೆ ಬಿಜೆಪಿ ನಾಯಕರು ಏನು ಮಾಡುತ್ತಿದ್ದಾರೆ. ಕಾವೇರಿ ನದಿ ಪಾತ್ರದ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ನಡೆಸಿ ಸಮಸ್ಯೆ ಬಗೆಹರಿಸಲು ಕೇಂದ್ರ ಮಧ್ಯ ಪ್ರವೇಶ ಮಾಡಬೇಕು ಎಂದರು.

ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡಿದೆ. 2 ಬಾರಿ ಸರ್ವಪಕ್ಷ ಸಭೆ ನಡೆಸಿದೆ. ಕೇಂದ್ರದಲ್ಲಿ ಸರ್ವಪಕ್ಷ ಸಂಸದರ ಜೊತೆಯೂ ಚರ್ಚೆ ನಡೆಸಲಾಗಿದೆ. 3 ದಿನ ದೆಹಲಿಯಲ್ಲೇ ಉಳಿದು ಜಲಸಂಪನ್ಮೂಲ ಸಚಿವರನ್ನು ಭೇಟಿ ಮಾಡಿ ವಾಸ್ತವವನ್ನು ಮನವರಿಕೆ ಮಾಡಿಕೊಟ್ಟಿದ್ದೇವೆ. ಪ್ರಧಾನಿ ಭೇಟಿಗೆ ಎಷ್ಟೇ ಪ್ರಯತ್ನ ನಡೆಸಿದ್ದರೂ ಪ್ರಯೋಜನವಾಗಲಿಲ್ಲ. ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಹಾಗೂ ಇತರರು ಸಹಾಯ ಮಾಡಲಿಲ್ಲ. ಪ್ರಧಾನ ಮಂತ್ರಿ ಮಧ್ಯಪ್ರವೇಶ ಮಾಡಲಾಗುವುದಿಲ್ಲ ಎಂದು ರಾಜ್ಯದ ಬಿಜೆಪಿ ನಾಯಕರೇ ಹೇಳುತ್ತಿರುವುದು ಸರಿಯಲ್ಲ. ಈ ಹಿಂದೆ ವಾಜಪೇಯಿ ಕೂಡ ಅಂತರಾಜ್ಯ ನದಿ ವಿವಾದದಲ್ಲಿ ಮಧ್ಯಪ್ರವೇಶ ಮಾಡಿದ್ದರು. ಬಿಜೆಪಿಯವರು ಪ್ರಧಾನಿ ಬಳಿ ಚರ್ಚೆ ಮಾಡದೇ ತಾವಾಗಿಯೇ ಪ್ರಧಾನಿ ಮಧ್ಯಪ್ರವೇಶ ಸಾಧ್ಯವಿಲ್ಲ ಎಂದು ಘೋಷಿಸುತ್ತಿದ್ದಾರೆ. ಹಾಗಿದ್ದ ಮೇಲೆ ರಾಜಕಾರಣ ಮಾಡುವುದನ್ನು ಬಿಟ್ಟು ಮನೆಯಲ್ಲಿರಲಿ ಎಂದು ಕಿಡಿಕಾರಿದರು.

ಇಂಡಿಯಾ ಘಟಬಂಧನ್‌ಗಾಗಿ ತಮಿಳುನಾಡಿಗೆ ನೀರು ಬಿಡಲಾಗಿದೆ ಎಂಬ ಆರೋಪ ಆಧಾರರಹಿತ. ರಾಜ್ಯ ಹಿತಾಸಕ್ತಿ ವಿಷಯದಲ್ಲಿ ಎರಡೂ ರಾಜ್ಯಗಳು ತಮ್ಮದೇ ಆದ ನಿಟ್ಟಿನಲ್ಲಿ ಕೆಲಸ ಮಾಡುತ್ತವೆ. ರಾಜಕೀಯವೇ ಬೇರೆ, ರಾಜ್ಯದ ಹಿತಾಸಕ್ತಿಯೇ ಬೇರೆ. ರಾಜ್ಯ ಸರ್ಕಾರ ಹೇಳದೇ, ಕೇಳದೆ ತಮಿಳುನಾಡಿಗೆ ನೀರು ಬಿಟ್ಟಿದೆ ಎಂದು ಬಿಜೆಪಿ ನಾಯಕರು ಆರೋಪ ಮಾಡುತ್ತಾರೆ. ತಾಂತ್ರಿಕ ಸಮಿತಿಗಳ ಆದೇಶವನ್ನು ಎಲ್ಲಾ ಕಾಲದಲ್ಲೂ ಸರ್ಕಾರಗಳು ಪಾಲನೆ ಮಾಡಿವೆ. ಸಂಕಷ್ಟದ ಸಂದರ್ಭ ಆದೇಶ ಪಾಲನೆ ಮಾಡಲಾಗದ ಬಗ್ಗೆ ನಾವು ಸಾಕಷ್ಟು ಮನವರಿಕೆ ಮಾಡಿಕೊಟ್ಟಿದ್ದೇವೆ. ಈ ಪ್ರಯತ್ನದ ಹಂತದಲ್ಲಿ ಬಿಜೆಪಿ, ಜೆಡಿಎಸ್ ಪಕ್ಷಗಳ ನಾಯಕರು ರಾಜ್ಯಸರ್ಕಾರಕ್ಕೆ ಸಹಕಾರ ನೀಡಿಲ್ಲ. ಹೀಗಾಗಿ ಕಾವೇರಿ ವಿಷಯದಲ್ಲಿನ ಹೊಣೆಗಾರಿಕೆ ಬಿಜೆಪಿಯವರದ್ದೇ. ನಾಟಕೀಯವಾಗಿ ಪ್ರತಿಭಟನೆ ಮಾಡುತ್ತಿದ್ದಾರೆಯೇ ಹೊರತು ಪ್ರಾಮಾಣಿಕವಾಗಿ ಸ್ಪಂದಿಸುತ್ತಿಲ್ಲ ಎಂದು ಆರೋಪಿಸಿದರು.

ಕಾವೇರಿ ನೀರು ನಿಯಂತ್ರಣಾ ಸಮಿತಿ ಇದೇ 12 ರಂದು ಮತ್ತೆ ಸಭೆ ನಡೆಸಲಿದ್ದು, ಅಂದು ತಮಿಳುನಾಡಿಗೆ ನೀರು ಬಿಡಲು ಸಾಧ್ಯವಿಲ್ಲ ಎಂದು ವಾದಿಸುತ್ತೇವೆ. ರಾಜ್ಯದಲ್ಲಿ 195 ತಾಲೂಕುಗಳಲ್ಲಿ ಬರ ಪರಿಸ್ಥಿತಿ ಇದೆ. ಅದರ ಕುರಿತು ಸಚಿವ ಸಂಪುಟ ಹಾಗೂ ಸಂಪುಟ ಉಪಸಮಿತಿಯಲ್ಲಿ ಚರ್ಚಿಸಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಅದರ ಆಧಾರದ ಮೇಲೆ ಕೇಂದ್ರ ಸರ್ಕಾರದ ಅಧಿಕಾರಿಗಳ 3 ತಂಡಗಳು ರಾಜ್ಯಕ್ಕೆ ಭೇಟಿ ನೀಡಿದ್ದು, 4 ದಿನಗಳ ಕಾಲ ಬರ ಅಧ್ಯಯನ ನಡೆಸಲಿವೆ ಎಂದರು.

ಅನಧಿಕೃತ ಶಾಲೆಗಳ ಪಟ್ಟಿ

ಮಂಡ್ಯ, ಅ.5– ಪಾಂಡವಪುರ ತಾಲೂಕಿನ ಚಿನಕುರುಳಿ ಗ್ರಾಮದ ಹಿಂಪೋ ಕ್ಯಾಂಪಸ್ ಪೂರ್ವ ಪ್ರಾಥಮಿಕ ಶಾಲೆ ಹಾಗೂ ಕ್ಯಾತನಹಳ್ಳಿ ಗ್ರಾಮದ ಹಿಂಪೋಕ್ಯಾಂಪಸ್ ಪೂರ್ವ ಪ್ರಾಥಮಿಕ ಶಾಲೆಗಳು ಕರ್ನಾಟಕ ಶಿಕ್ಷಣ ಕಾಯ್ದೆ 1983 ಸೆಕ್ಷನ್ 30–31 ಪ್ರಕಾರ ಶಾಲಾ ಶಿಕ್ಷಣ ಇಲಾಖಾ ವತಿಯಿಂದ ನೋಂದಣಿ ಪಡೆಯದೆ ನಿಯಮಬಾಹಿರವಾಗಿ ಪೂರ್ವ ಪ್ರಾಥಮಿಕ ಶಾಲೆಗಳನ್ನು ನಡೆಸುತ್ತಿರುವುದು ಕಂಡುಬಂದಿರುತ್ತದೆ ಈ ಹಿನ್ನೆಲೆಯಲ್ಲಿ ಸದರಿ ಶಾಲೆಗಳನ್ನು ಅನಧಿಕೃತ ಶಾಲೆಗಳ ಪಟ್ಟಿಗೆ ಸೇರಿಸಲಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿಗಳು ತಿಳಿಸಿದ್ದಾರೆ.

ಪೋಷಕರು ಮಕ್ಕಳನ್ನು ಅನಧಿಕೃತ ಶಾಲೆಗೆ ದಾಖಲಾತಿ ಮಾಡಬಾರದು. ಒಂದು ವೇಳೆ ದಾಖಲು ಮಾಡಿದ್ದಲ್ಲಿ ಸಂಬಂಧಿಸಿದ ಪಾಲಕರೇ ಜವಾಬ್ದಾರರು ಎಂದು ಬಿಇಓ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಘಲಯ ಪಿಎಸಿಎಸ್‌ಗೆ ಅತ್ಯುತ್ತಮ ಸಹಕಾರ ಸಂಘ ಪ್ರಶಸ್ತಿ



ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಹೆಚ್.ಕೆ.ಅಶೋಕ್

ಕೆ.ಆರ್.ಪೇಟೆ, ಅ.5– ತಾಲೂಕಿನ ಅಘಲಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ 2022–23ನೇ ಸಾಲಿನಲ್ಲಿ ಶೇ.100ರಷ್ಟು ಸಾಲ ವಸೂಲಾತಿ ಮಾಡಿ, ರೈತರಿಗೆ ಉತ್ತಮ ಸೇವೆ ನೀಡಿರುವುದನ್ನು ಪರಿಗಣಿಸಿ ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ವತಿಯಿಂದ ಉತ್ತಮ ಸಹಕಾರ ಬ್ಯಾಂಕ್ ಪ್ರಶಸ್ತಿ ನೀಡಿ ಗೌರವಿಸಲಾಗಿದೆ ಎಂದು ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಹೆಚ್.ಕೆ.ಅಶೋಕ್ ತಿಳಿಸಿದರು.

ಅಘಲಯದ ಸಂಘದ ಕಚೇರಿ ಆವರಣದಲ್ಲಿ ಸಂಘದ ಅಧ್ಯಕ್ಷೆ ಮಂಜಮ್ಮ ಹಾಗೂ ಕಾರ್ಯದರ್ಶಿ ಮುರುಳೀಧರ್ ಅವರಿಗೆ ಪ್ರಶಸ್ತಿ ಪತ್ರ, ಮತ್ತು ಸ್ಮರಣಿಕೆ ಪ್ರದಾನ ಮಾಡಿ ಅವರು ಮಾತನಾಡಿದರು.


ಅಘಲಯ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿ ಆರಂಭದಿಂದ ಇಂದಿನವರೆಗೆ ಸೇವಾ ಮನೋಭಾವದಿಂದ ಆಡಳಿತ ನಡೆಸಿದೆ. ಇದರಿಂದಾಗಿ ಸತತ ಆದಾಯ ಗಳಿಸಿದ್ದು, ಶೇ.100ರಷ್ಟು ಸಾಲ ವಸೂಲಿ ಮಾಡಿ ಸಂಘವನ್ನು ಉತ್ತಮ ಸ್ಥಿತಿಯಲ್ಲಿ ಮುನ್ನಡೆಸುತ್ತಿದ್ದಾರೆ. ಇದಕ್ಕಾಗಿ ಈ ಬಾರಿಯೂ ಡಿಸಿಸಿ ಬ್ಯಾಂಕ್‌ನಿಂದ ಉತ್ತಮ ಸಂಘ ಎಂದು ಪ್ರಶಸ್ತಿ ನೀಡಿ ಗೌರವಿಸಲಾಗಿದೆ ಎಂದರು.

ಅಘಲಯಕ್ಕೆ ಡಿಸಿಸಿ ಬ್ಯಾಂಕ್ ಮಂಜೂರು ಮಾಡಲಾಗಿದೆ. ರಿಸರ್ವ್ ಬ್ಯಾಂಕ್ ಅನುಮತಿಗಾಗಿ ಕಾಯುತ್ತಿದ್ದೇವೆ. ಅನುಮತಿ ಸಿಕ್ಕ ತಕ್ಷಣ ಬ್ಯಾಂಕ್ ಶಾಖೆ ಆರಂಭಿಸಲಾಗುವುದು. ಮುಂದೆಯೂ ಇದೇ ರೀತಿ ರೈತರಿಗೆ ಉತ್ತಮ ಸೇವೆ ನೀಡಿ ಪ್ರಶಸ್ತಿ ಪಡೆಯುತ್ತಿರಲಿ. ಸಂಘದ ಅಭಿವೃದ್ಧಿಗೆ ನಮ್ಮ ಸಹಕಾರ ಯಾವಾಗಲೂ ಇರುತ್ತದೆ ಎಂದರು.

ತಾಪಂ ಮಾಜಿ ಅಧ್ಯಕ್ಷ ಎ.ಎನ್.ಜಾನಕೀರಾಂ ಮಾತನಾಡಿ, ಸಹಕಾರ ಸಂಘಗಳು ರೈತರ ಜೀವನಾಡಿಯಾಗಿವೆ. ಅವುಗಳ ಉಳಿವಿಗೆ ಎಲ್ಲರೂ ಸೇವಾ ಭಾವನೆಯಿಂದ ಕೆಲಸ ಮಾಡಬೇಕು. ತಾಲೂಕಿನಲ್ಲಿ ಅಘಲಯ ಕೃಷಿ ಪತ್ತಿನ ಸಹಕಾರ ಸಂಘವು ಉತ್ತಮ ವಹಿವಾಟು ನಡೆಸುವ ಮೂಲಕ ಒಳ್ಳೆಯ ಹೆಸರು ಗಳಿಸಿದೆ. ಇದಕ್ಕೆ ಸಂಘದ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗದ ಪರಿಶ್ರಮ ಕಾರಣ ಎಂದರು.

ಕಾರ್ಯಕ್ರಮದಲ್ಲಿ ತಾಲೂಕು ಜೆಡಿಎಸ್ ಅಧ್ಯಕ್ಷ ಎ.ಎನ್.ಜಾನಕೀರಾಂ, ಸಂಘದ ಸಿಇಓ ಮುರುಳೀಧರ್, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಎ.ಎಸ್.ರಮೇಶ್, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಎ.ಎಸ್.ಶ್ರೀಧರ್, ಗ್ರಾಪಂ ಅಧ್ಯಕ್ಷೆ ನೇತ್ರಾವತಿ, ಆಶಾ, ಹಿರಿಯ ಸಹಕಾರಿ ಧುರೀಣ ಧರಣಿ ಶಿವನಂಜೇಗೌಡ, ಸಂಘದ ಉಪಾಧ್ಯಕ್ಷ ಮಂಜು, ನಿರ್ದೇಶಕರಾದ ಎನ್.ಎಸ್.ಮಂಜೇಗೌಡ, ಎ.ಎಸ್.ಶ್ರೀಧರ್, ಎನ್.ಡಿ.ಕೃಷ್ಣಸಿಂಗ್, ಎನ್.ಎಸ್.ಆಶಾ, ರಾಜೇಗೌಡ, ದೇವಮ್ಮ, ಪಾರ್ಥಸಾರಥಿ, ಮಂಜುನಾಥ್, ಎನ್.ಡಿ.ರಾಮೇಗೌಡ, ಅಘಲಯ ಡೇರಿ ಅಧ್ಯಕ್ಷ ಕುಮಾರ್, ಗ್ರಾಪಂ ಉಪಾಧ್ಯಕ್ಷ ಯೋಗೇಶ್, ಗ್ರಾಪಂ ಮಾಜಿ ಅಧ್ಯಕ್ಷ ಹೋಬಳಿ ಲೋಕೇಶ್, ಶಿವಲಿಂಗೇಗೌಡ, ಎ.ಟಿ.ಶಂಕರ್ ನಾರಾಯಣ್, ಸಂಘದ ಮಾರಾಟ ಗುಮಾಸ್ತರಾದ ಎ.ಸಿ.ರಾಜೇಶ್, ರಾಮೇಗೌಡ ಮತ್ತಿತರರಿದ್ದರು.

ಐಜಿಪಿ ರವಿಕಾಂತೇಗೌಡರ ತೇಜೋವಧೆ ಖಂಡಿಸಿ ಪ್ರತಿಭಟನೆ



ಮದ್ದೂರು, ಅ.5– ಐಜಿಪಿ ಡಾ.ಬಿ.ಆರ್.ರವಿಕಾಂತೇಗೌಡರ ತೇಜೋವಧೆ ಖಂಡಿಸಿ ನಾಡಪ್ರಭು ಕೆಂಪೇಗೌಡ ಒಕ್ಕಲಿಗರ ಸಂಘ, ವಿವಿಧ ಸಂಘ ಸಂಸ್ಥೆಗಳು ಹಾಗೂ ನಾಗರಿಕರು ಪಟ್ಟಣದಲ್ಲಿ ಬೆಂಗಳೂರು–ಮೈಸೂರು ಹೆದ್ದಾರಿ ತಡೆದು ಗುರುವಾರ ಪ್ರತಿಭಟನೆ ನಡೆಸಿದರು.

ಇಲ್ಲಿನ ಪ್ರವಾಸಿ ಮಂದಿರದ ಬಳಿ ಜಮಾಯಿಸಿದ ಪ್ರತಿಭಟನಾಕಾರರು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಬೈಕ್ ಜಾಥಾ ನಡೆಸಿದರು. ರವಿಕಾಂತೇಗೌಡರಿಗೆ ಅನಗತ್ಯವಾಗಿ ಕಿರುಕುಳ ನೀಡುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಗ್ರೇಡ್–2 ತಹಸೀಲ್ದಾರ್ ಸೋಮಶೇಖರ್ ಅವರಿಗೆ ಮನವಿ ಸಲ್ಲಿಸಿದರು.

ನಾಡಪ್ರಭು ಕೆಂಪೇಗೌಡ ಒಕ್ಕಲಿಗರ ಸಂಘದ ಅಧ್ಯಕ್ಷ ಪಿ.ಶಿವಪ್ಪ ಮಾತನಾಡಿ, ಡಾ.ರವಿಕಾಂತೇಗೌಡರು ತಮ್ಮ ಅಧಿಕಾರವಧಿಯಲ್ಲಿ ಭೂ ಮಾಫಿಯಾ, ಮಟ್ಕಾ ಮತ್ತಿತರ ಸಾಮಾಜಿಕ ಪಿಡುಗಿನ ವಿರುದ್ಧ ಹೋರಾಟ ನಡೆಸಿ ಜನ ಮನ್ನಣೆಗೆ ಪಾತ್ರರಾಗಿದ್ದಾರೆ. ಇತಿಹಾಸದಲ್ಲಿಯೇ ಪ್ರಪ್ರಥಮ ಬಾರಿಗೆ ಪೊಲೀಸ್ ಇಲಾಖೆಯಲ್ಲಿ ಕನ್ನಡದಲ್ಲಿ ಪೆರೇಡ್ ಮಾಡಿಸುವ ಮೂಲಕ ಭಾಷಾಭಿಮಾನ ಮೆರೆದಿದ್ದಾರೆ ಎಂದರು.

ದಕ್ಷ ಪೊಲೀಸ್ ಅಧಿಕಾರಿ ಡಾ.ಬಿ.ಆರ್.ರವಿಕಾಂತ್‌ಗೌಡರ ವಿರುದ್ಧ ಅಪಪ್ರಚಾರ ಮಾಡುತ್ತಿರುವ ಕಿಡಿಗೇಡಿಗಳ ವಿರುದ್ಧ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಜಿಲ್ಲಾ ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಆರ್.ಮೋಹನ್‌ಕುಮಾರ್ ಮಾತನಾಡಿದರು. ಒಕ್ಕಲಿಗರ ಸಂಘದ ನಿರ್ದೇಶಕ ಚಂದ್ರು, ಡಿಸಿಸಿ ಬ್ಯಾಂಕ್ ನಿರ್ದೇಶಕ ಪಿ.ಸಂದರ್ಶ, ಮನ್‌ಮುಲ್ ನಿರ್ದೇಶಕಿ ರೂಪ, ಮುಖಂಡರಾದ ರಾಜೀವ್, ಡಾ.ಕೃಷ್ಣ, ವಿ.ಕೆ.ಜಗದೀಶ್, ರಾಮಕೃಷ್ಣ, ರಾಮಚಂದ್ರು, ಇಂದು ಕುಮಾರ್, ಬಿ.ವಿ.ಶಂಕರೇಗೌಡ, ರಾಜೇಶ್, ಶಂಕರಯ್ಯ, ವಿ.ಟಿ.ರವಿಕುಮಾರ್, ಶಿವಕುಮಾರ್, ಕೃಷ್ಣ ತಮ್ಮಯ್ಯ, ಎಸ್.ಮಹೇಶ್, ಅಶೋಕ್, ರಾಮಯ್ಯ ಇದ್ದರು.

ಗಣೇಶೋತ್ಸವ ಅಂಗವಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರ

ಪಾಂಡವಪುರ, ಅ.5– ಪಟ್ಟಣದ ಹಳೇ ಬಸ್ ನಿಲ್ದಾಣದಲ್ಲಿರುವ ಗಣಪತಿ ಪೆಂಡಾಲ್‌ನಲ್ಲಿ ಗಣೇಶೋತ್ಸವ ಅಂಗವಾಗಿ ಸಿದ್ದಿ ವಿನಾಯಕ ಸೇವಾ ಸಮಿತಿ, ಫ್ರೆಂಚ್ ರಾಕ್ಸ್ ಲಯನ್ ಕ್ಲಬ್ ಆಫ್ ಪಾಂಡವಪುರ ಹಾಗೂ ಮೈಸೂರಿನ ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ಶಿಬಿರಕ್ಕೆ ಫ್ರೆಂಚ್ ರಾಕ್ಸ್ ಲಯನ್ ಕ್ಲಬ್‌ನ ಟಿ.ಪಿ.ರೇವಣ್ಣ ಚಾಲನೆ ನೀಡಿದರು. ಶಿಬಿರದಲ್ಲಿ ಮೈಸೂರಿನ ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ವೈದ್ಯರು ಸಾರ್ವಜನಿಕರಿಗೆ ಆರೋಗ್ಯ ತಪಾಸಣೆ ನಡೆಸಿದರು. ಶಿಬಿರದಲ್ಲಿ ಉಚಿತವಾಗಿ ಬಿಪಿ, ಸಕ್ಕರೆ ಕಾಯಿಲೆ, ಇಸಿಜಿ, ಎಕೋ ಸೇರಿದಂತೆ ಹಲವು ತಪಾಸಣೆ ನಡೆಸಲಾಯಿತು. 200ಕ್ಕೂ ಹೆಚ್ಚು ಮಂದಿ ತಪಾಸಣೆಗೆ ಒಳಪಟ್ಟರು.

ಫ್ರೆಂಚ್‌ರಾಕ್ಸ್ ಲಯನ್ ಕ್ಲಬ್ ಟಿ.ಪಿ.ರೇವಣ್ಣ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಕೆಲಸದ ಒತ್ತಡ ಹಾಗೂ ಅಪೌಷ್ಟಿಕತೆಯಿಂದಾಗಿ ಜನರು ರೋಗ ರುಜಿನಗಳಿಗೆ ಒಳಗಾಗುತ್ತಿದ್ದು, ಆಸ್ಪತ್ರೆಗೆ ಸಾವಿರಾರು ರೂ. ವ್ಯರ್ಥ ಮಾಡುವಂತಹ ಸ್ಥಿತಿ ಬಂದಿದೆ. ಪ್ರತಿಯೊಬ್ಬರಿಗೂ ಆರೋಗ್ಯ ಮುಖ್ಯವಾಗಿದ್ದು, ಸಾರ್ವಜನಿಕರಿಗೆ ನೆರವು ನೀಡುವ ಉದ್ದೇಶದಿಂದ ಉಚಿತ ಆರೋಗ್ಯ ತಪಾಸಣೆ ಆಯೋಜಿಸಲಾಗಿದೆ. ಸಾರ್ವಜನಿಕರು ಇಂತಹ ಶಿಬಿರಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.



ಸಮಾರಂಭದಲ್ಲಿ ಸಿದ್ದಿ ವಿನಾಯಕ ಸೇವಾ ಸಮಿತಿ ಸುಬ್ರಹ್ಮಣ್ಯ, ಮನೋಜ್, ಫ್ರೆಂಚ್ ರಾಕ್ಸ್ ಲಯನ್ ಕ್ಲಬ್ ಪ್ರಧಾನ ಕಾರ್ಯದರ್ಶಿ ಅಶೋಕ್, ಖಜಾಂಚಿ ದಿಲೀಪ್ ಕುಮಾರ್, ಸರ್ಕಾರಿ ನೌಕರ ಸಂಘದ ಅಧ್ಯಕ್ಷ ಹಾಗೂ ಸಾರ್ವಜನಿಕ ಆಸ್ಪತ್ರೆಯ ಆಡಳಿತಾಧಿಕಾರಿ ಡಾ.ಸಿ.ಎ.ಅರವಿಂದ್ ಸೇರಿದಂತೆ ಸಿದ್ದಿ ವಿನಾಯಕ ಸಮಿತಿ ಪದಾಧಿಕಾರಿಗಳು, ಸದಸ್ಯರು ಭಾಗವಹಿಸಿದ್ದರು.

ಉದ್ಯಮಶೀಲತಾ ಶಿಬಿರ

ಮಂಡ್ಯ, ಅ.5– ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಸರ್ಕಾರ ಬೆಂಗಳೂರು, ಕರ್ನಾಟಕ ಉದ್ಯಮಶೀಲತಾ ಅಭಿವೃದ್ಧಿ ಕೇಂದ್ರ (ಸಿಡಾಕ್), ಧಾರವಾಡ ಹಾಗೂ ಜಿಲ್ಲಾ ಕೈಗಾರಿಕಾ ಕೇಂದ್ರ, ಮಂಡ್ಯ ಇವರ ಸಂಯುಕ್ತಾಶ್ರಯದಲ್ಲಿ ಮಂಡ್ಯ ಜಿಲ್ಲೆಯಲ್ಲಿ ಸ್ವಂತ ಉದ್ಯಮ ಸ್ಥಾಪಿಸಲು ಬಯಸುವ ಪರಿಶಿಷ್ಟ ಜಾತಿ ಆಸಕ್ತ ಅಭ್ಯರ್ಥಿಗಳಿಗೆ ಒಂದು ದಿನದ ಉದ್ಯಮಶೀಲತಾ ತಿಳುವಳಿಕಾ ಶಿಬಿರವನ್ನು ಅ.9ರಂದು ಆಯೋಜಿಸಲಾಗಿದೆ. ಅರ್ಜಿ ಸಲ್ಲಿಸಲು ಅ.7 ಕೊನೆ ದಿನ. ಮಾಹಿತಿಗೆ ಮೊ: 9008194396/7760145784 ಸಂಪರ್ಕಿಸಬಹುದು.

ಮೈಸೂರಲ್ಲಿ ಶೌರ್ಯ ಜಾಗರಣ ರಥ

● ಸನಾತನ ಧರ್ಮ ಪೂಜಿಸುವುದರೊಂದಿಗೆ ಅನ್ಯಧರ್ಮ ಗೌರವಿಸಬೇಕು ● ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಸಲಹೆ



ಮೈಸೂರು,ಅ.5(ಎಂಟಿವೈ)– ಸನಾತನ ಧರ್ಮವನ್ನು ರಕ್ಷಿಸುವುದರೊಂದಿಗೆ ಅನ್ಯಧರ್ಮವನ್ನು ಗೌರವಿಸುವ ಗುಣ ನಮ್ಮಲ್ಲಿರಬೇಕು ಎಂದು ಗಣಪತಿ ಆಶ್ರಮದ ಕಿರಿಯ ಸ್ವಾಮೀಜಿ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಸಲಹೆ ನೀಡಿದ್ದಾರೆ.

ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದ ಬಳಿ ವಿಶ್ವ ಹಿಂದೂ ಪರಿಷದ್‌ಗೆ 60 ವರ್ಷ ಸಂದ ಹಿನ್ನೆಲೆಯಲ್ಲಿ ದೇಶದಾದ್ಯಂತ ಹಮ್ಮಿಕೊಂಡಿರುವ 'ಶೌರ್ಯ ಜಾಗರಣ ರಥಯಾತ್ರೆ'ಯನ್ನು ಬರಮಾಡಿಕೊಂಡು ಮಾತನಾಡಿದ ಅವರು, ಭಜರಂಗದಳ ಹಾಗೂ ವಿಶ್ವಹಿಂದೂ ಪರಿಷದ್ ವತಿಯಿಂದ ಎಲ್ಲರಲ್ಲೂ ಸತಾನತ ಧರ್ಮದ ಜಾಗರಣ ಹಾಗೂ ಜಾಗೃತಿ ಮೂಡಿಸಲು ರಥೋತ್ಸವ ಹಮ್ಮಿಕೊಂಡಿರುವುದು ಶ್ಲಾಘನೀಯ. ಯುವಕರೂ ಒಳಗೊಂಡಂತೆ ಎಲ್ಲಾ ವಯೋಮಾನದವರಲ್ಲೂ ಧರ್ಮದ ಬಗ್ಗೆ ಜಾಗೃತಿ ಮೂಡಿಸುವ ಸಂಕಲ್ಪದಿಂದ ಈ ರಥೋತ್ಸವ ನಡೆಯುತ್ತಿದೆ. ಉಡುಪಿಯವರೆಗೂ ರಥೋತ್ಸವ ನಡೆಸಲು ಕಾರ್ಯಕ್ರಮ ರೂಪಿಸಲಾಗಿದೆ. ಸನಾತನ ಧರ್ಮದ ಬಗ್ಗೆ ಎಲ್ಲರಿಗೂ ಅರಿವು ಮೂಡಿಸಬೇಕು ಎಲ್ಲರೂ ಸನಾತನ ಧರ್ಮ ಕಾಪಾಡಿಕೊಳ್ಳಬೇಕು. ಧರ್ಮ ಚೆನ್ನಾಗಿದ್ದರೆ, ದೇಶ ಚೆನ್ನಾಗಿರುತ್ತದೆ. ದೇಶ ಚೆನ್ನಾಗಿರಬೇಕಾದರೆ ಜನ ಚೆನ್ನಾಗಿರಬೇಕು. ಆ ಜನರಲ್ಲಿ ಸಾಮರಸ್ಯ ಮೂಡಿಸಬೇಕು. ನಮ್ಮ ಧರ್ಮವನ್ನು ಪೂಜಿಸುವುದರೊಂದಿಗೆ ಅನ್ಯ ಧರ್ಮವನ್ನು ಗೌರವಿಸಬೇಕು. ಇದು ನಮ್ಮ ಸಂಪ್ರದಾಯ, ನಮ್ಮ ಸಿದ್ಧಾಂತ. ನಮ್ಮ ಧರ್ಮವನ್ನು ಯಾವುದೇ ಕಾರಣಕ್ಕೂ ಮರೆಯಬಾರದು. ಇನ್ನಷ್ಟು ತಿಳುವಳಿಕೆ ಮೂಡಿಸಲು ಈ ರಥೋತ್ಸವ ನಡೆಸಲಾಗುತ್ತಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಇದೇ ವೇಳೆ ಬಜರಂಗದಳದ ಸರ ಸಂಚಾಲಕ ಸೂರ್ಯನಾರಾಯಣ್ ಮಾತನಾಡಿ, ವಿಶ್ವ ಹಿಂದೂ ಪರಿಷದ್‌ಗೆ 60 ವರ್ಷ ಪೂರ್ಣಗೊಂಡಿದೆ. ಇದಕ್ಕಾಗಿ ದೇಶದಾದ್ಯಂತ ಷಷ್ಠಿಪೂರ್ತಿ ಕಾರ್ಯಕ್ರಮವನ್ನು ಬಜರಂಗದಳ ಶೌರ್ಯ ಜಾಗರಣ ರಥಯಾತ್ರೆ ಮೂಲಕ ನಡೆಸುತ್ತಿದೆ. ಸೆ.30ರಂದು ಉದ್ಘಾಟನೆಗೊಂಡಿರುವ ರಥೋತ್ಸವ ಅ.16ರಂದು ಸಮಾರೋಪಗೊಳ್ಳಲಿದೆ. ಈಗಾಗಲೇ ದೇಶದಲ್ಲಿ 500ಕ್ಕೂ ಹೆಚ್ಚು ರಥಯಾತ್ರೆ ನಡೆಯುತ್ತಿದೆ. ಆ ಮೂಲಕ ಹಿಂದು ಸಮಾಜ ಮತ್ತು ಹಿಂದು ಯುವಕರನ್ನು ಜಾಗೃತಗೊಳಿಸಲಾಗುತ್ತದೆ. ಮುಂಬರುವ ದಿನಗಳಲ್ಲಿ ಹಿಂದೂ ಸಮಾಜದ ಮೇಲೆ ಆಗುವ ಅನ್ಯಾಯ, ಅಪಮಾನ, ಆಕ್ರಮಣ ಎದುರಿಸಲು ಕರೆ ನೀಡಲು ರಥೋತ್ಸವ ನಡೆಸಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಬ್ರಾಹ್ಮಣ ಸಂಘದ ಅಧ್ಯಕ್ಷ ಟಿ.ಡಿ.ಪ್ರಕಾಶ್, ಬಜರಂಗದಳದ ಸಂಯೋಜಕ ಕೆ.ಆರ್.ಸುನೀಲ್, ಮುಖಂಡರಾದ ಜಗನ್ನಾಥ್ ಶಾಸ್ತ್ರಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಸಾವಿರಾರು ಹಿಂದುಗಳ ತ್ಯಾಗದ ಫಲವಾಗಿ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದೆ

ರಂಗಾಯಣದ ಮಾಜಿ ನಿರ್ದೇಶಕ ಅಡ್ಡಂಡ ಕಾರ್ಯಪ್ಪ



ಮೈಸೂರು, ಅ.5(ಎಂಟಿವೈ)– ವಿಶ್ವ ಹಿಂದೂ ಪರಿಷತ್‌ಗೆ 60 ವರ್ಷ ತುಂಬಿದ ಹಿನ್ನೆಲೆಯಲ್ಲಿ ಭಜರಂಗ ದಳ ಆಯೋಜಿಸಿರುವ 'ಶೌರ್ಯ ಜಾಗರಣ ರಥಯಾತ್ರೆ' ಮೈಸೂರಿನ ವಿವಿಧೆಡೆ ಸಂಚರಿಸಿ, ಸಂಜೆ ವೇಳೆಗೆ ಮೈಸೂರಿಂದ ನಿರ್ಗಮಿಸಿತು.

ಗಣಪತಿ ಸಚ್ಚಿದಾನಂದ ಆಶ್ರಮದ ಬಳಿ ಯಾತ್ರೆಗೆ ಪೂರ್ಣಕುಂಭ ಸ್ವಾಗತದೊಂದಿಗೆ ಬರಮಾಡಿಕೊಳ್ಳಲಾಯಿತು. ಬಳಿಕ ನಾದಸ್ವರ, ವೀರಗಾಸೆ, ತಮಟೆ ಕಲಾತಂಡಗಳೊಂದಿಗೆ ಮೆರವಣಿಗೆಯಲ್ಲಿ ಹೊರಟ ಯಾತ್ರೆಯಲ್ಲಿ ಭಗವಧ್ವಜ ರಾರಾಜಿಸುವುದರೊಂದಿಗೆ ಸನಾತನ ಧರ್ಮದ ಸಂದೇಶ ರವಾನಿಸಿತು. ಸಿದ್ಧಾರ್ಥ ನಗರದ ವಿನಯ ಮಾರ್ಗದ ಸಂಗೀತ ಕಾರ್ನರ್, ರಾಜ್‌ಕುಮಾರ್ ರಸ್ತೆಯಲ್ಲಿ ಸಾಗಿದ ರಥಯಾತ್ರೆ ಬಿಎಸ್‌ಎನ್‌ಎಲ್ ಮೈದಾನದಲ್ಲಿ ಸಭಾ ಕಾರ್ಯಕ್ರಮ ನಡೆಯಿತು. ಬಳಿಕ ತ್ರಿವೇಣಿ ಸರ್ಕಲ್ ಹಾಗೂ ಇನ್ನಿತರ ರಸ್ತೆಗಳಲ್ಲಿ ಸಂಚರಿಸಿ ಅರಮನೆ ಮುಂಭಾಗದ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಬಳಿ ಆಗಮಿಸಿತು. ಅಲ್ಲಿ ಸಭಾ ಕಾರ್ಯಕ್ರಮದ ಬಳಿಕ ಹಾರ್ಡಿಂಜ್ ವೃತ್ತ, ಬಿ.ಎನ್.ರಸ್ತೆ, ಗನ್ ಹೌಸ್ ಮೂಲಕ ಸಾಗಿ ಹುಣಸೂರು ರಸ್ತೆ ಮೂಲಕ ಬಿಳಿಕೆರೆಯಲ್ಲಿ ಅಂತ್ಯಗೊಂಡಿತು.

ಕಾರ್ಯಕ್ರಮದಲ್ಲಿ ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ವೇದಿಕೆ ಅಧ್ಯಕ್ಷ ಡಾ.ಟಿ.ಪ್ರಕಾಶ್, ಭಜರಂಗ ದಳದ ರಾಜ್ಯ ಸಂಚಾಲಕ ಸೂರ್ಯನಾರಾಯಣ, ಪರಿಷತ್ ಜಿಲ್ಲಾ ಕಾರ್ಯದರ್ಶಿ ಮಧುಶಂಕರ್, ಪರಿಷತ್‌ನ ಕಾನೂನು ವಿಭಾಗದ ಪ್ರಮುಖ್ ಅಂಬಿಕಾ, ಜಿಲ್ಲಾ ಮಹಿಳಾ ಘಟಕದ ಪ್ರಮುಖ್ ಸವಿತಾ ಘಾಟ್ಕೆ ಜಿಲ್ಲಾ ಪ್ರಮುಖ್ ಲೋಕೇಶ್, ಜನಾರ್ಧನ್ ಇದ್ದರು.

ಹಿಂದೂಗಳೇ ಎದ್ದೇಳಿ: ಕೋಟೆ ಆಂಜನೇಯಸ್ವಾಮಿ ದೇವಾಲಯದ ಬಳಿ ನಡೆದ ಸಭಾ ಕಾರ್ಯಕ್ರಮದಲ್ಲಿ ರಂಗಾಯಣ ಮಾಜಿ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಮಾತನಾಡಿ, ದೇಶಕ್ಕೆ ಸ್ವಾತಂತ್ರ್ಯ ದೊರೆತು 75 ವರ್ಷಗಳಾಗಿದ್ದರೂ ಹಿಂದುಗಳಿಗೆ ಇನ್ನೂ ಸ್ವಾತಂತ್ರ್ಯ ಸಿಕ್ಕಿಲ್ಲ. ಸಾವಿರಾರು ಹಿಂದುಗಳ ತ್ಯಾಗದ ಫಲವಾಗಿ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದೆ. ಆದರೆ ಇಂದು ಹಿಂದೂಗಳು ಎಲ್ಲಿದ್ದಾರೆ? ಯಾರಿಗೆ ಸ್ವಾತಂತ್ರ್ಯ ಸಿಕ್ಕಿದೆ ಎಂದು ಅವಲೋಕಿಸಬೇಕಾಗಿದೆ. ಕೇವಲ ಕಿಡಿಗೇಡಿಗಳಿಗೆ, ದುಷ್ಕರ್ಮಿಗಳಿಗೆ ಮಾತ್ರ ಸ್ವಾತಂತ್ರ್ಯ ಸಿಕ್ಕಿದೆ ಎಂದು ಕಿಡಿಕಾರಿದರು.

ಶಿವಮೊಗ್ಗದಲ್ಲಿ ಔರಂಗಜೇಬನ ಕಟೌಟ್ ಹಾಕಲು ಅನುಮತಿ ಕೊಟ್ಟವರು ಯಾರು ಹೇಳಿ ಎಂದು ಮುಖ್ಯಮಂತ್ರಿ ಅವರನ್ನು ಕೇಳುತ್ತೇನೆ. ಶಿವಮೊಗ್ಗ ಘಟನೆಯ ನೈತಿಕ ಹೊಣೆ ಹೊತ್ತು ಗೃಹ ಸಚಿವ ಪರಮೇಶ್ವರ್ ರಾಜೀನಾಮೆ ನೀಡಬೇಕು. ಪರಮೇಶ್ವರ್ ಗೃಹ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ, ಮುಖ್ಯಮಂತ್ರಿ ಹುದ್ದೆಗೆ ಹೋರಾಡಲಿ. ಪ್ರಕರಣವನ್ನು ಸಿಬಿಐಗೆ ವಹಿಸಬೇಕು ಎಂದು ಆಗ್ರಹಿಸಿದರು.

ನಮ್ಮಲ್ಲಿ ಕೆಲ ಪ್ರೊಫೆಸರ್‌ಗಳು ಮಹಿಷ ದಸರಾ ಆಚರಣೆಗೆ ಮುಂದಾಗಿದ್ದಾರೆ. ಅದು ಮಹಿಷ ದಸರಾವಲ್ಲ, ಸೂತಕದ ಉತ್ಸವ. ಇದನ್ನು ಎಲ್ಲರೂ ಖಂಡಿಸಬೇಕು. ಕಾಂಗ್ರೆಸ್ ಸರ್ಕಾರ ಬಂದಾಗಲೆಲ್ಲ ಬರಗಾಲ ಬರುತ್ತದೆ. ಇದು ಮೂಢ ನಂಬಿಕೆಯೋ, ಕಾಕತಾಳೀಯವೋ ಗೊತ್ತಿಲ್ಲ. ನಾನು ಯಾರಿಗೂ ಗಲಾಟೆ ಮಾಡಿ ಎಂದು ಕರೆ ನೀಡಿಲ್ಲ. ಆದರೆ ಗಲಾಟೆ ಮಾಡುವವರಿಗೆ ಸರ್ಕಾರವೇ ಕುಮ್ಮಕ್ಕು ನೀಡುತ್ತಿದೆ. ನಾನು ಮಾತನಾಡಲು ಹೆದರುವುದಿಲ್ಲ. ನನ್ನ ಮೇಲೆ ಸರ್ಕಾರ ಕೇಸ್ ಹಾಕಲಿದೆ ಎಂಬ ಭಯವಿಲ್ಲ. ನಾನು ಹೇಳಬೇಕಾದ್ದನ್ನು ಹೇಳಿಯೇ ತೀರುತ್ತೇನೆ. ನಾವು ಜಾಗೃತರಾಗದಿದ್ದರೇ ನಮ್ಮ ಅವಸಾನ ಖಚಿತ. ಮೋದಿಯವರು ಹೇಳುತ್ತಿರುವ ಒಂದು ದೇಶ ಒಂದು ಕಾನೂನು ಬರಲೇಬೇಕು ಎಂದರು.

ಕಾವೇರಿ ಹುಟ್ಟುವ ಕೊಡಗಿನಲ್ಲಿಯೇ ಮಳೆ ಕೊರತೆ ಇದೆ. ಕೊಡಗಿನಲ್ಲಿ ನೀರಿಲ್ಲದಿದ್ದರೆ ಮೈಸೂರು ಭಾಗದ ಜನರು ಸಂಕಷ್ಟಕ್ಕೆ ಸಿಲುಕುತ್ತಾರೆ. ನ್ಯಾಯಾಲಯದ ಆದೇಶ ಪಾಲಿಸಬೇಕು. ಅದಕ್ಕೂ ಮುನ್ನ ಪರಿಸ್ಥಿತಿಯನ್ನು ನ್ಯಾಯಾಲಯಕ್ಕೆ ವಿವರಿಸಬೇಕಿತ್ತು. ವಾದ ಮಾಡುವ ಸಮರ್ಥ ತಂಡವೇ ಇಲ್ಲ. ಸರ್ಕಾರ ಜನರ ಕಷ್ಟಕ್ಕಿಂತ ಲೂಟಿಗಿಳಿದಿದೆ ಎಂದು ಆರೋಪಿಸಿದರು.



ರಾಜ್ಯ ಒಕ್ಕಲಿಗರ ಸಂಘದ ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿಯಾಗಿದ್ದ ಕೆ.ಹೆಚ್. ರಾಮಯ್ಯನವರ 90ನೇ ಸಂಸ್ಮರಣಾ ದಿನವಾದ ಗುರುವಾರ ಅವರ ಸಮಾಧಿಗೆ ಪುಷ್ಪನಮನ ಸಲ್ಲಿಸಲಾಯಿತು. ಬಿಜೆಪಿ ಮುಖಂಡರೂ ಆದ ವಿದ್ಯಾ ವಿಕಾಸ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಕವೀಶ್ ಗೌಡ, 'ನಮ್ಮೂರು ನಮ್ಮೋರು' ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ಬೀಡನಹಳ್ಳಿ ಸತೀಶ್‌ಗೌಡ, ಜಿಲ್ಲಾ ಒಕ್ಕಲಿಗರ ಸಂಘದ ಕಾರ್ಯದರ್ಶಿ ಚೇತನ್, ಉಪಾಧ್ಯಕ್ಷ ಕುಮಾರ್‌ಗೌಡ ಉಪಸ್ಥಿತರಿದ್ದರು.

ಧ್ಯಾನದ ಪರಿಚಯ ಕಾರ್ಯಾಗಾರ

ಮೈಸೂರು, ಅ. 5– ಶ್ರೀ ರವಿಶಂಕರ್ ಗುರೂಜಿಯವರ ಆರ್ಟ್ ಆಫ್ ಲಿವಿಂಗ್ ವತಿಯಿಂದ ಶಿವಾನಂದ ಜ್ಞಾನಾಲಯದಲ್ಲಿ ಅ. 8 ರಂದು ಸಂಜೆ 5.30 ರಿಂದ 6.30 ರವರೆಗೆ ಧ್ಯಾನದ ಪರಿಚಯ ಕಾರ್ಯಕ್ರಮ ಆಯೋಜಿಸಲಾಗಿದೆ. ಅ. 10 ರಿಂದ 15 ರವರೆಗೆ ಆನಂದದ ಅನುಭೂತಿ ಶಿಬಿರ ಬೆಳಗ್ಗೆ 6 ರಿಂದ 8.30 ಮತ್ತು ಸಂಜೆ 6 ರಿಂದ 8.30ರವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ 9945161303 ಸಂಪರ್ಕಿಸಬಹುದು.

ಮೈಸೂರಲ್ಲಿ ಲೈಂಗಿಕ ಕಾರ್ಯಕರ್ತೆ ಕೊಲೆ ಮಾಡಿದ್ದ ಹಂತಕನಿಗೆ ಜೀವಾವಧಿ ಶಿಕ್ಷೆ

● ಸೆಷನ್ ನ್ಯಾಯಾಲಯದಿಂದ ಆರೋಪ ಮುಕ್ತನಾಗಿದ್ದವನಿಗೆ ಹೈಕೋರ್ಟ್‌ನಿಂದ ಶಿಕ್ಷೆ ● ಸೆಷನ್ ನ್ಯಾಯಾಲಯದ ತೀರ್ಪನ್ನು ಪ್ರಶ್ನಿಸಿ ಲಷ್ಕರ್ ಠಾಣೆ ಪೊಲೀಸರು ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು ● ಗ್ರಾಹಕನ ಸೋಗಿನಲ್ಲಿ ಲೈಂಗಿಕ ಕಾರ್ಯಕರ್ತೆಯನ್ನು ಲಾಡ್ಜಿಗೆ ಕರೆದೊಯ್ದು ಹತ್ಯೆಗೈದು ಚಿನ್ನಾಭರಣ, ಹಣ ದೋಚಿದ್ದ

ಬೆಂಗಳೂರು, ಅ.5– ಕಳೆದ ಹದಿಮೂರು ವರ್ಷಗಳ ಹಿಂದೆ ಮೈಸೂರಿನಲ್ಲಿ ಲೈಂಗಿಕ ಕಾರ್ಯಕರ್ತೆಯನ್ನು ಹತ್ಯೆ ಮಾಡಿ ಚಿನ್ನಾಭರಣ ದೋಚಿದ್ದ ಹಂತಕನಿಗೆ ಮಂಡ್ಯ ಜಿಲ್ಲೆಯ ಹೈಕೋರ್ಟ್ ಜೀವಾವಧಿ ಶಿಕ್ಷೆ ವಿಧಿಸಿದೆ.

ಮಂಡ್ಯ ಜಿಲ್ಲೆಯ ಕೊರಮೇನಹಳ್ಳಿಯ ನಿವಾಸಿ ಕೆ.ಸಿ.ಗಿರೀಶ್ ಶಿಕ್ಷೆಗೊಳಗಾದ ಹಂತಕನಾಗಿದ್ದು, ಅತ್ಯಾಚಾರ, ಕೊಲೆ ಮತ್ತು ದರೋಡೆ ಆರೋಪದಲ್ಲಿ ಅಪರಾಧಿಯನ್ನು ಖುಲಾಸೆಗೊಳಿಸಿದ ಮೈಸೂರಿನ ಸೆಷೆನ್ಸ್ ನ್ಯಾಯಾಲಯದ ಆದೇಶ ಪ್ರಶ್ನಿಸಿ ಮೈಸೂರಿನ ಲಷ್ಕರ್ ಪೊಲೀಸ್ ಠಾಣೆ ಸಿಬ್ಬಂದಿ ಕ್ರಿಮಿನಲ್ ಮೇಲ್ಮನವಿ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್ ನ್ಯಾಯಮೂರ್ತಿ ಎಚ್.ಬಿ. ಪ್ರಭಾಕರ್ ಶಾಸ್ತ್ರಿ ಮತ್ತು ನ್ಯಾಯಮೂರ್ತಿ ಅನಿಲ್ ಬಿ.ಕಟ್ಟಿ ಅವರಿದ್ದ ನ್ಯಾಯಪೀಠ ಅತ್ಯಾಚಾರ ಆರೋಪದಿಂದ ಆರೋಪಿಯನ್ನು ಮುಕ್ತಗೊಳಿಸಿರುವ ಆದೇಶವನ್ನು ದೃಢಪಡಿಸಿದೆ. ಆದರೆ ಕೊಲೆ ಮತ್ತು ದರೋಡೆ ಆರೋಪದಡಿ ಜೀವಾವಧಿ ಶಿಕ್ಷೆ, ಮತ್ತು 40 ಸಾವಿರ ರೂ. ದಂಡ ವಿಧಿಸಿದ್ದು, ದಂಡದ ಮೊತ್ತದಲ್ಲಿ 35 ಸಾವಿರ ರೂ.ಗಳನ್ನು ಮೃತ ಮಹಿಳೆಯ ಮಗನಿಗೆ ನೀಡಬೇಕು. ಇನ್ನುಳಿದ 5 ಸಾವಿರ ರೂ. ರಾಜ್ಯ ಸರ್ಕಾರಕ್ಕೆ ಪಾವತಿ ಮಾಡುವಂತೆ ಸೂಚಿಸಿದೆ.

ಪ್ರಕರಣವೇನು?: 2010ರ ಸೆಪ್ಟೆಂಬರ್ 18ರಂದು ಸಂತ್ರಸ್ತೆ ಮೈಸೂರಿನ ಎಸ್‌ಆರ್ ರಸ್ತೆಯಲ್ಲಿ ಗ್ರಾಹಕರೊಂದಿಗೆ ವ್ಯವಹರಿಸುತ್ತಿರುವಾಗ ಗಿರೀಶ ಆಕೆಯನ್ನು ಆಟೊದಲ್ಲಿ ಸಬರ್ಬನ್ ಬಸ್ ನಿಲ್ದಾಣದ ಪಕ್ಕದಲ್ಲಿರುವ ಲಾಡ್ಜ್‌ಗೆ ಕರೆದೊಯ್ದಿದ್ದ. ದೇವಸ್ಥಾನಕ್ಕೆ ಬಂದಿದ್ದ ಪತಿ–ಪತ್ನಿ ಎಂದು ಪರಿಚಯಿಸಿಕೊಂಡು ಲಾಡ್ಜ್ ರಿಜಿಸ್ಟರ್‌ನಲ್ಲಿ ತನ್ನ ಹೆಸರನ್ನು ರವಿ ಎಂದು ನಮೂದು ಮಾಡಿ ಕೊಠಡಿ ಪಡೆದಿದ್ದ. ಅಂದು ರಾತ್ರಿ ಕೊಠಡಿಗೆ ಆಹಾರ ಮತ್ತು ಪಾನೀಯಗಳನ್ನು ತರಿಸಿಕೊಂಡಿದ್ದರು. ದೈಹಿಕ ಸಂಪರ್ಕದ ಬಳಿಕ ಗಿರೀಶ್, ಮಹಿಳೆಯನ್ನು ಕತ್ತು ಹಿಸುಕಿ ಕೊಂದು, ಆಕೆಯ ಚಿನ್ನಾಭರಣ, ನೋಕಿಯಾ ಮೊಬೈಲ್ ಫೋನ್ ಮತ್ತು ಸ್ವಲ್ಪ ಹಣದೊಂದಿಗೆ ಪರಾರಿಯಾಗಿದ್ದ. ಚಿನ್ನಾಭರಣಗಳನ್ನು ಗಿರಿವಿ ಇಟ್ಟು ಹಣ ಪಡೆದುಕೊಂಡಿದ್ದ.

ಮರುದಿನ ಬೆಳಗ್ಗೆ ಪ್ರಕರಣ ಬೆಳಕಿಗೆ ಬಂದಿತ್ತು. ಲಷ್ಕರ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ ಆರೋಪಿಯನ್ನು ಬಂಧಿಸಿ, ತನಿಖೆಯ ಬಳಿಕ ಕೋರ್ಟ್‌ಗೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಪ್ರಕರಣ ವಿಚಾರಣೆ ನಡೆಸಿದ ಮೈಸೂರಿನ ಏಳನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರು ಏಪ್ರಿಲ್ 25, 2016 ರಂದು ಆರೋಪಿಯನ್ನು ಖುಲಾಸೆಗೊಳಿಸಿ ಆದೇಶಿಸಿದ್ದರು. ಈ ಆದೇಶವನ್ನು ಪ್ರಶ್ನಿಸಿ ಪೊಲೀಸ್ ಪ್ರಾಸಿಕ್ಯೂಷನ್ ಹೈಕೋರ್ಟ್ ಮೆಟ್ಟಿಲೇರಿತ್ತು.

ಕಾರಂಜಿಕೆರೆಯಲ್ಲಿ ಪರಿಸರ ನಡಿಗೆ



ಮೈಸೂರು,ಅ.5(ಎಂಟಿವೈ)– ವನ್ಯಜೀವಿ ಸಪ್ತಾಹದ ಅಂಗವಾಗಿ ಮೈಸೂರಿನ ಕಾರಂಜಿಕೆರೆ ಆವರಣದಲ್ಲಿ ಗುರುವಾರ ಮೃಗಾಲಯದ ವತಿಯಿಂದ ಆಯೋಜಿಸಿದ್ದ 'ಪರಿಸರ ನಡಿಗೆ'ಯಲ್ಲಿ ಹಲವು ಮಂದಿ ಪಾಲ್ಗೊಂಡು ಗಮನ ಸೆಳೆದರು.

ಮೈಸೂರು ಮೃಗಾಲಯದ ವತಿಯಿಂದ ವನ್ಯಜೀವಿ ಸಪ್ತಾಹ ಅಂಗವಾಗಿ ಕಳೆದ ನಾಲ್ಕು ದಿನಗಳಿಂದ ವಿವಿಧ ಕಾರ್ಯಕ್ರಮ ನಡೆಸಲಾಗುತ್ತಿದ್ದು, ಇಂದು ಬೆಳಗ್ಗೆ ಕಾರಂಜಿಕೆರೆಯಲ್ಲಿ ಆಯೋಜಿಸಿದ್ದ 'ಪರಿಸರ ನಡಿಗೆ' ಪರಿಸರ ಪ್ರೇಮಿಗಳು, ಕಾಲೇಜು ವಿದ್ಯಾರ್ಥಿಗಳು ಹಾಗೂ ಪರಿಸರ ಆಸಕ್ತಿಯುಳ್ಳವರು ಪಾಲ್ಗೊಂಡು ಕಾರಂಜಿಕೆರೆ ಆವರಣದಲ್ಲಿ ಸಿಗುವ ಜೀವ ವೈವಿಧ್ಯತೆ, ಸಸ್ಯ ಪ್ರಭೇದ, ಚಿಟ್ಟೆ, ಪಕ್ಷಿ ಸಂಕುಲ ಸೇರಿದಂತೆ ಇನ್ನಿತರ ಕೀಟಗಳ ಬಗ್ಗೆ ಮಾಹಿತಿ ಪಡೆದರು.

ಕಾರಂಜಿಕೆರೆಯ ಮುಖ್ಯ ದ್ವಾರದ ಬಳಿ ಬೆಳಗ್ಗೆ 7 ಗಂಟೆಗೆ ಆರಂಭವಾದ ಪರಿಸರ ನಡಿಗೆಯಲ್ಲಿ ನ್ಯಾಚುರಲಿಸ್ಟ್ ಕಾರ್ತಿಕೇಯನ್, ಮೃಗಾಲಯದ ಶಿಕ್ಷಣಾಧಿಕಾರಿ ಸುಜೋಷ ಪರಿಸರ ನಡಿಗೆಯಲ್ಲಿ ಪಾಲ್ಗೊಂಡಿದ್ದವರಿಗೆ ಕಾರಂಜಿಕೆರೆ ಆವರಣದಲ್ಲಿರುವ ಗಿಡ–ಮರ, ಪಕ್ಷಿ ಸಂಕುಲ, ಕೆರೆಯ ಮಹತ್ವ, ಜಲಚರ, ಕೀಟ ಸೇರಿದಂತೆ ಜೀವವೈವಿಧ್ಯತೆಯ ಬಗ್ಗೆ ವಿವರಣೆ ನೀಡಿದರು. ನಡಿಗೆಯಲ್ಲಿ ಪಾಲ್ಗೊಂಡಿದ್ದ ಬಹುತೇಕರು ಈಗಾಗಲೇ ಜೀವವೈವಿಧ್ಯತೆ, ವನ್ಯಜೀವಿ, ಪಕ್ಷಿ ಹಾಗೂ ಸಸ್ಯಸಂಪತ್ತಿನ ಬಗ್ಗೆ ತಿಳಿದುಕೊಂಡಿರುವುದರಿಂದ ಮಾಹಿತಿ ವಿನಿಮಯ ಮಾಡಿಕೊಳ್ಳಲು ಸಹಕಾರಿಯಾಯಿತು. ಸುಮಾರು ಒಂದೂವರೆ ಗಂಟೆಗಳ ಕಾಲ ಕಾರಂಜಿಕೆರೆಯಲ್ಲಿ ಪರಿಸರ ನಡಿಗೆ ನಡೆಸಿದ ತಂಡ ನಂತರ ನಿರ್ಗಮಿಸಿತು. ಈ ವೇಳೆ ಮೃಗಾಲಯದ ಸಿಬ್ಬಂದಿಗಳು ಉಪಸ್ಥಿತರಿದ್ದರು.

ವಾರದಲ್ಲಿ 2 ದಿನ 'ಡ್ರಂಕ್ ಅಂಡ್ ಡ್ರೈವ್' ತಪಾಸಣೆ ತೀವ್ರ

ಪ್ರತೀ ದಿನ ಮೈಸೂರಲ್ಲಿ 25ರಿಂದ 30 ಮಂದಿ ವಿರುದ್ಧ ಪ್ರಕರಣ ದಾಖಲು



ಮೈಸೂರು, ಅ.5(ಆರ್‌ಕೆ)–ದಸರಾ ಸಮೀಪಿಸುತ್ತಿದ್ದಂತೆಯೇ ಸಂಚಾರ ನಿಯಮ ಉಲ್ಲಂಘಿಸುವವರ ವಿರುದ್ಧ ಕಾರ್ಯಾಚರಣೆ ಮಾಡುತ್ತಿರುವ ಸಂಚಾರ ಪೊಲೀಸರು, ವಾರದಲ್ಲಿ ಎರಡು ದಿನ ರಾತ್ರಿ ವೇಳೆ ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವವರ ವಿರುದ್ಧವೂ ಪ್ರಕರಣ ದಾಖಲಿಸುತ್ತಿದ್ದಾರೆ.

ಪ್ರತೀ ಬುಧವಾರ ಮತ್ತು ಶನಿವಾರ ಡ್ರಂಕ್ ಅಂಡ್ ಡ್ರೈವ್ ತಪಾಸಣೆ ನಡೆಸಲಾಗುತ್ತಿದ್ದು, ಒಂದು ವೇಳೆ ಬುಧವಾರದಂದು ವಿಶೇಷ ಬಂದೋಬಸ್ತ್ ಕರ್ತವ್ಯವಿದ್ದಲ್ಲಿ ಮಾತ್ರ ಗುರುವಾರ ಕಾರ್ಯಾಚರಣೆ ಹಮ್ಮಿಕೊಳ್ಳಲಾಗುತ್ತಿದೆ. ಕಾರ್ಯಾಚರಣೆಯಲ್ಲಿ ದಿನಕ್ಕೆ 25 ರಿಂದ 30 ಡ್ರಂಕ್ ಅಂಡ್ ಡ್ರೈವ್ ಪ್ರಕರಣ ದಾಖಲಾಗುತ್ತಿದ್ದು, ವಾಹನ ವಶಪಡಿಸಿಕೊಂಡು ಡಿಎಲ್ ಸೀಜ್ ಮಾಡಿ ನೋಟಿಸ್ ಜಾರಿ ಮಾಡಲಾಗುತ್ತಿದೆ.

ಕುಡಿದು ಚಾಲನೆ ಮಾಡಿ ಸಿಕ್ಕಿಬಿದ್ದವರು ನ್ಯಾಯಾಲಯದಲ್ಲಿ ದಂಡ ಪಾವತಿಸಿ ರಶೀದಿ ತಂದವರಿಗೆ ಮಾತ್ರ ವಶಪಡಿಸಿಕೊಂಡ ವಾಹನಗಳನ್ನು ಕೊಡಲಾಗುತ್ತಿದೆ. ಮೈಸೂರಿನ ಮಣಿಪಾಲ್ ಆಸ್ಪತ್ರೆ ಜಂಕ್ಷನ್, ಬನ್ನಿಮಂಟಪದ ಎಲ್‌ಐಸಿ ಸರ್ಕಲ್, ಸಿದ್ಧಾರ್ಥನಗರದ ಡೈರಿ ಸರ್ಕಲ್, ಲಲಿತ ಮಹಲ್ ರಸ್ತೆಯ ಕಾರಂಜಿ ಕೆರೆ ಜಂಕ್ಷನ್, ಮಹಾತ್ಮಗಾಂಧಿ ರಸ್ತೆಯ ತರಕಾರಿ ಮಾರುಕಟ್ಟೆ ಬಳಿ, ಸಯ್ಯಾಜಿರಾವ್ ರಸ್ತೆಯ ಹಳೇ ಆರ್‌ಎಂಸಿ ಸರ್ಕಲ್, ಹಳೇ ಡಿಸಿ ಆಫೀಸ್ ಬಳಿ, ಬೋಗಾದಿ ರಸ್ತೆಯ ಕುಕ್ಕರಹಳ್ಳಿ ಕೆರೆ ಜಂಕ್ಷನ್, ಹುಣಸೂರು ರಸ್ತೆಯ ಐಶ್ವರ್ಯ ಪೆಟ್ರೋಲ್ ಬಂಕ್ ಸಮೀಪ, ಹಿನಕಲ್ ಬಳಿ ರಿಂಗ್ ರಸ್ತೆ, ಕೆಆರ್‌ಎಸ್ ರಸ್ತೆಯ ರಾಯಲ್ ಇನ್ ಜಂಕ್ಷನ್ ಸೇರಿದಂತೆ ಮೈಸೂರು ನಗರದಾದ್ಯಂತ ಹಲವೆಡೆ ಸಂಚಾರ ಠಾಣೆ ಪೊಲೀಸರು ರಾತ್ರಿ 8 ರಿಂದ 11 ಗಂಟೆವರೆಗೆ ತಪಾಸಣಾ ಕಾರ್ಯ ನಡೆಸುತ್ತಿದ್ದಾರೆ.

ರಂಗಾಯಣದಲ್ಲಿ ಕಾಲೇಜು ರಂಗೋತ್ಸವಕ್ಕೆ ಚಾಲನೆ





ಮೈಸೂರು, ಅ.5(ಎಸ್‌ಬಿಡಿ)– ಮೈಸೂರು ರಂಗಾಯಣದ 'ಬಿ.ವಿ.ಕಾರಂತ ಕಾಲೇಜು ರಂಗೋತ್ಸವ'ಕ್ಕೆ ಗುರುವಾರ ಚಾಲನೆ ದೊರಕಿತು.

ರಂಗಾಯಣದ ವನರಂಗದಲ್ಲಿ ಗುರುವಾರ 'ಬಿ.ವಿ.ಕಾರಂತ ಕಾಲೇಜು ರಂಗೋತ್ಸವ–2023' ಸಮಾರಂಭವನ್ನು ಗಾಯಕ ನವೀನ್ ಸಜ್ಜು ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಈ ವೇದಿಕೆ ನನಗೆ ತುಂಬಾ ವಿಶೇಷ. ಬಿ.ವಿ.ಕಾರಂತರು ಕಟ್ಟಿದ ರಂಗಾಯಣ, ನಾಟಕಗಳ ಮೂಲಕ ಸಮಾಜವನ್ನು ಪರಿಚಯಿಸುವ ಕೆಲಸ ಮಾಡುತ್ತಿದೆ. ಮೈಸೂರು ನನಗೆ ಜೀವನವನ್ನು ಕಲಿಸಿತು. ಇಲ್ಲಿನ ನಿರಂತರ ರಂಗ ತಂಡದ 'ಸಹಜ' ರಂಗ ತರಬೇತಿಯಿಂದ ನನ್ನ ಬದುಕು ಬದಲಾಯಿತು. ಇದೀಗ ನನ್ನದೆ ಜಾನಪದ ತಂಡ ಕಟ್ಟಿಕೊಂಡು ರಂಗಗೀತೆ ಕಾರ್ಯಕ್ರಮ ನೀಡುತ್ತಿದ್ದೇನೆ. ನಾನು ನಟ, ಗಾಯಕನಾಗುವಲ್ಲಿ ರಂಗಭೂಮಿ ಪಾತ್ರ ಮಹತ್ವದ್ದಾಗಿದೆ ಎಂದರು.

ಇದೇ ಸಂದರ್ಭದಲ್ಲಿ 'ಒಳಿತು ಮಾಡು ಮನುಷಾ ನೀ ಇರೋದು ಮೂರೆ ದಿವಸಾ...' ಹಾಡಿನ ಮೂಲಕ ನೆರೆದಿದ್ದವರನ್ನು ಭಾವುಕಗೊಳಿಸಿದರು.

ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದ ಕುಲಪತಿ ಡಾ.ನಾಗೇಶ್ ವಿ.ಬೆಟ್ಟಕೋಟೆ ಮಾತನಾಡಿ, ನಾನೂ ನಾಟಕ ಪದವಿ ಪಡೆದಿರುವುದರಿಂದ ಸಮಾಜಕ್ಕೆ ರಂಗಭೂಮಿಯ ಮಹತ್ವ ಎಷ್ಟಿದೆ ಎನ್ನುವುದನ್ನು ಅರಿತಿದ್ದೇನೆ. ರಂಗಭೂಮಿ ಮೌಲ್ಯಗಳನ್ನು ಕಲಿಸುತ್ತದೆ. ಸಮಾನತೆ, ಸೋದರತ್ವ, ಪರಸ್ಪರ ಪ್ರೀತಿ–ವಿಶ್ವಾಸವನ್ನು ಬೆಸೆಯುತ್ತದೆ. ಬಿ.ವಿ.ಕಾರಂತರು ಕಟ್ಟಿದ ರಂಗಭೂಮಿಯ ಕಲಾ ಸೇವೆ ಸ್ಮರಣೀಯ. ದೊಡ್ಡ ಸಂಸ್ಥೆಯಾಗಿ ಬೆಳೆದಿದೆ. ಕಾಲೇಜು ರಂಗೋತ್ಸವದ ಮೂಲಕ ವಿದ್ಯಾರ್ಥಿಗಳ ಪ್ರತಿಭೆ ಅನಾವರಣಕ್ಕೆ ವೇದಿಕೆ ಕಲ್ಪಿಸಿಕೊಟ್ಟಿದೆ. ಸರ್ಕಾರವೂ ಕೂಡ ರಂಗ ಚಟುವಟಿಕೆಗಳಿಗೆ ಇನ್ನೂ ಹೆಚ್ಚಿನ ಒತ್ತು ನೀಡುವುದು ಅಗತ್ಯವಾಗಿದೆ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಧರಣಿದೇವಿ ಮಾಲಗತ್ತಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ರಂಗಾಯಣದ ಉಪ ನಿರ್ದೇಶಕಿ ನಿರ್ಮಲಾ ಮಠಪತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಕಾಲೇಜು ರಂಗೋತ್ಸವದ ಸಂಚಾಲಕ ಅರಸೀಕೆರೆ ಯೋಗಾನಂದ ಮತ್ತಿತರರು ಉಪಸ್ಥಿತರಿದ್ದರು.

ವನರಂಗದಲ್ಲಿ 'ಕಿಂದರಿ ಜೋಗಿ': ಸಭಾ ಕಾರ್ಯಕ್ರಮದ ಬಳಿಕ ನೂರ್ ಅಹಮದ್ ಶೇಖ್ ನಿರ್ದೇಶನದಲ್ಲಿ ಹಾರ್ಡ್ವಿಕ್ ಸ್ವತಂತ್ರ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ಕುವೆಂಪು ಅವರ ರಚನೆಯ 'ಕಿಂದರಿ ಜೋಗಿ' ನಾಟಕವನ್ನು ವನರಂಗದಲ್ಲಿ ಪ್ರದರ್ಶಿಸಿದರು. ನಾಳೆ(ಅ.6) ಸಂಜೆ 6.30ಕ್ಕೆ ಭೂಮಿಗೀತ ವೇದಿಕೆಯಲ್ಲಿ ರಾಜೇಶ್ ಮಾಧವನ್ ರಚನೆ, ನಿರ್ದೇಶನದಲ್ಲಿ ಅಮೃತಾ ವಿದ್ಯಾಪೀಠಂ ವಿದ್ಯಾರ್ಥಿಗಳು 'ಪರಿಜು' ನಾಟಕ ವನ್ನು ಪ್ರಸ್ತುತಪಡಿಸಲಿದ್ದಾರೆ. 2005ರಿಂದ ಬಿ.ವಿ. ಕಾರಂತ ಕಾಲೇಜು ರಂಗೋತ್ಸವ ನಡೆಯುತ್ತಿದ್ದು, ವಿವಿಧ ಕಾಲೇಜು ವಿದ್ಯಾರ್ಥಿಗಳಿಗೆ ಒಂದು ತಿಂಗಳು ತರಬೇತಿ ನೀಡಿದ ನಂತರ 'ಕಾಲೇಜು ರಂಗೋತ್ಸವ'ದ ಮೂಲಕ ಪ್ರತಿಭೆ ಅನಾವರಣಗೊಳಿಸಲಾಗುತ್ತಿದೆ. ಈ ಬಾರಿ ತರಬೇತಿ ಪಡೆದುಕೊಂಡಿರುವ ಮೈಸೂರಿನ 7 ಕಾಲೇಜು ವಿದ್ಯಾರ್ಥಿಗಳು, ಅ.11ರವರೆಗೆ ವಿಭಿನ್ನ ನಾಟಕಗಳನ್ನು ಪ್ರಸ್ತುತಪಡಿಸಲಿದ್ದಾರೆ.

ನಾಳೆ ಜಿಲ್ಲಾ ಮಟ್ಟದ ಪ್ರಾಥಮಿಕ, ಪ್ರೌಢಶಾಲಾ ಬಾಲಕ, ಬಾಲಕಿಯರ ಕ್ರೀಡಾಕೂಟ

ಮಡಿಕೇರಿ ಅ.5– ಕೊಡಗು ಜಿಲ್ಲಾಡಳಿತ, ಜಿಪಂ, ಶಾಲಾ ಶಿಕ್ಷಣ ಇಲಾಖೆ, ಮಡಿಕೇರಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಸಂಯುಕ್ತ ಆಶ್ರಯದಲ್ಲಿ ಕೊಡಗು ಜಿಲ್ಲಾ ಮಟ್ಟದ ಪ್ರಾಥಮಿಕ ಹಾಗೂ ಪ್ರೌಢಶಾಲಾ ಬಾಲಕ ಮತ್ತು ಬಾಲಕಿಯರ ಕ್ರೀಡಾಕೂಟವು ಅ.7 ರಂದು ಬೆಳಗ್ಗೆ 10 ಗಂಟೆಗೆ ನಗರದ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿದೆ. ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೊಡಗು ಉಸ್ತುವಾರಿ ಸಚಿವ ಎನ್.ಎಸ್. ಭೋಸರಾಜು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಶಾಸಕ ಡಾ.ಮಂಥರ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರು ಹಾಗೂ ಶಾಸಕ ಎ.ಎಸ್. ಪೊನ್ನಣ್ಣ, ಸಂಸದ ಪ್ರತಾಪ್ ಸಿಂಹ, ವಿಧಾನ ಪರಿಷತ್ ಸದಸ್ಯರಾದ ಎಂ.ಪಿ.ಸುಜಾ ಕುಶಾಲಪ್ಪ, ಎಸ್.ಎಲ್.ಭೋಜೇಗೌಡ, ನಗರಸಭೆ ಅಧ್ಯಕ್ಷೆ ಎನ್.ಪಿ.ಅನಿತಾ, ಕೊಡಗು ಜಿಪಂ ಆಡಳಿತಾಧಿಕಾರಿ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ. ಎನ್.ವಿ.ಪ್ರಸಾದ್, ಜಿಲ್ಲಾಧಿಕಾರಿ ವೆಂಕಟ್ ರಾಜಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಜಿ.ಪಂ.ಸಿಇಒ ವರ್ಣಿತ್ ನೇಗಿ ಇತರರು ಪಾಲ್ಗೊಳ್ಳಲಿದ್ದಾರೆ.

ಕೊಡವರ ಬೇಡಿಕೆ ಈಡೇರಿಕೆಗೆ ಸಮಿತಿ ರಚನೆ ಸಂಬಂಧ ಆಕ್ಷೇಪಣೆ ಸಲ್ಲಿಸಲು ವಿಳಂಬ ಹಿನ್ನೆಲೆ

ಕೇಂದ್ರ ಗೃಹ ಇಲಾಖೆಗೆ ಹೈಕೋರ್ಟ್ ದಂಡ



ಖ್ಯಾತ ನ್ಯಾಯವಾದಿಗಳು ಮತ್ತು ಕೇಂದ್ರ ಮಾಜಿ ಸಚಿವರೂ ಆದ ಡಾ. ಸುಬ್ರಮಣಿಯನ್‌ಸ್ವಾಮಿ ಅವರೊಂದಿಗೆ ಹೈಕೋರ್ಟ್ ಮುಂಭಾಗ ಸಿಎನ್‌ಸಿ ಪದಾಧಿಕಾರಿಗಳು.

ಮಡಿಕೇರಿ, ಅ.5– ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ಪ್ರಮುಖ ಬೇಡಿಕೆಯಾದ ಕೊಡವ ಲ್ಯಾಂಡ್ ಭೂ ರಾಜಕೀಯ ಸ್ವಾಯತ್ತತೆಯ ಕುರಿತು ಆಯೋಗವನ್ನು ರಚಿಸುವಂತೆ ಕೋರಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿಯ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್, ಆಕ್ಷೇಪಣೆ ಸಲ್ಲಿಸಲು ವಿಳಂಬ ಧೋರಣೆ ತೋರುತ್ತಿರುವ ಕೇಂದ್ರ ಗೃಹ ಇಲಾಖೆಗೆ 5 ಸಾವಿರ ರೂ. ದಂಡ ವಿಧಿಸಿದೆ.

ಉಚ್ಚ ನ್ಯಾಯಾಲಯದಲ್ಲಿ ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಿ. ವರಾಲೆ ಹಾಗೂ ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ ಅವರುಗಳ ಸಮ್ಮುಖದಲ್ಲಿ ನಡೆದ ವಿಚಾರಣೆಯಲ್ಲಿ ಅರ್ಜಿದಾರರ ಪರ ಡಾ. ಸುಬ್ರಮಣಿಯನ್ ಸ್ವಾಮಿ ಹಾಗೂ ವಕೀಲ ಕೀರನ್ ನಾರಾಯಣ್ ಅವರು ವಾದ ಮಂಡಿಸಿದ್ದರು. ನ್ಯಾಯಾಲಯದ ಮುಂದೆ ಹಲವು ಬಾರಿ ಅರ್ಜಿ ವಿಚಾರಣೆಗೆ ಬಂದಿದ್ದು, ಪ್ರತಿವಾದಿಗಳಲ್ಲಿ ಒಂದಾದ ಕೇಂದ್ರವು ಅರ್ಜಿಗೆ ಆಕ್ಷೇಪಿಸಲು ಹೆಚ್ಚಿನ ಸಮಯ ಬಯಸಿ ಹಲವು ಬಾರಿ ವಿಚಾರಣೆಯನ್ನು ಮುಂದೂಡುವಂತೆ ಮಾಡಿದ ಕಾರಣ ದಂಡ ವಿಧಿಸಲಾಗಿದೆ.

ಮುಂದಿನ ವಿಚಾರಣೆಯನ್ನು ನವೆಂಬರ್ 29ಕ್ಕೆ ಮುಂದೂಡಿದ್ದು, ಆಕ್ಷೇಪಣೆಯನ್ನು ಸಲ್ಲಿಸುವಂತೆಯೂ ಅದೇಶಿಸಿದೆ. ಕರ್ನಾಟಕ ರಾಜ್ಯ ಸರಕಾರ, ಕೇಂದ್ರ ಕಾನೂನು ಇಲಾಖೆ ಹಾಗೂ ಗೃಹ ಇಲಾಖೆ ಈ ಪ್ರಕರಣದಲ್ಲಿ ಪ್ರತಿವಾದಿಗಳಾಗಿವೆ.

ನ.29ಕ್ಕೆ ವಿಚಾರಣೆ ಮುಂದೂಡಿಕೆ

ಕೊಡವ ಭೂ ರಾಜಕೀಯ ಸ್ವಾಯತ್ತೆ ಸಂಬಂಧ ಆಯೋಗ ರಚಿಸುವಂತೆ ವಿಶ್ವ ವಿಖ್ಯಾತ ಅರ್ಥಶಾಸ್ತ್ರಜ್ಞ ಹಾಗೂ ಕೇಂದ್ರ ಮಾಜಿ ಸಚಿವ ಡಾ.ಸುಬ್ರಮಣ್ಯನ್‌ಸ್ವಾಮಿ ಅವರ ಮೂಲಕ ಕೊಡವ ನ್ಯಾಷನಲ್ ಕೌನ್ಸಿಲ್‌ನ ಅಧ್ಯಕ್ಷ ನಂದಿನೆರವಂಡ ಯು. ನಾಚಪ್ಪ ಅವರು ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಸಿಎನ್‌ಸಿ ಅಧ್ಯಕ್ಷ ನಾಚಪ್ಪ, ವಿರಾಟ್ ಹಿಂದೂಸ್ಥಾನ ಸಂಘದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಜಗದೀಶ್ ಶೆಟ್ಟಿ, ಲೆಫ್ಟಿನೆಂಟ್ ಕರ್ನಲ್ ಬಿ.ಎಂ. ಪಾರ್ವತಿ, ಶ್ರೇಯಾ ನಾಚಪ್ಪ, ಅರೆಯಡ ಗಿರೀಶ್, ಕಿರಿಯಮಾಡ ಶೆರಿನ್, ಬೇಪಡಿಯಂಡ ಬಿದ್ದಪ್ಪ, ಅಪ್ಪಾರಂಡ ಪೂವಣ್ಣ, ವಿಎಚ್‌ಎಸ್ ರಾಜ್ಯಾಧ್ಯಕ್ಷ ನಿಕುಂಜ್ ಶಾ, ಸದಸ್ಯರಾದ ನಟರಾಜ್, ರವಿಶಂಕರ್, ವಕೀಲರಾದ ಪಾರ್ಥ, ಶ್ರೀಕಂಠ ಶರ್ಮಾ, ಮಂಜುನಾಥ್ ಅವರುಗಳು ಹಾಜರಿದ್ದು, ಡಾ.ಸುಬ್ರಮಣಿಯನ್ ಸ್ವಾಮಿ ಅವರೊಂದಿಗೆ ಸಮಾಲೋಚಿಸಿದರು.

'ಜೀವನ್ ಜ್ಯೋತಿ' ಮಲ್ಟಿ ಸ್ಟೇಟ್ ಕ್ರೆಡಿಟ್ ಕೋ–ಆಪರೇಟಿವ್ ಬ್ಯಾಂಕ್ ಉದ್ಘಾಟನೆ



ವಿರಾಜಪೇಟೆ, ಅ.5– ಬ್ಯಾಂಕ್‌ಗಳು ರೈತರ ಸಂಕಷ್ಟಗಳಿಗೆ ಸ್ಪಂದಿಸಿ ಸಹಕಾರ ನೀಡುವಂತಾಗಬೇಕು ಎಂದು ವಿಧಾನಪರಿಷತ್ ಸದಸ್ಯರಾದ ಎಂ.ಪಿ.ಸುಜಾ ಕುಶಾಲಪ್ಪ ಹೇಳಿದರು.

ವಿರಾಜಪೇಟೆ ನಗರದ ದೊಡ್ಡಟ್ಟಿ ಚೌಕಿಯಲ್ಲಿ ನೂತನವಾಗಿ ಅರಂಭವಾಗಿರುವ 'ಜೀವನ್ ಜ್ಯೋತಿ'ಮಲ್ಟಿ ಸ್ಟೇಟ್ ಕ್ರೆಡಿಟ್ ಕೋ (ಮಿನಿಸ್ಟ್ರಿ ಆಫ್ ಕೋ ಆಪರೇಷನ್ ಗವರ್ನಮೆಂಟ್ ಆಫ್ ಇಂಡಿಯ) ಆಪರೇಟಿವ್ ಬ್ಯಾಂಕ್ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ರಿಬ್ಬನ್ ಕತ್ತರಿಸಿ ಉದ್ಘಾಟಿಸಿ ಮಾತನಾಡಿದ ಅವರು, ಕೊಡಗಿನಲ್ಲಿ ಮೊದಲ ಬ್ಯಾಂಕ್ ಇದಾಗಿದ್ದು ಮುಂದೆ ಸಾರ್ವಜನಿಕರಿಗೆ ಉಪಯೋಗವಾಗಲಿ ಎಂದು ಶುಭ ಹಾರೈಸಿದರು.

ಜೀವನ್ ಜ್ಯೋತಿ ಬ್ಯಾಂಕ್ ಅಧ್ಯಕ್ಷ ಸುಗುಮಾರನ್ ಮಾತನಾಡಿ, ಈಗಾಗಲೇ ಕರ್ನಾಟಕ, ತಮಿಳುನಾಡು, ಕೇರಳ, ಮಹಾರಾಷ್ಟ್ರ ರಾಜ್ಯಗಳಲ್ಲಿ 115 ಶಾಖೆಗಳು ಕಾರ್ಯ ನಿರ್ವಹಿಸುತ್ತಿದೆ. ಜೀವನ್ ಜ್ಯೋತಿ ಮಲ್ಟಿ ಸ್ಟೇಟ್ ಬ್ಯಾಂಕ್‌ನ ಅಂಗಸಂಸ್ಥೆಯಾದ ಭಾರತ್ ಲಜ್ಜನ್ ಹೌಸಿಂಗ್ ಕೋಪರೇಟಿವ್ ಸೊಸೈಟಿ ಪಾಂಡಿಚೆರಿ, ಕೇರಳ, ತಮಿಳು ನಾಡು ಸೇರಿದಂತೆ ಹಲವು ಶಾಖೆಗಳನ್ನು ಹೊಂದಿರುವುದಾಗಿ ವಿವರಿಸಿದರು.

ಬಿ.ಎಲ್.ಎಮ್. ಬ್ಯಾಂಕ್ ಅಧ್ಯಕ್ಷರಾದ ಮೂರ್ತಿ, ಜೀವನ್ ಜ್ಯೋತಿ ಬ್ಯಾಂಕ್ ಡೈರೆಕ್ಟರ್ ಕದಿರ್ ಶಿಬಿ, ಪುರಸಭೆ ಸದಸ್ಯರಾದ ಸುನಿತಾ ಜೂನ, ಫಸಿಯಾ ತಬಸಮ್, ಶಶಿ ಮಗ್ಗುಲ ಹಾಗೂ ಬ್ಯಾಂಕ್ ಸಿಬ್ಬಂದಿಗಳು ಮತ್ತಿತರರು ಉಪಸ್ಥಿತರಿದ್ದರು. ಬ್ಯಾಂಕ್ ವ್ಯವಸ್ಥಾಪಕರಾದ ಸರಳ ಲಾಲ್ ಸ್ವಾಗತಿಸಿದರೆ, ಬಿ.ಯು.ಮಾಚಯ್ಯ ವಂದಿಸಿದರು.

ಕರಿಮೆಣಸು ಬಳ್ಳಿಗಳನ್ನು ಕತ್ತರಿಸಿ ಹಾಕಿದ ದುಷ್ಕರ್ಮಿಗಳು



ಮಡಿಕೇರಿ,ಅ.5– ಕಾಫಿ ತೋಟದಲ್ಲಿದ್ದ ಫಸಲು ಭರಿತ ಕರಿಮೆಣಸು ಬಳ್ಳಿಗಳನ್ನು ದುಷ್ಕರ್ಮಿಗಳು ಕಡಿದು ನಾಶಗೊಳಿಸಿದ ಘಟನೆ ಪೊನ್ನಂಪೇಟೆ ತಾಲೂಕಿನಲ್ಲಿ ನಡೆದಿದೆ.

ಕಿರುಗೂರು ನಿವಾಸಿ ಕಾಯಮಾಡ ಕಿರಣ್ ಎಂಬವರ ತೋಟದಲ್ಲಿದ್ದ 25ಕ್ಕೂ ಹೆಚ್ಚು ಕರಿಮೆಣಸು ಬಳ್ಳಿಗಳನ್ನು ಕಡಿದು ಹಾಕಲಾಗಿದ್ದು, ಪೊನ್ನಂಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಘಟನೆ ಹಿನ್ನೆಲೆ: ಪೊನ್ನಂಪೇಟೆಯ ಕಿರುಗೂರು ಗ್ರಾಪಂ ವ್ಯಾಪ್ತಿಯ ನಿವಾಸಿ ಕಾಯ ಮಾಡ ಕಿರಣ್ ಎಂಬುವರ ತೋಟದಲ್ಲಿದ್ದ ಕರಿಮೆಣಸು ಫಸಲನ್ನು ಕಾಯ ಮಾಡರನ್ನು ಮುದ್ದಪ್ಪ ಎಂಬವರು ಗುತ್ತಿಗೆ ಪಡೆದಿದ್ದರು. ತೋಟದಲ್ಲಿ 15ರಿಂದ 30 ಅಡಿ ಎತ್ತರಕ್ಕೆ ಕರಿಮೆಣಸು ಬಳ್ಳಿಗಳು ಹಬ್ಬಿಕೊಂಡಿದ್ದು ಉತ್ತಮ ಫಸಲು ಹೊಂದಿತ್ತು. ನಿನ್ನೆ ರಾತ್ರಿ ತೋಟಕ್ಕೆ ಅಕ್ರಮವಾಗಿ ಪ್ರವೇಶಿಸಿದ ದುಷ್ಕರ್ಮಿಗಳು ಮರಕ್ಕೆ ಹಬ್ಬಿಕೊಂಡಿದ್ದ 25ಕ್ಕೂ ಹೆಚ್ಚು ಕರಿಮೆಣಸು ಬಳ್ಳಿಗಳ ಬುಡವನ್ನೇ ಕತ್ತರಿಸಿ ಹಾಕಿದ್ದಾರೆ. ಪರಿಣಾಮ ಅಂದಾಜು 150 ಕೆ.ಜಿ. ಹಸಿ ಕರಿಮೆಣಸು ನಾಶವಾಗಿದ್ದು, ಲಕ್ಷಾಂತರ ರೂ. ಫಸಲು ನಷ್ಟವಾಗಿದೆ. ಗುರುವಾರ ಮುದ್ದಪ್ಪ ಅವರು ತೋಟಕ್ಕೆ ಬಂದು ನೋಡಿದಾಗ ಘಟನೆ ಬೆಳಕಿಗೆ ಬಂದಿದೆ. ಈ ಕುರಿತು ಪೊನ್ನಂಪೇಟೆ ಪೊಲೀಸರಿಗೆ ದೂರು ನೀಡಿದ ಹಿನ್ನೆಲೆಯಲ್ಲಿ ಪೊನ್ನಂಪೇಟೆ ಠಾಣಾಧಿಕಾರಿ ನವೀನ್ ಮತ್ತು ಸಿಬ್ಬಂದಿಗಳು ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿದರು. 25ಕ್ಕೂ ಹೆಚ್ಚು ಕರಿಮೆಣಸು ಬಳ್ಳಿಗಳು ನಾಶವಾಗಿರುವ ಕಾರಣ ತೋಟದ ಮಾಲೀಕರಿಗೆ 4 ಲಕ್ಷ ರೂ.ಗಳಿಗೂ ಅಧಿಕ ನಷ್ಟವಾಗಿದೆ.

ವಿಶ್ವದ ಅತ್ಯುನ್ನತ ವಿಜ್ಞಾನಿಗಳ ಪಟ್ಟಿಯಲ್ಲಿ ಕೊಡಗಿನ ಡಾ.ಜೆ.ಜಿ.ಮಂಜುನಾಥ

ಮಡಿಕೇರಿ, ಅ.5– ಯುಎಸ್‌ಎಯ ಸ್ಟ್ಯಾನ್‌ಫೋರ್ಡ್ ವಿ.ವಿ. ಮತ್ತು ಎಲ್ಸ್‌ವಿಯರ್ ಸಂಸ್ಥೆಯ ಸಹಯೋಗದೊಂದಿಗೆ ಪ್ರಕಟಿಸಿರುವ ವಿಶ್ವದ ಅತ್ಯುನ್ನತ ಶೇ.2 ವಿಜ್ಞಾನಿಗಳ ಪಟ್ಟಿಯಲ್ಲಿ ಡಾ.ಜೆ.ಜಿ.ಮಂಜುನಾಥ ಅವರು ಸತತ ನಾಲ್ಕನೇ ಬಾರಿ ಸ್ಥಾನ ಪಡೆದಿರುತ್ತಾರೆ.

ನಗರದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನಲ್ಲಿ ರಸಾಯನಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿರುವ ಡಾ.ಜೆ.ಜಿ.ಮಂಜುನಾಥ ಅವರು "ಅನಲೈಟಿಕಲ್ ಮತ್ತು ಎನರ್ಜಿ" ವಿಷಯಗಳಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಕಟಿಸಿರುವ ಸಂಶೋಧನಾ ಲೇಖನಗಳ ಆಧಾರದ ಮೇಲೆ ಇವರು 2023ರ ಸಾಲಿನ ಅತ್ಯುನ್ನತ ವಿಜ್ಞಾನಿಗಳ ಪಟ್ಟಿಯಲ್ಲಿ 4509ನೇ ಸ್ಥಾನವನ್ನು ಮತ್ತು ವಿಶ್ವದ ವೃತ್ತಿ ಜೀವಮಾನ ಸಾಧಕರ ಪಟ್ಟಿಯಲ್ಲಿ 89561 ನೇ ಸ್ಥಾನವನ್ನು ಪಡೆದಿರುತ್ತಾರೆ (ಸಂಯೋಜಿತ ಅಂಕಗಳ ಆಧಾರದ ಮೇಲೆ ಶ್ರೇಣಿ).

ಇವರ ಈ ಸಾಧನೆಯು ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜಿಗೆ ಹೆಮ್ಮೆ ತಂದಿದೆ ಎಂದು ವಿ.ವಿಯ ಕುಲಪತಿಯವರು, ಕುಲಸಚಿವರು ಮತ್ತು ಕಾಲೇಜಿನ ಪ್ರಾಂಶುಪಾಲರು, ಬೋಧಕ, ಬೋಧಕೇತರ ಸಿಬ್ಬಂದಿಗಳು ಹಾಗೂ ಸಮಸ್ತ ವಿದ್ಯಾರ್ಥಿಗಳು ಅಭಿನಂದಿಸಿದ್ದಾರೆ.

ಅರೆಭಾಷೆ ಗೌಡ ಸಮಾಜದಿಂದ ಕೃಷಿ ಸಚಿವರ ಭೇಟಿ



ಮಡಿಕೇರಿ,ಅ.5– ಅರೆಭಾಷೆ ಗೌಡ ಸಮಾಜಗಳು ಹಾಗೂ ಸಮುದಾಯದ ಪ್ರಮುಖರು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ ಅವರ ನೇತೃತ್ವದಲ್ಲಿ ಕಂದಾಯ ಸಚಿವ ಕೃಷ್ಣ ಭೈರೇಗೌಡ ಅವರನ್ನು ಬೆಂಗಳೂರಿನ ಕಚೇರಿಯಲ್ಲಿ ಭೇಟಿಯಾಗಿ ವಿವಿಧ ಬೇಡಿಕೆಗಳ ಕುರಿತು ಚರ್ಚಿಸಿದರು.

ಮದೆನಾಡಿನಲ್ಲಿರುವ ಸಂಘದ 13 ಎಕರೆ ಜಾಗಕ್ಕೆ ಸಂಬಂಧಿಸಿದಂತೆ ಕೆಲವು ತಾಂತ್ರಿಕ ಮತ್ತು ಆಡಳಿತಾತ್ಮಕ ಸಮಸ್ಯೆಗಳಿದ್ದು, ಇವುಗಳಿಗೆ ಪರಿಹಾರ ಸೂಚಿಸುವಂತೆ ಅರೆಭಾಷೆ ಗೌಡ ನಿಯೋಗ ಮನವಿ ಮಾಡಿತು. ಅರೆಭಾಷೆ ಜನಾಂಗದ ಅಭಿವೃದ್ಧಿ ಮತ್ತು ಕಂದಾಯ ಇಲಾಖೆ ಸಮಸ್ಯೆಗಳ ಕುರಿತು ಗಮನ ಸೆಳೆಯಿತು.

ಇದೇ ಸಂದರ್ಭ ಕೆಪಿಸಿಸಿ ಸದಸ್ಯ ಬೇಕಲ್ ರಮಾನಾಥ್ ಅವರು ಮಂಗಳೂರು ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಲು ಅರೆಭಾಷೆ ಗೌಡ ಸಮುದಾಯದವರಿಗೆ ಅವಕಾಶ ಮಾಡಿಕೊಡಬೇಕೆಂದು ಸಚಿವ ಕೃಷ್ಣ ಭೈರೇಗೌಡರಲ್ಲಿ ಮನವಿ ಮಾಡಿದರು. ವಿರಾಜಪೇಟೆ ಶಾಸಕ ಪೊನ್ನಣ್ಣ ಅವರೊಂದಿಗೆ ಚರ್ಚಿಸಿದ ಅರೆಭಾಷೆ ಗೌಡ ಸಮಾಜಗಳ ಪ್ರಮುಖರು ತಲಕಾವೇರಿ ತೀರ್ಥೋದ್ಭವದ ಸಂದರ್ಭ ಯಾವುದೇ ಸಮಸ್ಯೆ ಉಂಟಾಗದಂತೆ ಎಚ್ಚರ ವಹಿಸಬೇಕು. ಶಾಂತಿಯುತ ಹಬ್ಬ ಆಚರಣೆಗೆ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದರು.

13 ಎಕರೆ ಜಾಗ ಸೇರಿದಂತೆ ವಿವಿಧ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಕಂದಾಯ ಸಚಿವರು ಸೂಕ್ತ ರೀತಿಯಲ್ಲಿ ಸ್ಪಂದಿಸಿದ್ದಾರೆ ಎಂದು ನಿಯೋಗದಲ್ಲಿದ್ದ ಗೌಡ ಸಮಾಜಗಳ ಒಕ್ಕೂಟದ ಅಧ್ಯಕ್ಷ ಸೂರ್ತಲೆ ಸೋಮಣ್ಣ ತಿಳಿಸಿದ್ದಾರೆ.

ಕೊಡಗು ಗೌಡ ಸಮಾಜದ ಅಧ್ಯಕ್ಷ ಪೇರಿಯನ ಜಯಾನಂದ, ಕೊಡಗು ಗೌಡ ವಿದ್ಯಾಸಂಘದ ಅಧ್ಯಕ್ಷ ಅಂಬೆಕಲ್ ನವೀನ್, ಪ್ರಮುಖರಾದ ಪೈಕೇರ ಮನೋಹರ್, ಕುಯ್ಯಮುಡಿ ಮನೋಜ್, ಕೆದಂಬಾಡಿ ಋಷಿ ಚೆಟ್ಟಿಮಾನಿ, ತೇನನ ರಾಜೇಶ್, ಹುದೇರಿ ರಾಜೇಂದ್ರ ಕೊಲ್ಯದ ಗಿರೀಶ್, ಸುರೇಶ್, ಭೀಷ್ಮ ಮಾದಪ್ಪ, ಮೋಹನ್ ದಾಸ್, ಅಂಬೇಕಲ್ ನವೀನ್, ದಂಬೆಕೋಡಿ ಆನಂದ, ನಂಗಾರು ನಾಣಯ್ಯ, ಪಾಣತ್ತಲೆ ಪಳಂಗಪ್ಪ, ಕೊಡಗನ ತೀರ್ಥ, ದೇವಂಗೋಡಿ ಹರ್ಷ, ಸೂರಜ್ ಹೊಸೂರು, ಅಮೆ ಸೀತಾ ರಾಮ್, ರವಿರಾಜ್ ಹೊಸೂರು, ಗಣಪಯ್ಯ ಗುಂಡಿಮಜಲು, ಸಂದೀಪ್ ಮುತ್ತಪ್ಪ ಮತ್ತಿತರ ಪ್ರಮುಖರು ನಿಯೋಗದಲ್ಲಿದ್ದರು.

ಜನಪ್ರತಿನಿಧಿಗಳು, ಅಧಿಕಾರಿಗಳು ಗೈರು

ವಿಶ್ವಕರ್ಮ ಜಯಂತಿ ಬಹಿಷ್ಕರಿಸಿ ಪ್ರತಿಭಟನೆ



ಮತ್ತೊಮ್ಮೆ ಕಾರ್ಯಕ್ರಮ ಆಯೋಜಿಸುವ ಭರವಸೆ

ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪಾನಾಗ್ ಅವರು, ಸಮುದಾಯದ ಮುಖಂಡರ ಮನವಿ ಆಲಿಸಿದರು. ನಂತರ ಜಿಲ್ಲಾಧಿಕಾರಿ ಮಾತನಾಡಿ, ಮೆರವಣಿಗೆಯು ತಡವಾಗಿ ಬಂದಿದೆ. ಕಾರ್ಯಕ್ರಮ ಆರಂಭವಾದ ಸಂದರ್ಭದಲ್ಲಿ ನಾನು ಸಭೆಯಲ್ಲಿ ಪಾಲ್ಗೊಂಡಿದ್ದರಿಂದ ಸಿಇಓ ಅವರನ್ನು ಕಾರ್ಯಕ್ರಮಕ್ಕೆ ಕಳುಹಿಸಿ, ನಾನು ಬರುತ್ತೇನೆ ಎಂದು ಹೇಳಿದ್ದೇ, ಆದರೆ, ನಾನು ಬರುವಷ್ಟರಲ್ಲಿ ಪ್ರತಿಭಟನೆ ನಡೆಸಿದ್ದೀರಾ ಎಂದರು.

ಯಾರನ್ನು ಕಡೆಗಣಿಸುವುದಿಲ್ಲ. ನಾವು ಇರುವುದೇ ಜನರ ಕೆಲಸ ಮಾಡುವುದಕ್ಕೆ ಎಂದ ಅವರು, ಕಾರ್ಯಕ್ರಮವನ್ನು ಈಗ ಶುರು ಮಾಡೋಣ ಬನ್ನಿ ಎಂದು ಆಹ್ವಾನಿಸಿದರು. ಇದಕ್ಕೆ ಸಮುದಾಯದವರು ವಿರೋಧ ವ್ಯಕ್ತಪಡಿಸಿದ್ದರಿಂದ ಸಮುದಾಯದವರ ಬೇಡಿಕೆಯಂತೆ ಮತ್ತೊಮ್ಮೆ ಕಾರ್ಯಕ್ರಮ ವ್ಯವಸ್ಥಿತವಾಗಿ ಆಯೋಜಿಸಲಾಗುವುದು ಎಂದು ಭರವಸೆ ನೀಡಿದರು. ನಂತರ ಪ್ರತಿಭಟನೆ ಕೈ ಬಿಡಲಾಯಿತು. ಈ ವೇಳೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿಸಾಹು, ಜಿಪಂ ಸಿಇಓ ಆನಂದ್ ಪ್ರಕಾಶ ಮೀನಾ ಇದ್ದರು.

ಚಾಮರಾಜನಗರ, ಅ.5– ವಿಶ್ವಕರ್ಮ ಜಯಂತಿ ಕಾರ್ಯಕ್ರಮಕ್ಕೆ ಜನಪ್ರತಿನಿಧಿಗಳು, ಅಧಿಕಾರಿಗಳು ಗೈರಾದ ಹಿನ್ನೆಲೆಯಲ್ಲಿ ಸಮುದಾಯದ ಜನರು ಜಯಂತಿಯ ವೇದಿಕೆ ಕಾರ್ಯಕ್ರಮವನ್ನು ಬಹಿಷ್ಕರಿಸಿ, ಪ್ರತಿಭಟನೆ ನಡೆಸಿದರು.

ವಿಚಾರ ತಿಳಿದು ಸ್ಥಳಕ್ಕೆ ಆಗಮಿಸಿದ ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪನಾಗ್ ಅವರು ಕ್ಷಮೆ ಕೋರಿ ಮತ್ತೊಮ್ಮೆ ವ್ಯವಸ್ಥಿತವಾಗಿ ಕಾರ್ಯಕ್ರಮವನ್ನು ಆಯೋಜಿಸಲಾಗುವುದು ಎಂದು ಭರವಸೆ ನೀಡಿದ ಬಳಿಕ, ಪ್ರತಿಭಟನೆ ಕೈ ಬಿಡಲಾಯಿತು. ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಡಾ.ರಾಜ್‌ಕುಮಾರ್ ಜಿಲ್ಲಾ ಕಲಾಮಂದಿರದಲ್ಲಿ ಗುರುವಾರ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ವಿಶ್ವಕರ್ಮರ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಅಂಗವಾಗಿ ಬೆಳಗ್ಗೆ ಕೊಳದ ಗಣಪತಿ ಬಳಿಯ ಮಂಟೇಸ್ವಾಮಿ ದೇವಸ್ಥಾನದ ಬಳಿಯಲ್ಲಿ ವಿಶ್ವಕರ್ಮರ ಭಾವಚಿತ್ರದ ಮೆರವಣಿಗೆಗೆ ಚಾಲನೆ ನೀಡಲಾಯಿತು. ಮೆರವಣಿಗೆಯು ನಗರದ ಪ್ರಮುಖ ಬೀದಿಯಲ್ಲಿ ಸಾಗಿ ಅಂತಿಮವಾಗಿ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಡಾ.ರಾಜ್‌ಕುಮಾರ್ ಕಲಾಮಂದಿರ ತಲುಪಿತು.

ನಂತರ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಜಿಪಂ ಸಿಇಓ ಅವರನ್ನು ಹೊರತುಪಡಿಸಿ ಬೇರೆ ಅಧಿಕಾರಿಗಳು, ಜನಪ್ರತಿನಿಧಿಗಳು ಆಗಮಿಸಿರಲಿಲ್ಲ. ಇದರಿಂದ ಆಕ್ರೋಶಗೊಂಡ ಸಮುದಾಯದವರು ಕಾರ್ಯಕ್ರಮವನ್ನು ಬಹಿಷ್ಕರಿಸಿ, ಹೊರನಡೆದರು.

ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಸಮುದಾಯವನ್ನು ಕಡೆಗಣಿಸಿದ್ದಾರೆ. ಕಾಟಾಚಾರಕ್ಕೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ದೂರಿದರು. ಈ ವೇಳೆ ಜಿಪಂ ಸಿಇಓ ಆನಂದ ಪ್ರಕಾಶ್ ಮೀನಾ ಅವರು ಜನಾಂಗದವರ ಮನವೊಲಿಸಲು ಮುಂದಾದರೂ, ಯಾವುದೇ ಪ್ರಯೋಜನವಾಗಲಿಲ್ಲ.

ಇದೇ ವೇಳೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿ ಗುರುಲಿಂಗಯ್ಯ ಅವರನ್ನು ಸಮುದಾಯದ ಮುಖಂಡರು ತರಾಟೆಗೆ ತೆಗೆದುಕೊಂಡು ನಿಮ್ಮ ನಿರ್ಲಕ್ಷ್ಯದಿಂದಲೇ ವಿಶ್ವಕರ್ಮರ ಜಯಂತಿಯನ್ನು ಕಡೆಗಣಿಸಲಾಗಿದೆ ಎಂದು ಆರೋಪಿಸಿದರು.

ಬಳಿಕ ರಂಗಮಂದಿರದ ಮುಂಭಾಗ ಸಮಾವೇಶಗೊಂಡ ವಿಶ್ವಕರ್ಮ ಸಮುದಾಯದ ನೂರಾರು ಮಂದಿ, ಜನಪ್ರತಿನಿಧಿಗಳು, ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಸ್ಥಳಕ್ಕೆ ಜಿಲ್ಲಾಧಿಕಾರಿ ಬರಬೇಕೆಂದು ಪಟ್ಟು ಹಿಡಿದರು.

ಈ ವೇಳೆ ಸಮುದಾಯದ ಮುಖಂಡ ಶ್ರೀನಿವಾಸಪ್ರಸಾದ್ ಮಾತನಾಡಿ, ವಿಶ್ವಕರ್ಮರ ಜಯಂತಿಯನ್ನು ಈ ಮೊದಲು ಎರಡು ಬಾರಿ ಮುಂದೂಡಿ ಅ.5ಕ್ಕೆ ನಿಗದಿಪಡಿಸಲಾಯಿತು. ಆದರೂ, ಕಾರ್ಯಕ್ರಮಕ್ಕೆ ಅಧಿಕಾರಿಗಳಾಗಲಿ, ಜನಪ್ರತಿನಿಧಿಗಳಾಗಲಿ ಆಗಮಿಸದೇ ನಿರ್ಲಕ್ಷ್ಯ ಮಾಡಲಾಗಿದೆ ಎಂದು ದೂರಿದರು.

ಇಂದು ಆಯೋಜಿಸಿರುವ ವಿಶ್ವಕರ್ಮರ ಜಯಂತಿ ಕಾರ್ಯಕ್ರಮವನ್ನು ರದ್ದುಪಡಿಸಿ, ಶೀಘ್ರದಲ್ಲೇ ಜಯಂತಿ ಕಾರ್ಯಕ್ರಮ ಸಂಬಂಧ ಪೂರ್ವಭಾವಿ ಸಭೆ ನಡೆಸಿ, ಮತ್ತೊಂದು ದಿನಾಂಕ ನಿಗದಿಪಡಿಸಿ ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ಆಯೋಜಿಸಬೇಕು. ಅಧಿಕಾರಿಗಳು, ಜನಪ್ರತಿನಿಧಿಗಳು ಪಾಲ್ಗೊಂಡು ಸಮುದಾಯದ ಬೇಡಿಕೆಗಳಿಗೆ ಸ್ಪಂದಿಸುವ ಕೆಲಸ ಮಾಡಬೇಕು ಎಂದು ಆಗ್ರಹಿಸಿದರು.

ಪತ್ರಿಕಾ ವಿತರಕರನ್ನು ರಾಜ್ಯೋತ್ಸವ ಪ್ರಶಸ್ತಿಗೆ ಪರಿಗಣಿಸುವಂತೆ ಮನವಿ



ಚಾಮರಾಜನಗರ, ಅ.5– ಜಿಲ್ಲೆಯಿಂದ ನೀಡಲಾಗುವ ರಾಜ್ಯೋತ್ಸವ ಪ್ರಶಸ್ತಿಗೆ ಪತ್ರಿಕಾ ವಿತರಕರನ್ನು ಪರಿಗಣಿಸಬೇಕು ಎಂದು ಚಾಮರಾಜನಗರ ಪತ್ರಿಕಾ ವಿತರಕರ ಜಿಲ್ಲಾ ಘಟಕದಿಂದ ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪಾನಾಗ್ ಅವರಿಗೆ ಮನವಿ ಸಲ್ಲಿಸಲಾಯಿತು.

ನಗರದ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾಧಿಕಾರಿ ಕಚೇರಿಗೆ ಗುರುವಾರ ಭೇಟಿ ನೀಡಿದ ಸಂಘದ ಪದಾಧಿಕಾರಿಗಳು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು. ಚಾಮರಾಜನಗರ ಜಿಲ್ಲೆಯಲ್ಲಿ ಕಳೆದ 35ರಿಂದ 40ವರ್ಷದಿಂದ ನೂರಾರು ಮಂದಿ ಪತ್ರಿಕೆ ವಿತರಣೆ ಮಾಡಿಕೊಂಡು ಬರುತ್ತಿದ್ದು, ನಮ್ಮ ಸೇವೆಯನ್ನು ಇದುವರೆಗೆ ಜಿಲ್ಲಾಡಳಿತವಾಗಲಿ ಅಥವಾ ಸಂಘ ಸಂಸ್ಥೆಗಳಾಗಲಿ ಗುರುತಿಸಿಲ್ಲ ಎಂದು ತಿಳಿಸಿದರು. ಪ್ರತಿನಿತ್ಯ ಮುಂಜಾನೆಯೇ ಎದ್ದು ಚಳಿ, ಗಾಳಿಯಲ್ಲಿ ಮನೆ–ಮನೆಗೆ ಪತ್ರಿಕೆ ಹಂಚುತ್ತಿದ್ದು, ನಮ್ಮ ಸೇವೆಯನ್ನು ಜಿಲ್ಲಾಡಳಿತ ಗುರುತಿಸಬೇಕು. ಈ ಬಾರಿಯ ರಾಜ್ಯೋತ್ಸವ ಪ್ರಶಸ್ತಿಗೆ ಪತ್ರಿಕಾ ವಿತರಕರನ್ನು ಪರಿಗಣಿಸಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಅಧ್ಯಕ್ಷರಾದ ಸಿ. ಪುರುಷೋತ್ತಮ, ಪ್ರಧಾನ ಕಾರ್ಯದರ್ಶಿ ಎನ್. ಅಕ್ಷಯ್, ಉಪಾಧ್ಯಕ್ಷರಾದ ದೇಮಳ್ಳಿ ಶಿವಕುಮಾರ್, ಸಹ ಕಾರ್ಯದರ್ಶಿ ಶಿವಲಿಂಗಮೂರ್ತಿ, ನಿರ್ದೇಶಕರಾದ ಮಂಜುನಾಥ್ ಆರಾಧ್ಯ, ಬದನಗುಪ್ಪೆ ಮಲಣ್ಣ, ವಿತರಕರಾದ ಎಂ. ಶಿವಣ್ಣ, ರಾಜಣ್ಣ, ಬಸವರಾಜು ಸೇರಿದಂತೆ ಇತರರಿದ್ದರು.

ಅ.9, ಅಪ್ರೆಂಟಿಸ್ ಮೇಳ: 15ಕ್ಕೂ ಹೆಚ್ಚು ಪ್ರತಿಷ್ಠಿತ ಕಂಪನಿಗಳು ಭಾಗಿ

ಚಾಮರಾಜನಗರ, ಅ.5– ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಿಂದ ಪ್ರಧಾನಮಂತ್ರಿ ರಾಷ್ಟ್ರಮಟ್ಟದ ಅಪ್ರೆಂಟಿಸ್ (ಶಿಶಿಕ್ಷು) ಮೇಳವನ್ನು ಅ.9ರಂದು ಬೆಳಿಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ಮರಿಯಾಲದ ಜೆ.ಎಸ್.ಎಸ್. ಐ.ಟಿಐ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಮೇಳದಲ್ಲಿ 15ಕ್ಕೂ ಹೆಚ್ಚು ಪ್ರತಿಷ್ಠಿತ ಕಂಪನಿಗಳು ಭಾಗವಹಿಸಲಿದ್ದು, 5 ರಿಂದ 12ನೇ ತರಗತಿವರೆಗೆ ತೇರ್ಗಡೆ ಹೊಂದಿರುವವರು, ಕೌಶಲ್ಯ ತರಬೇತಿ ಹೊಂದಿ ಪ್ರಮಾಣ ಪತ್ರ ಪಡೆದವರು, ಐಟಿಐ, ಡಿಪ್ಲೊಮೊ, ಪದವಿ ಪಡೆದವರು ಅಪ್ರೆಂಟಿಸ್ ಮೇಳದಲ್ಲಿ ಭಾಗವಹಿಸಬಹುದು. ಮೇಳದ ಸದುಪಯೋಗ ಪಡೆದುಕೊಳ್ಳುವಂತೆ ಪ್ರಧಾನಮಂತ್ರಿ ರಾಷ್ಟ್ರೀಯ ಶಿಶಿಕ್ಷು ಮೇಳದ ನೋಡಲ್ ಅಧಿಕಾರಿ ಹೆಚ್.ಪಿ. ಶ್ರೀಕಂಠಾರಾಧ್ಯ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರೆಕಾಡು ದೊಡ್ಡಿ ಸುತ್ತಮುತ್ತಲ

ಗಿರಿಜನರ ಜಮೀನುಗಳಿಗೆ ರೈಲ್ವೆ ಕಂಬಿ ಅಳವಡಿಕೆ

ಮಾಜಿ ಶಾಸಕ ನರೇಂದ್ರ ಮನವಿಗೆ ಸಮ್ಮತಿಸಿದ ಅರಣ್ಯ ಸಚಿವರು



ಹನೂರು, ಅ.5– ತಾಲೂಕಿನ ಅರೆಕಾಡು ದೊಡ್ಡಿಯಲ್ಲಿರುವ ಗಿರಿಜನರ ಜಮೀನಿನ ಸುತ್ತಲು ರೈಲ್ವೆಕಂಬಿ ಅಳವಡಿಸಲು ಅರಣ್ಯ ಸಚಿವ ಈಶ್ವರ್ ಖಂಡ್ರೆ ಸಮ್ಮತಿಸಿದ್ದಾರೆ.

ಬೆಂಗಳೂರಿನ ವಿಕಾಸಸೌಧದ ಕಚೇರಿಯಲ್ಲಿ ಮಾಜಿ ಶಾಸಕ ಆರ್.ನರೇಂದ್ರ ಅವರು ಸಚಿವರನ್ನು ಭೇಟಿಯಾಗಿ, ಅರೆಕಾಡು ದೊಡ್ಡಿ, ವಿ.ಎಸ್.ದೊಡ್ಡಿ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಗಿರಿಜನರಿಗೆ ಸರ್ಕಾರ ಅರಣ್ಯ ಹಕ್ಕು ಕಾಯ್ದೆಯಡಿ ಜಮೀನು ಹಕ್ಕು ಪತ್ರವನ್ನು ನೀಡಲಾಗಿದ್ದು, ಹಲವು ವರ್ಷಗಳಿಂದಲೂ ಸಾಗುವಳಿ ಭೂಮಿಯಲ್ಲಿ ಕೃಷಿ ಮಾಡುತ್ತಿದ್ದಾರೆ. ಆದರೆ ಈ ಭಾಗದಲ್ಲಿ ಕಾಡಾನೆಗಳ ಹಾವಳಿ ಹೆಚ್ಚಾಗಿದ್ದು, ಜಮೀನಿಗೆ ಲಗ್ಗೆ ಇಟ್ಟು ಫಸಲನ್ನು ನಾಶಪಡಿಸುತ್ತಿವೆ. ಇದರಿಂದ ಗಿರಿಜನರು ನಷ್ಟವನ್ನು ಅನುಭವಿಸುತ್ತಿದ್ದಾರೆ. ಆದರೆ ಅರಣ್ಯ ಇಲಾಖೆ ಈ ಭಾಗದಲ್ಲಿ ಕಂದಾಯ ಇಲಾಖೆಗೆ ಸೇರಿದ ಜಮೀನುಗಳಿಗೆ ಮಾತ್ರ ಸುತ್ತಲು ರೈಲ್ವೆ ಕಂಬಿಗಳನ್ನು ಅಳವಡಿಸುತ್ತಿದ್ದಾರೆ. ಆದರೆ ಗಿರಿಜನರಿಗೆ ಹಕ್ಕುಪತ್ರ ನೀಡಿದ ಜಮೀನುಗಳಲ್ಲಿ ರೈಲ್ವೆಕಂಬಿ ಅಳವಡಿಸಿಲ್ಲ ಎಂದು ಗಿರಿಜನರು ಪ್ರತಿಭಟನೆ ನಡೆಸಿದ್ದಾರೆ. ಆದರೆ ಯಾವುದೇ ಪ್ರಯೋಜನವಾಗಿಲ್ಲ ಎಂದರು. ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 81 ಗಿರಿಜನರ ಪೋಡುಗಳಲ್ಲಿ ಅರಣ್ಯ ಹಕ್ಕು ಕಾಯ್ದೆ ಯಡಿ ಸುಮಾರು 3 ಸಾವಿರಕ್ಕೂ ಹೆಚ್ಚು ಎಕರೆಯನ್ನು ಗಿರಿಜನರಿಗೆ ಜಮೀನು ಹಕ್ಕುಪತ್ರ ನೀಡಲಾಗಿದ್ದು, ಸರ್ಕಾರದಿಂದ ಸವಲತ್ತುಗಳನ್ನು ನೀಡಲಾಗುತ್ತಿದೆ. ಕಾಡು ಪ್ರಾಣಿಗಳ ಹಾವಳಿಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಜಮೀನಿನ ಸುತ್ತಲು ಸೋಲಾರ್ ತಂತಿ ಅಳವಡಿಸಲು ಅವಕಾಶವಿದೆ. ಆದರೆ ರೈಲ್ವೆಕಂಬಿಯನ್ನು ಅಳವಡಿಸುವಂತೆ ಗಿರಿಜನರು ಒತ್ತಾಯಿಸಿದ್ದಾರೆ.

ಆದ್ದರಿಂದ ಈ ಬಗ್ಗೆ ಗಮನಹರಿಸಿ ರೈಲ್ವೆ ಕಂಬಿ ಅಳವಡಿಸುವಂತೆ ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಅರಣ್ಯ ಸಚಿವ ಈಶ್ವರ್ ಖಂಡ್ರೆ, ರೈಲ್ವೆ ಕಂಬಿ ಅಳವಡಿಸುವುದಾಗಿ ಮಾಜಿ ಶಾಸಕ ಆರ್.ನರೇಂದ್ರ ಅವರಿಗೆ ಭರವಸೆ ನೀಡಿದ್ದಾರೆ. ಈ ಬಗ್ಗೆ ಮಾಜಿ ಶಾಸಕ ಆರ್ ನರೇಂದ್ರ ಮಾತನಾಡಿ, ಅರೆಕಾಡು ದೊಡ್ಡಿ ಗ್ರಾಮದ ಗಿರಿಜನರು ಸರ್ಕಾರದಿಂದ ನೀಡಿರುವ ಜಮೀನುಗಳಿಗೆ ರೈಲ್ವೆ ಕಂಬಿ ಅಳವಡಿಸಿಕೊಡುವಂತೆ ಅರಣ್ಯ ಇಲಾಖೆಗೆ ಒತ್ತಾಯಿಸಿ ಸಚಿವರ ಜೊತೆ ಮಾತನಾಡಿ, ಸಮಸ್ಯೆ ಬಗೆಹರಿಸುವುದಾಗಿ ಭರವಸೆ ನೀಡಿದ್ದೆ. ಸಚಿವರ ಜೊತೆ ಮಾತನಾಡಿ ಸಮಸ್ಯೆ ಬಗೆಹರಿಸಿದ್ದೇನೆ ಎಂದು ತಿಳಿಸಿದರು.

ಖಾಲಿ ಟಿನ್ ಬಡಿದು ಸರ್ಕಾರದ ವಿರುದ್ಧ ಪ್ರತಿಭಟನೆ



ಚಾಮರಾಜನಗರ, ಅ.5– ರಾಜ್ಯ ಸರ್ಕಾರವು ತಮಿಳುನಾಡಿಗೆ ಕಾವೇರಿ ನೀರು ಹರಿಸುವುದನ್ನು ವಿರೋಧಿಸಿ ನಗರದಲ್ಲಿ ಗುರುವಾರ ಕರ್ನಾಟಕ ಸೇನಾಪಡೆ ಕಾರ್ಯಕರ್ತರು ಖಾಲಿ ಟಿನ್‌ಗಳನ್ನು ಬಡಿದು ಪ್ರತಿಭಟನೆ ನಡೆಸಿದರು.

ನಗರದ ಶ್ರೀಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು ಅಲ್ಲಿಂದ ಮೆರವಣಿಗೆ ಹೊರಟು ಖಾಲಿ ಟಿನ್‌ಗಳನ್ನು ಬಡಿಯುತ್ತಾ ಭುವನೇಶ್ವರಿ ವೃತ್ತಕ್ಕೆ ತೆರಳಿ ಕೇಂದ್ರ, ರಾಜ್ಯ ಹಾಗೂ ಕಾವೇರಿ ನಿರ್ವಹಣಾ ಮಂಡಳಿ, ತಮಿಳುನಾಡು ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆ ನೇತೃತ್ವ ವಹಿಸಿದ ಚಾ.ರಂ. ಶ್ರೀನಿವಾಸಗೌಡ ಮಾತನಾಡಿ, ರಾಜ್ಯ ಸರ್ಕಾರ ಕಳೆದ 26 ದಿನಗಳಿಂದಲೂ ತಮಿಳುನಾಡಿಗೆ ಕಾವೇರಿ ನೀರು ಹರಿಸುವ ಮೂಲಕ ಖಾಲಿ ಟಿನ್ ಆಗಿದೆ. ಕೂಡಲೇ ರಾಜ್ಯ ಸರ್ಕಾರ ನೀರನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಶಾ. ಮುರಳಿ, ಪಣ್ಯದಹುಂಡಿ ರಾಜು, ಮಹೇಶ್‌ಗೌಡ, ನಿಜಧ್ವನಿ ಗೋವಿಂದರಾಜು, ರವಿಚಂದ್ರ ಪ್ರಸಾದ್ ಕಹಳೆ, ಲಿಂಗರಾಜು, ಚಾ.ಸಿ. ಸಿದ್ದರಾಜು, ವೀರಭದ್ರ ತಾಂಡವಮೂರ್ತಿ, ಆಟೋ ನಾಗೇಶ್, ಶಿವು, ಚಾ.ಹ. ರಾಮು, ಗು. ಪುರುಷೋತ್ತಮ್, ಸೋಮವಾರಪೇಟೆ ಮಂಜು, ಕೆ.ಎಂ. ನಾಗರಾಜು, ಮುತ್ತುರಾಜು, ನಾಗರಾಜುಮೂರ್ತಿ ಇತರರಿದ್ದರು.

ಒಂದನೇ ಪುಟದಿಂದ

250 ರೂ. ದರ ನಿಗದಿ

ಸುಸಜ್ಜಿತ ಬಸ್ಸುಗಳಲ್ಲಿ ಪ್ರವಾಸ ಕೈಗೊಳ್ಳಲು ವ್ಯವಸ್ಥೆ ಕಲ್ಪಿಸಲಾಗಿದೆ. ಮೈಸೂರಿನಿಂದ ಹೊರಡುವ ಬಸ್ಸು ಜೋಗ್‌ಫಾಲ್ಸ್, ಗೋಕರ್ಣ, ಗೋವಾಗೆ 5 ದಿನಗಳ ಪ್ರವಾಸಕ್ಕೆ ಪ್ರತಿಯೊಬ್ಬರಿಗೆ ವಸತಿ ಸೇರಿ 6,358 ರೂ. ಊಟ-ತಿಂಡಿ ವ್ಯವಸ್ಥೆ ಒಳಗೊಂಡಿರುವುದಿಲ್ಲ. ಉಳಿದಂತೆ ಒಂದು ದಿನದ ಪ್ರವಾಸ (ಬೆಳಗ್ಗೆ ಹೊರಟು ರಾತ್ರಿ ಮೈಸೂರಿಗೆ ಹಿಂದಿರುಗುವುದು). ಶ್ರವಣಬೆಳಗೊಳ-ಬೇಲೂರು-ಹಳೇಬೀಡು (1,089 ರೂ.), ಸೋಮನಾಥಪುರ-ಶಿವನಸಮುದ್ರ-ತಲಕಾಡು-ಮುಡುಕುತೊರೆ- ಗಗನಚುಕ್ಕಿ-ಭರಚುಕ್ಕಿ (550 ರೂ.), ನಂಜನಗೂಡು-ಹಿಮವದ್ ಗೋಪಾಲಸ್ವಾಮಿ ಬೆಟ್ಟ-ಬಿಳಿಗಿರಿ ರಂಗನಬೆಟ್ಟ (728 ರೂ.), ಕೆಆರ್‌ಎಸ್ ಹಿನ್ನೀರು-ವೇಣುಗೋಪಾಲಸ್ವಾಮಿ ದೇವಸ್ಥಾನ-ಚೆಲುವರಾಯಸ್ವಾಮಿ ದೇವಸ್ಥಾನ-ಯೋಗಾನರಸಿಂಹಸ್ವಾಮಿ ದೇವಸ್ಥಾನ-ಆದಿಚುಂಚನಗಿರಿ (660 ರೂ.), ದುಬಾರೆ-ಅಬ್ಬೆ ಫಾಲ್ಸ್-ರಾಜಾಸೀಟ್-ಕಾವೇರಿ ನಿಸರ್ಗಧಾಮ-ಗೋಲ್ಡನ್ ಟೆಂಪಲ್ -ಬೈಲುಕುಪ್ಪೆ (979 ರೂ.), ಹಾಗೂ ಮೈಸೂರಿನ ಜಗನ್ಮೋಹನ ಅರಮನೆ-ಮೃಗಾಲಯ-ಚಾಮುಂಡಿಬೆಟ್ಟ-ಅರಮನೆ-ಸೆಂಟ್ ಫಿಲೋಮಿನಾ ಚರ್ಚ್-ಶ್ರೀರಂಗಪಟ್ಟಣ-ಗೋಲಗುಂಬಜ್-ಟಿಪ್ಪು ಸುಲ್ತಾನ್ ಅರಮನೆ-ಶ್ರೀ ರಂಗನಾಥಸ್ವಾಮಿ ದೇವಸ್ಥಾನ-ಕೆಆರ್‌ಎಸ್ ಬೃಂದಾವನ ಗಾರ್ಡನ್ 440 ರೂ.

ಒಂದು ದಿನದ ಪ್ರವಾಸ ಪ್ಯಾಕೇಜ್‌ನಲ್ಲಿ ಪ್ರಯಾಣ ಮಾತ್ರ ಇರಲಿದ್ದು, ಊಟ-ತಿಂಡಿಯನ್ನು ಪ್ರವಾಸಿಗರೇ ವ್ಯವಸ್ಥೆ ಮಾಡಿಕೊಳ್ಳಬೇಕು. ಈಗಾಗಲೇ ಆನ್‌ಲೈನ್‌ನಲ್ಲಿ ಪ್ರವಾಸದ ಮುಂಗಡ ಬುಕ್ಕಿಂಗ್ ಆರಂಭಿಸಲಾಗಿದ್ದು, ಖುದ್ದಾಗಿಯೂ ಕೆಎಸ್‌ಟಿಡಿಸಿ ಕಚೇರಿಯಲ್ಲಿ ಬುಕ್ ಮಾಡಬಹುದಾಗಿದೆ ಎಂದು ಜಗದೀಶ್ ಅವರು ತಿಳಿಸಿದ್ದಾರೆ.

ಪ್ರವಾಸೋದ್ಯಮ ಉತ್ತೇಜಿಸುವ ದೃಷ್ಟಿಯಿಂದ ವಿಶೇಷ ಟೂರ್ ಪ್ಯಾಕೇಜ್ ಆಯೋಜಿಸಲಾಗಿದ್ದು, ನಿಗಮದ ಸಿಬ್ಬಂದಿ ಸುರಕ್ಷಿತವಾಗಿ ಕರೆದೊಯ್ದು ಸುಗಮವಾಗಿ ಪ್ರವಾಸ ಕಾರ್ಯಕ್ರಮ ಮುಗಿಸಿ ಕರೆತರಲು ವ್ಯವಸ್ಥೆ ಮಾಡಲಾಗಿದೆ. ಅತೀ ಕಡಿಮೆ ದರದಲ್ಲಿ ಪ್ರವಾಸಿ ತಾಣ ವೀಕ್ಷಿಸುವ ದೃಷ್ಟಿಯಿಂದ ಈ ಸೌಲಭ್ಯ ಒದಗಿಸಲಾಗಿದೆ ಎಂದು ಅವರು ತಿಳಿಸಿದರು.

ಸಿದ್ದರಾಮಯ್ಯ ಸಲಹೆ

ರಾಜ್ಯದಲ್ಲಿ ಶೇ.90ರಷ್ಟು ಬಿತ್ತನೆ ಆಗಿದ್ದು, ಅದರಲ್ಲಿ 42 ಲಕ್ಷ ಹೆಕ್ಟೇರ್‌ಗೂ ಹೆಚ್ಚು ಪ್ರದೇಶದಲ್ಲಿ ಬೆಳೆಹಾನಿಯಾಗಿದೆ. ರೈತರ ಜಮೀನಿನಲ್ಲಿ ಹಸಿರು ಕಾಣಿಸಿದರೂ ಬೆಳೆಯಿಲ್ಲದ ಪರಿಸ್ಥಿತಿ ಉಂಟಾಗಿದ್ದು, ರಾಜ್ಯದಲ್ಲಿ ಹಸಿರು ಬರ ತಲೆದೋರಿದೆ ಎಂದು ವಾಸ್ತವ ಪರಿಸ್ಥಿತಿಯನ್ನು ವಿವರಿಸಿದರು. ಪ್ರವಾಸದ ಸಂದರ್ಭದಲ್ಲಿ ರಾಜ್ಯದ ವಸ್ತುಸ್ಥಿತಿಯನ್ನು ಅರಿತು ಕೇಂದ್ರಕ್ಕೆ ಮನವರಿಕೆ ಮಾಡುವ ಮೂಲಕ ರೈತರ ಸಂಕಷ್ಟಕ್ಕೆ ಕೇಂದ್ರ ಸರ್ಕಾರ ತ್ವರಿತವಾಗಿ ಸ್ಪಂದಿಸಬೇಕೆಂದ ಅವರು, ಮುಂಗಾರು ವಿಳಂಬ ಹಾಗೂ ಆಗಸ್ಟ್ ತಿಂಗಳಲ್ಲಿ ಕಳೆದ 122 ವರ್ಷಗಳಲ್ಲೇ ಅತಿ ಕಡಿಮೆ ಮಳೆಯಾಗಿರುವ ಹಿನ್ನೆಲೆಯಲ್ಲಿ ರಾಜ್ಯದ ಅಣೆಕಟ್ಟುಗಳು ಬರಿದಾಗಿವೆ. ಸೆಪ್ಟೆಂಬರ್ ತಿಂಗಳಲ್ಲಿ ಅಲ್ಪಪ್ರಮಾಣದಲ್ಲಿ ಚದುರಿದಂತೆ ಮಳೆಯಾಗಿದೆ. ಆದರೆ ಮುಂಗಾರು ಮುಗಿಯುತ್ತಾ ಬಂದಿದೆ. ಇದರಿಂದ ನೀರಿನ ಕೊರತೆ, ವಿದ್ಯುತ್ ಕೊರತೆಯ ಆತಂಕವನ್ನು ಸೃಷ್ಟಿಸಿದೆ ಎಂದು ವಿವರಿಸಿದರು.

ಕೊಡಗು ಜಿಲ್ಲೆಯಲ್ಲಿ ಮಳೆ ಕೊರತೆಯಿಂದಾಗಿ ಕೆಆರ್‌ಎಸ್ ಅಣೆಕಟ್ಟಿನಲ್ಲಿ ನೀರಿನ ಮಟ್ಟ ಕಡಿಮೆಯಾಗಿದೆ. ಕುಡಿಯುವ ನೀರಿಗಾಗಿಯೇ ರಾಜ್ಯಕ್ಕೆ 33 ಟಿಎಂಸಿ ನೀರಿನ ಅವಶ್ಯಕತೆಯಿದೆ. ಆದರೆ ಮಳೆಯ ಕೊರತೆಯಿಂದ ಆತಂಕದ ಸ್ಥಿತಿ ಎದುರಾಗಿದೆ ಎಂದು ವಿವರಿಸಿದರು. ರಾಜ್ಯದಲ್ಲಿ ಸಣ್ಣ ಮತ್ತು ಮಧ್ಯಮ ರೈತರ ಸಂಖ್ಯೆ ಹೆಚ್ಚಿದ್ದು, ಇವರ ದತ್ತಾಂಶವನ್ನು ಫ್ರೂಟ್ಸ್ ತಂತ್ರಾಂಶದಲ್ಲಿ ಸಂಗ್ರಹಿಸಲಾಗಿದೆ. ಜೊತೆಗೆ ಬೆಳೆ ಸಮೀಕ್ಷೆಯನ್ನೂ ಸಹ ಡಿಜಿಟಲ್ ಮಾಡಿರುವುದರಿಂದ ನಿಖರ ಮಾಹಿತಿ ದೊರೆಯುವುದು. ರೈತರಿಗೆ ಎನ್‌ಡಿಆರ್‌ಎಫ್ ಮಾರ್ಗಸೂಚಿಯಲ್ಲಿ ನಿಗದಿ ಪಡಿಸಿರುವ ಬೆಳೆ ನಷ್ಟ ಪರಿಹಾರ ಅತ್ಯಂತ ಕಡಿಮೆಯಿದ್ದು, ಅದನ್ನು ಹೆಚ್ಚಿಸುವ ಅಗತ್ಯವಿದೆ. ರಾಜ್ಯದಲ್ಲಿ ರೈತರಿಗೆ ಹೆಚ್ಚುವರಿಯಾಗಿ ಬೆಳೆ ನಷ್ಟ ಪರಿಹಾರ ನೀಡಲಾಗುತ್ತಿದೆ ಎಂದು ಕೇಂದ್ರ ತಂಡಕ್ಕೆ ತಿಳಿಸಿದರು. ಸಭೆಯಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ಕಂದಾಯ ಇಲಾಖೆ ಕಾರ್ಯದರ್ಶಿ ರಶ್ಮಿ ವಿ. ಮಹೇಶ್, ಕೇಂದ್ರ ತಂಡದ ಮುಖ್ಯಸ್ಥ ಅಜಿತ್ ಕುಮಾರ್ ಸಾಹು ಹಾಗೂ ತಂಡದ ಸದಸ್ಯರು ಉಪಸ್ಥಿತರಿದ್ದರು.

ಶೇ.33ರಷ್ಟು ಮೀಸಲಾತಿ

2027-28ರಲ್ಲಿ ನಡೆಯುವ ಸ್ಥಳೀಯ ಸಂಸ್ಥೆಗಳ ಚುನಾವಣೆಗೂ ಮುನ್ನ ಹಿಂದುಳಿದ ವರ್ಗಗಳ ಕೆಟಗರಿ ಎ ಮತ್ತು ಬಿ ಜೊತೆಗೆ ಅಲ್ಪಸಂಖ್ಯಾತರು ಸೇರಿದಂತೆ ಇತರ ಹಿಂದುಳಿದ ವರ್ಗದವರಿಗಾಗಿ ಪರಿಣಾಮಕಾರಿಯಾದ ರಾಜಕೀಯ ಮೀಸಲು ವ್ಯವಸ್ಥೆ ಕಲ್ಪಿಸಲು ಎರಡು ಹೆಚ್ಚುವರಿ ಕೆಟಗರಿಗಳನ್ನು ಸೇರಿಸಿ ಹಿಂದುಳಿದ ವರ್ಗಗಳ ಮರು ವರ್ಗೀಕರಣ ಮಾಡಲು ಕ್ರಮ ಕೈಗೊಳ್ಳುವ ಶಿಫಾರಸ್ಸುಗಳನ್ನು ಸಚಿವ ಸಂಪುಟ ಒಪ್ಪಿರುವುದಿಲ್ಲ ಎಂದು ಹೇಳಿದರು. ಉಗ್ರಾಣ ನಿಗಮದ ಆರ್‌ಐಡಿಎಫ್-22 ಯೋಜನೆಯಡಿ ಕೈಗೊಂಡಿರುವ ಅಪೂರ್ಣಗೊಂಡ ಉಗ್ರಾಣಗಳ ನಿರ್ಮಾಣ ಹಾಗೂ ಅವಶ್ಯವಿರುವ ಮೂಲಸೌಕರ್ಯ ಕಾಮಗಾರಿಗಳನ್ನು ಪೂರ್ಣಗೊಳಿಸಲು 376.54 ಕೋಟಿ ರೂ.ಗಳನ್ನು ಬಿಡುಗಡೆಗೊಳಿಸಲು ಅನುಮೋದನೆ ನೀಡಲಾಗಿದೆ.

ಐ.ಎ.ಎಸ್ ಅಧಿಕಾರಿಗಳು ಸೇರಿದಂತೆ ಈ ಪ್ರಕರಣದಲ್ಲಿ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆ ಹೂಡಲು ಹಾಗೂ ವಿಳಂಬಕ್ಕೆ ಕಾರಣರಾದ ಸಹಕಾರ ಇಲಾಖೆಯ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ನಿರ್ಧರಿಸಿದೆ. ನಿಮ್ಹಾನ್ಸ್ ಸಹಯೋಗದೊಂದಿಗೆ ಮೆದುಳಿನ ಆರೋಗ್ಯ, ಆರೈಕೆ ಸೇವೆಗಳನ್ನು ಉತ್ತೇಜಿಸಲು ರಾಜ್ಯದ 3 ಜಿಲ್ಲೆಗಳಲ್ಲಿ ಬ್ರೈನ್ ಹೆಲ್ತ್ ಇನಿಶಿಯೇಟಿವ್ ಎಂಬ ವಿಶಿಷ್ಟವಾದ ಯೋಜನೆಯನ್ನು ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಹೀನತೆಮುಕ್ತ (ಅನಿಮಿಯಾ ಮುಕ್ತ) ಪೌಷ್ಠಿಕ ಕರ್ನಾಟಕ ಯೋಜನೆಯನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡಿದೆ. ರಕ್ತಹೀನತೆಯು ಮಕ್ಕಳ ಬೆಳವಣಿಗೆಯಲ್ಲಿ ಕುಂಠಿತಗೊಳಿಸುತ್ತದೆ. ಅನಾರೋಗ್ಯದ ಸಾಧ್ಯತೆ ಹೆಚ್ಚುತ್ತದೆ ಮತ್ತು ವಯಸ್ಕರಲ್ಲಿ ಕೆಲಸ ಸಾಮರ್ಥ್ಯ, ಉತ್ಪಾದಕತೆ, ಅಂಗವೈಕಲ್ಯ ಹೊಂದಾಣಿಕೆ ಜೀವನ ವರ್ಷವನ್ನು ಕಡಿಮೆ ಮಾಡುತ್ತದೆ. ರಕ್ತಹೀನತೆ ಮತ್ತು ಅಪೌಷ್ಠಿಕತೆಗಾಗಿ ಸಾಮೂಹಿಕ ತಪಾಸಣೆ. ಟ್ರ್ಯಾಕಿಂಗ್ ಮತ್ತು ಮೊನಿಟರಿಂಗ್ ಬಲಪಡಿಸುವುದು. ಪೂರಕವಾಗಿ ಕಬ್ಬಿಣಾಂಶ ಫೋಲಿಕ್ ಆಮ್ಲ ನೀಡುವಿಕೆ ಮತ್ತು ಜಂತು ಹುಳುವಿನ ನಿವಾರಣೆ. ರಾಜ್ಯದ 102 ಮಹಾತ್ವಾಕಾಂಕ್ಷೆಯ ತಾಲ್ಲೂಕುಗಳಲ್ಲಿ ಗರ್ಭಿಣಿ ಮಹಿಳೆಯರು ಮತ್ತು ಬಾಣಂತಿಯರಿಗೆ ಪೌಷ್ಠಿಕ ಊಟ ಒದಗಿಸಲಾಗುವುದು. 121.90 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಬಳ್ಳಾರಿ ನಗರದ ಪಾರ್ವತಿ ನಗರ ಬಡಾವಣೆಯಲ್ಲಿ ನ್ಯಾಯಾಲಯ ಸಂಕೀರ್ಣ ನಿರ್ಮಾಣಕ್ಕೆ ಪರಿಷ್ಕೃತ ಅಂದಾಜಿಗೆ ಅನುಮೋದನೆ ದೊರೆತಿದೆ ಎಂದು ಅವರು ತಿಳಿಸಿದರು. ಬೆಂಗಳೂರು, ಮೈಸೂರು, ಹುಬ್ಬಳ್ಳಿ-ಧಾರವಾಡ ಮುಂತಾದ ಹೆಚ್ಚಿನ ಮೌಲ್ಯವಿರುವ ನಗರ ಪ್ರದೇಶಗಳಲ್ಲಿರುವ ಜಮೀನುಗಳನ್ನು ಗ್ರಾಮೀಣ ಪದೇಶದಲ್ಲಿಯ ಜಮೀನಿಗಿಂತ ವಿಭಿನ್ನವಾಗಿ ಪರಿಗಣಿಸಬೇಕಾಗುತ್ತದೆ. ಪ್ರತಿಯೊಂದು ಯೋಜನೆ/ಸನ್ನಿವೇಶ ಇತರೆ ಯೋಜನೆಗಿಂತ ಭಿನ್ನವಾಗಿರುವುದರಿಂದ ಒಂದು ನೇರ ಸಾಮಾನ್ಯ ನೀತಿ ರೂಪಿಸುವುದು ತುಂಬಾ ಕಷ್ಟಕರ ಎಂದು ಅಭಿಪ್ರಾಯ ಪಡಲಾಯಿತು. ಒಂದು ಸಾಮಾನ್ಯ ನೀತಿಯು ಕರ್ನಾಟಕ ಗೃಹ ಮಂಡಳಿಯ ಸಮರ್ಥನಿಯವಾಗುವುದಿಲ್ಲ. ಯೋಜನೆಗಳಿಗೆ ಮುಂಬರುವ ಯೋಜನೆಗಳಿಗೆ ಕರ್ನಾಟಕ ಗೃಹ ಮಂಡಳಿಯ ಸದಸ್ಯರ ಸಲಹೆ ಪಡೆದು ಎಲ್ಲಾ ವಸತಿ ಯೋಜನೆಗಳಿಗೆ ಪ್ರಕರಣವಾರು ನಿರ್ಣಯಿಸಲು ಸಚಿವ ಸಂಪುಟ ಅನುಮೋದಿಸಿದೆ ಎಂದರು.

ನೆಲಸಮಗೊಳಿಸಿ, ಹೊಸ ಕಟ್ಟಡ ನಿರ್ಮಿಸಿ

ಕೂಡ ಪೂರ್ಣ ವಾಗಿ ನೆಲಸಮಗೊಳಿಸಬೇಕು. ತರುವಾಯ ಅದೇ ಮಾದಿರಯಲ್ಲಿ ಪಾರಂಪರಿಕ ಶೈಲಿ ಯಲ್ಲಿ ದೇವರಾಜ ಮಾರುಕಟ್ಟೆಯನ್ನು ಹೊಸದಾಗಿ ನಿರ್ಮಾಣ ಮಾಡಬೇಕು ಎಂದು ಬಿ.ಕೆ.ಪ್ರಕಾಶ್ ಸರ್ಕಾರವನ್ನು ಆಗ್ರಹಿಸಿದರು. ದೇವರಾಜ ಮಾರಕಟ್ಟೆ ಹಾಗೂ ಲ್ಯಾನ್ಸ್‌ಡೌನ್ ಬಿಲ್ಡಿಂಗ್‌ನಲ್ಲಿರುವ ಬಾಡಿಗೆದಾರರಿಗೆ ಅಲ್ಲೇ ಅಂಗಡಿಗಳನ್ನು ನೀಡಬೇಕು. ಎರಡು ಕಟ್ಟಡ ನೆಲಸಮ ಗೊಳಿಸಿ ಅದೇ ಸ್ಥಳದಲ್ಲಿ ಹೊಸ ಪಾರಂಪರಿಕ ಶೈಲಿ ಕಟ್ಟಡ ನಿರ್ಮಾಣ ಮಾಡಲು ಏನೇನು ಸಮಸ್ಯೆಗಳಿವೆಯೋ

ಅದನ್ನು ಕೂಡಲೇ ಪರಿಹಾರ ಮಾಡಬೇಕು ಎಂದು ಸರ್ಕಾರದ ಮೇಲೆ ಒತ್ತಡ ಹೇರಿದರು. ಮೈಸೂರಿನ ಒಳ ಚರಂಡಿ ನೀರು, ತ್ಯಾಜ್ಯ ನೀರು ಸಂಸ್ಕರಣ ಘಟಕಕ್ಕೆ ಸೇರುತ್ತಿಲ್ಲ. ಅದರ ಬದಲು ಬೇರೆ ಕಡೆ ಹರಿದು ನದಿ ಪಾತ್ರ ಸೇರುತ್ತಿದೆ. ಇದರಿಂದ ನದಿ ನೀರು ಮಲೀನವಾಗುತ್ತಿದೆ. ಈ ನಿಟ್ಟಿನಲ್ಲಿ ಎಲ್ಲಾ ರೀತಿಯ ತ್ಯಾಜ್ಯ ನೀರು ತ್ಯಾಜ್ಯ ಸಂಸ್ಕರಣ ಘಟಕಕ್ಕೆ ಸೇರುವ ಹಾಗೆ ಯೋಜನೆ ರೂಪಿಸಬೇಕು ಎಂದು ಒತ್ತಾಯಿಸಿದರು.

ಮೈಸೂರಿನಲ್ಲಿ ವಾಹನಗಳನ್ನು ನಿಲುಗಡೆ ಮಾಡಲು ಸೂಕ್ತ ಸ್ಥಳವಿಲ್ಲ. ಇದರಿಂದ ವಾಹನ ಸಂಚಾರಕ್ಕೆ ತೊಂದರೆ ಆಗುತ್ತಿದ್ದು, ಶಿಸ್ತು ಬದ್ಧವಾದ ವಾಹನ ಸಂಚಾರ ವ್ಯವಸ್ಥೆ ಇಲ್ಲ. ಆದ ಕಾರಣ ವಾಹನ ನಿಲ್ದಾಣ ನಿರ್ಮಾಣ ಮಾಡುವ ಯೋಜನೆ ಕೂಡ ಕೈಗೆತ್ತಿಕೊಳ್ಳಬೇಕು ಎಂದು ಬಿ.ಕೆ.ಪ್ರಕಾಶ್ ಹೇಳಿದರು.

ಎಲ್ಲಾ ವಿಚಾರಗಳ ಸಂಬಂಧ ಶೀಘ್ರದಲ್ಲೇ ಮೈಸೂರಿನ ಶಾಸಕರ ಜೊತೆ ಸಮಾಲೋಚನೆ ನಡೆಸಲಾಗುವುದು. ತರುವಾಯ ಈ ಯೋಜನೆಗಳನ್ನು ಅನುಷ್ಠಾನ ಮಾಡುವ ಸಂಬಂಧ ಸರ್ಕಾರದ ಮೇಲೆ ಒತ್ತಡ ಹೇರಲು ಶಾಸಕರೊಡನೆ ಮಾಜಿ ಮೇಯರ್‌ಗಳ ನಿಯೋಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಗುವುದು ಎಂದು ಬಿ.ಕೆ.ಪ್ರಕಾಶ್ ತಿಳಿಸಿದರು. ಸಿದ್ದರಾಮಯ್ಯ ಈ ಹಿಂದೆ ಮುಖ್ಯಮಂತ್ರಿ ಆಗಿದ್ದ ಐದು ವರ್ಷದ ಅವಧಿಯಲ್ಲಿ ಮೈಸೂರು ನಗರದ ಅಭಿವೃದ್ಧಿಗೆ 4 ಸಾವಿರ ಕೋಟಿ ರೂಪಾಯಿ ನೀಡಿದ್ದಾರೆ. ಈಗಲೂ ಈ ಎಲ್ಲಾ ಯೋಜನೆ ಸಾಕಾರಗೊಳ್ಳಲು ನಮ್ಮ ನಿಯೋಗಕ್ಕೆ ಅವರು ಸಕರಾತ್ಮಕವಾಗಿ ಸ್ಪಂದಿಸುತ್ತಾರೆ ಎಂಬ ವಿಶ್ವಾಸವಿದೆ ಎಂದು ಬಿ.ಕೆ.ಪ್ರಕಾಶ್ ಹೇಳಿದರು.

ಮಾಜಿ ಮೇಯರ್‌ಗಳಾದ ಆರ್.ಅನಂತು, ಮೋದಾಮಣಿ, ಟಿ.ಬಿ.ಚಿಕ್ಕಣ್ಣ, ಕಾಂಗ್ರೆಸ್ ಮುಖಂಡರಾದ ಭಾಸ್ಕರ್, ತಿವಾರಿ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.



ವಿಶ್ವಕಪ್ ಮಹಾಸಮರ 2023

ಉದ್ಘಾಟನಾ ಪಂದ್ಯದಲ್ಲಿ ಕಿವೀಸ್ ಶುಭಾರಂಭ

● ಹಾಲಿ ಚಾಂಪಿಯನ್ ಇಂಗ್ಲೆಂಡ್‌ಗೆ ಮುಖಭಂಗ ● ಡೆವೋನ್ ಕಾನ್ವೇ, ರಚಿನ್ ರವೀಂದ್ರ ಭರ್ಜರಿ ಶತಕ



ಅಹಮದಾಬಾದ್, ಅ.5- ಕಳೆದೆರಡು ಫೈನಲ್‌ಗಳಲ್ಲಿ ಸೋತು ಹೊಸ ಭರವಸೆಯೊಂದಿಗೆ 13ನೇ ವಿಶ್ವಕಪ್ ಅಭಿಯಾನ ಆರಂಭಿಸಿರುವ ನ್ಯೂಜಿಲ್ಯಾಂಡ್ ಡೆವೋನ್ ಕಾನ್ವೆ ಹಾಗೂ ರಚಿನ್ ರವೀಂದ್ರ ಅವರ ಭರ್ಜರಿ ಶತಕಗಳ ಜೊತೆಯಾಟದಿಂದ 2023ರ ವಿಶ್ವಕಪ್ ಉದ್ಘಾಟನಾ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಇಂಗ್ಲೆಂಡ್ ವಿರುದ್ಧ 9 ವಿಕೆಟ್‌ಗಳ ಜಯ ಸಾಧಿಸಿ ಟೂರ್ನಿಯಲ್ಲಿ ಶುಭಾರಂಭ ಮಾಡಿದೆ.

ಗುರುವಾರ ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ವಿಶ್ವಕಪ್ ಉದ್ಘಾಟನಾ ಪಂದ್ಯಕ್ಕೆ ಪ್ರೇಕ್ಷಕರಿಂದ ನೀರಸ ಪ್ರತಿಕ್ರಿಯೆ ವ್ಯಕ್ತವಾಯಿತು. ಬಹುತೇಕ ಖಾಲಿ ಸ್ಟೇಡಿಯಂನಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ವಿಶ್ವ ಚಾಂಪಿಯನ್ ಇಂಗ್ಲೆಂಡ್ ತನ್ನ ಬ್ಯಾಟಿಂಗ್ ಶಕ್ತಿಗೆ ತಕ್ಕುದಾದ ನಿರ್ವಹಣೆ ತೋರಲಿಲ್ಲ.

ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಮಲಾನ್ ಕೇವಲ 14 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ಜಾನಿ ಬೈರ್‌ಸ್ಟೋವ್ 33 ರನ್ ಗಳಿಸಿದರು. ನಂತರ ಬಂದ ಜೋ ರೂಟ್ 86 ಎಸೆತಗಳಲ್ಲಿ 77 ರನ್ ಗಳಿಸಿ ವೈಯಕ್ತಿಕ ಗರಿಷ್ಠ ಸ್ಕೋರರ್ ಎನಿಸಿಕೊಂಡರು. ಜೋಸ್ ಬಟ್ಲರ್ 43 ರನ್ ಗಳಿಸಿದರಾದರೂ ದೊಡ್ಡ ಮೊತ್ತ ಕಲೆ ಹಾಕುವಲ್ಲಿ ವಿಫಲರಾದರು. ಉಳಿದಂತೆ ಮೊಯೀನ್ ಅಲಿ 11, ಹ್ಯಾರಿ ಬ್ರೂಕ್ 25, ಲಿಯಾಮ್ ಲಿವಿಂಗ್‌ಸ್ಟೋನ್ 20, ಸ್ಯಾಮ್ ಕರ‍್ರನ್ 14, ಆದೀಲ್ ರಶೀದ್ 15, ಮಾರ್ಕ್ ವುಡ್ 13, ಕ್ರಿಸ್ ವೋಕ್ಸ್ 11 ರನ್ ಗಳಿಸಿದರು. ಅಂತಿಮವಾಗಿ ಇಂಗ್ಲೆಂಡ್ ನಿಗದಿತ 50 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 282 ರನ್ ಗಳಿಸಿತು. ನ್ಯೂಜಿಲೆಂಡ್ ಪರ ಮ್ಯಾಟ್ ಹೆನ್ರಿ 3, ಗ್ಲೆನ್ ಫಿಲಿಪ್ಸ್ ಹಾಗೂ ಮಿಚೆಲ್ ಸ್ಯಾಂಟ್ನರ್ ತಲಾ 2, ಬೋಲ್ಟ್, ರಚಿನ್ ರವೀಂದ್ರ ತಲಾ ಒಂದೊಂದು ವಿಕೆಟ್ ಉರುಳಿಸಿದರು.

ಇಂಗ್ಲೆಂಡ್ ನೀಡಿದ 283 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ನ್ಯೂಜಿಲೆಂಡ್ ತಂಡದ ಮೊತ್ತ 10 ರನ್ ಆಗುವಷ್ಟರಲ್ಲೇ ವಿಲ್ ಯಂಗ್ ಶೂನ್ಯಕ್ಕೆ ಸ್ಯಾಮ್ ಕರ‍್ರನ್‌ಗೆ ವಿಕೆಟ್ ಒಪ್ಪಿಸಿದರು. ಈ ವೇಳೆ ಮೂರನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ರಚಿನ್ ರವೀಂದ್ರ ಎದುರಿಸಿದ ಮೊದಲನೇ ಎಸೆತದಿಂದಲೇ ಆಕ್ರಮಣಕಾರಿ ಬ್ಯಾಟಿಂಗ್ ಪ್ರದರ್ಶನ ತೋರಿದರು. ಮತ್ತೊಂದು ತುದಿಯಲ್ಲಿ ಡೆವೋನ್ ಕಾನ್ವೇ ಕೂಡ ಅಬ್ಬರಿಸಿದರು. ಈ ಜೋಡಿ ಮುರಿಯದ 2ನೇ ವಿಕೆಟ್‌ಗೆ 211 ಎಸೆತಗಳಲ್ಲಿ 273 ರನ್‌ಗಳನ್ನು ದಾಖಲಿಸಿತು. ಸ್ಫೋಟಕ ಬ್ಯಾಟಿಂಗ್ ಪ್ರದರ್ಶನ ತೋರಿದ ರಚಿನ್ ರವೀಂದ್ರ 96 ಎಸೆತಗಳಲ್ಲಿ 5 ಭರ್ಜರಿ ಸಿಕ್ಸರ್ ಹಾಗೂ 11 ಬೌಂಡರಿಗಳೊಂದಿಗೆ ಅಜೇಯ 123 ರನ್‌ಗಳನ್ನು ಸಿಡಿಸಿದರು. ಆ ಮೂಲಕ ಏಕದಿನ ಕ್ರಿಕೆಟ್‌ನಲ್ಲಿ ಚೊಚ್ಚಲ ಶತಕ ಬಾರಿಸಿದರು. ಮತ್ತೊಂದು ತುದಿಯಲ್ಲಿ ಇವರಿಗೆ ಸಾಥ್ ನೀಡಿದ ಡೆವೋನ್ ಕಾನ್ವೇ 121 ಎಸೆತಗಳಲ್ಲಿ 3 ಸಿಕ್ಸರ್ ಹಾಗೂ 19 ಬೌಂಡರಿಗಳೊಂದಿಗೆ ಅಜೇಯ 152 ರನ್‌ಗಳನ್ನು ಸಿಡಿಸಿ ನ್ಯೂಜಿಲೆಂಡ್ ತಂಡದ ಗೆಲುವಿನಲ್ಲಿ ಮಹತ್ತರ ಪಾತ್ರ ವಹಿಸಿದರು.

ಅಂತಿಮವಾಗಿ ನ್ಯೂಜಿಲ್ಯಾಂಡ್ 36.1 ಓವರ್‌ಗಳಲ್ಲಿ 1 ವಿಕೆಟ್ ನಷ್ಟಕ್ಕೆ 283 ರನ್ ಗಳಿಸಿ 9 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿತು. ಇಂಗ್ಲೆಂಡ್ ಪರ ಸ್ಯಾಮ್ ಕರ‍್ರನ್ 1 ವಿಕೆಟ್ ಪಡೆದರು. ಪಂದ್ಯದಲ್ಲಿ ಅದ್ಭುತ ಪ್ರದರ್ಶನ ನೀಡಿದ ರಚಿನ್ ರವೀಂದ್ರ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ರಚಿನ್ ರವೀಂದ್ರ ಬೆಂಗಳೂರು ಮೂಲದವರು

ಐಸಿಸಿ ವಿಶ್ವಕಪ್ ಪಂದ್ಯಾವಳಿಯ ಉದ್ಘಾಟನಾ ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ ಚೊಚ್ಚಲ ಶತಕ ಸಿಡಿಸಿದ ನ್ಯೂಜಿಲೆಂಡ್ ತಂಡದ ರಚಿನ್ ರವೀಂದ್ರ ನ್ಯೂಜಿಲೆಂಡ್‌ನ ವೆಲ್ಲಿಂಗ್ಟನ್‌ನಲ್ಲಿ ಜನಿಸಿದ್ದರೂ ಇವರ ಅಪ್ಪ-ಅಮ್ಮ ಬೆಂಗಳೂರು ಮೂಲದವರು. ತಂದೆ ರವಿ ಕೃಷ್ಣಮೂರ್ತಿ ಹಾಗೂ ತಾಯಿ ದೀಪಾ ಕೃಷ್ಣಮೂರ್ತಿ ಅವರು ಸಾಫ್ಟ್‌ವೇರ್ ಇಂಜಿನಿಯರ್‌ಗಳಾಗಿದ್ದು, ಉದ್ಯೋಗ ಅರಸಿ 1990ರ ದಶಕದಲ್ಲಿ ಬೆಂಗಳೂರಿನಿಂದ ನ್ಯೂಜಿಲೆಂಡ್‌ಗೆ ತೆರಳಿದ್ದರು. ರಚಿನ್ ರವೀಂದ್ರ ಅವರ ತಂದೆ, ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದರೂ ಅವರು ಅಪ್ಪಟ ಕ್ರಿಕೆಟ್ ಅಭಿಮಾನಿ.

ರಚಿನ್ ರವೀಂದ್ರ ಹೆಸರಿನಲ್ಲಿ ಸಚಿನ್-ದ್ರಾವಿಡ್ ಹೆಸರು: ತಂದೆ ರವಿ ಕೃಷ್ಣಮೂರ್ತಿ ಅವರು ಭಾರತೀಯ ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಹಾಗೂ ರಾಹುಲ್ ದ್ರಾವಿಡ್ ಅವರ ದೊಡ್ಡ ಅಭಿಮಾನಿ. ಈ ಕಾರಣದಿಂದಾಗಿ ರಾಹುಲ್ ದ್ರಾವಿಡ್ ಹೆಸರಿನಿಂದ 'ರ' ಮತ್ತು ಸಚಿನ್ ತೆಂಡೂಲ್ಕರ್ ಹೆಸರಿನಿಂದ 'ಚಿನ್' ಅಕ್ಷರಗಳನ್ನು ತೆಗೆದುಕೊಂಡು ತಮ್ಮ ಪುತ್ರನಿಗೆ ರಚಿನ್ ಎಂದು ಹೆಸರಿಟ್ಟಿದ್ದರು.

ಸೆನ್ಸಾರ್ ಮಂಡಳಿ ವಿರುದ್ಧ ನಟ ವಿಶಾಲ್ ಲಂಚ ಆರೋಪ

ತನಿಖೆ ಕೈಗೆತ್ತಿಕೊಂಡ ಸಿಬಿಐ

ನವದೆಹಲಿ, ಅ.5- ನಟ ವಿಶಾಲ್ ಅಭಿನಯದ ಮಾರ್ಕ್ ಆಂಟನಿ ಚಿತ್ರಕ್ಕೆ ಪ್ರಮಾಣಪತ್ರ ಪಡೆಯಲು 6.5 ಲಕ್ಷ ರೂಪಾಯಿ ಪಾವತಿಸಿದ್ದಾರೆ ಎಂಬ ಆರೋಪದ ಮೇಲೆ ಸಿಬಿಐ ಮೂವರು ವ್ಯಕ್ತಿಗಳು ಮತ್ತು ಸೆಂಟ್ರಲ್ ಬೋರ್ಡ್ ಆಫ್ ಫಿಲ್ಮ್ ಸರ್ಟಿಫಿಕೇಶನ್ (CBFC) ನ ಅಧಿಕಾರಿಗಳ ವಿರುದ್ಧ ಗುರುವಾರ ಎಫ್‌ಐಆರ್ ದಾಖಲಿಸಿದೆ.



ಎಫ್‌ಐಆರ್‌ನಲ್ಲಿ ದಾಖಲಿಸಿರುವ ಹೆಸರಿನ ಆರೋಪಿಗಳ ಮನೆ ಸೇರಿದಂತೆ ಮುಂಬೈನ ನಾಲ್ಕು ಸ್ಥಳಗಳಲ್ಲಿ ಶೋಧ ನಡೆಸಲಾಯಿತು. ಮೆರ್ಲಿನ್ ಮೆನಗಾ, ಜೀಜಾ ರಾಮದಾಸ್, ರಾಜನ್ ಎಂ ಮತ್ತು ಸಿಬಿಎಫ್‌ಸಿಯ ಅಪರಿಚಿತ ವ್ಯಕ್ತಿಗಳ ವಿರುದ್ಧ ಕೇಂದ್ರೀಯ ತನಿಖಾ ದಳ (ಸಿಬಿಐ) ಎಫ್‌ಐಆರ್ ದಾಖಲಿಸಿದೆ.


ಮಾರ್ಕ್ ಆ್ಯಂಟನಿ ಸಿನಿಮಾದ ಹಿಂದಿ ಡಬ್ಬಿಂಗ್ ಬಿಡುಗಡೆಗೂ ಮುನ್ನ ಸೆಂಟ್ರಲ್ ಬೋರ್ಡ್ ಆಫ್ ಫಿಲ್ಮ್ ಸರ್ಟಿಫಿಕೇಷನ್ ನಿಂದ ಸೆನ್ಸಾರ್ ಪ್ರಮಾಣ ಪತ್ರ ಪಡೆಯಲು ಖಾಸಗಿ ವ್ಯಕ್ತಿಯೊಬ್ಬರು 7 ಲಕ್ಷಕ್ಕೆ ಲಂಚದ ಬೇಡಿಕೆ ಇಟ್ಟಿರುವುದು ನಿಜ ಎಂದು ಸಿಬಿಐ ವಕ್ತಾರರೊಬ್ಬರು ತಿಳಿಸಿದ್ದಾರೆ.

ಆರೋಪಿಗಳು ಆರಂಭದಲ್ಲಿ ಸಿಬಿಎಫ್‌ಸಿ-ಮುಂಬೈ ಅಧಿಕಾರಿಗಳ ಪರವಾಗಿ ಲಂಚಕ್ಕೆ ಬೇಡಿಕೆಯಿಟ್ಟಿದ್ದರು, ಮಾತುಕತೆಯ ನಂತರ ಮೊತ್ತವನ್ನು 6.54 ಲಕ್ಷಕ್ಕೆ ಇಳಿಸಲಾಗಿದೆ ಎಂದು ಅವರು ಹೇಳಿದರು.

ಇಬ್ಬರು ಆರೋಪಿಗಳ ಎರಡು ಬ್ಯಾಂಕ್ ಖಾತೆಗಳಲ್ಲಿ ಸಿಬಿಎಫ್‌ಸಿ ಮುಂಬೈ ಅಧಿಕಾರಿಗಳ ಪರವಾಗಿ 6,54,000 ರೂ.ಗಳನ್ನು ಲಂಚವಾಗಿ ಸ್ವೀಕರಿಸಿದ್ದಾರೆ ಎಂದು ಆರೋಪಿಸಲಾಗಿದೆ. ನಂತರ, 26/09/2023 ರಂದು, CBFC, ಮುಂಬೈನಿಂದ ಅಗತ್ಯವಿರುವ ಪ್ರಮಾಣಪತ್ರವನ್ನು ನೀಡಲಾಯಿತು ಎಂದು ಹೇಳಲಾಗಿದೆ.

ಚಂದ್ರಬಾಬು ನಾಯ್ಡು ಬೆಂಬಲಿಸಲು ಎನ್‌ಡಿಎ ತೊರೆದ ಪವನ್ ಕಲ್ಯಾಣ್!

ಪೆಡನಾ, ಅ.5- ಕಷ್ಟದ ಸಮಯದಲ್ಲಿ ಟಿಡಿಪಿಯನ್ನು ಬೆಂಬಲಿಸಲು ಬಿಜೆಪಿ ನೇತೃತ್ವದ ಎನ್‌ಡಿಎಯಿಂದ ಹೊರಬಂದಿರುವುದಾಗಿ ನಟ ಮತ್ತು ರಾಜಕಾರಣಿ ಪವನ್ ಕಲ್ಯಾಣ್ ಗುರುವಾರ ಹೇಳಿದ್ದಾರೆ. ಆಂಧ್ರ ಪ್ರದೇಶದ ಉತ್ತಮ ಆಡಳಿತ ಮತ್ತು ಅಭಿವೃದ್ಧಿಗೆ ಜನಸೇನಾ ಟಿಡಿಪಿ ಅಗತ್ಯವಿದೆ ಎಂದಿದ್ದಾರೆ.



ಕೃಷ್ಣಾ ಜಿಲ್ಲೆಯ ಪೆಡನಾದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಪವನ್ ಕಲ್ಯಾಣ್, ಟಿಡಿಪಿ ಬಲಿಷ್ಠ ಪಕ್ಷವಾಗಿದ್ದು, ಆಂಧ್ರಪ್ರದೇಶದಲ್ಲಿ ಉತ್ತಮ ಆಡಳಿತ, ಅಭಿವೃದ್ಧಿಗಾಗಿ ತೆಲುಗು ದೇಶಂ ಪಕ್ಷದ ಅಗತ್ಯವಿದೆ. ಇಂದು ಟಿಡಿಪಿ ಹೋರಾಟದಲ್ಲಿದ್ದು, ನಾವು ಅವರನ್ನು ಬೆಂಬಲಿಸುತ್ತೇವೆ. ಈ ಪರಿಸ್ಥಿತಿಯಲ್ಲಿ ಟಿಡಿಪಿಗೆ ಜನಸೇನಾಯುವ ರಕ್ತದ ಬೆಂಬಲ ಬೇಕು. ಟಿಡಿಪಿ ಮತ್ತು ಜನಸೇನೆ ಕೈಜೋಡಿಸಿದರೆ ರಾಜ್ಯದಲ್ಲಿ ವೈಎಸ್ ಆರ್‌ಸಿಪಿ ಮುಳುಗಲಿದೆ ಎಂದರು.

ಸೆಪ್ಟೆಂಬರ್ 14ರಂದು ಕೌಶಲ್ಯ ಅಭಿವೃದ್ಧಿ ಹಗರಣದಲ್ಲಿ ಚಂದ್ರ ಬಾಬು ನಾಯ್ಡು ನ್ಯಾಯಾಂಗ ಬಂಧನಕ್ಕೆ ಕಳುಹಿಸಲ್ಪಟ್ಟ ನಂತರ ರಾಜಮಂಡ್ರಿ ಕೇಂದ್ರ ಕಾರಾಗೃಹದಲ್ಲಿ ಅವರನ್ನು ಪವನ್ ಕಲ್ಯಾಣ್ ಭೇಟಿ ಮಾಡಿದ್ದರು. ಜುಲೈ 18ರಂದು ದೆಹಲಿಯಲ್ಲಿ ನಡೆದ ಎನ್‌ಡಿಎ ಸಭೆಯಲ್ಲಿ ಜನಸೇನಾ ಪಕ್ಷದ ಮುಖ್ಯಸ್ಥ ಪವನ್ ಕಲ್ಯಾಣ್ ಭಾಗವಹಿಸಿದ್ದರು. ಸಭೆಯ ನಂತರ ಮಾತನಾಡಿದ ನಟ, ರಾಜಕಾರಣಿ ತಮ್ಮ ಪಕ್ಷವು ಪಿಎಂ ಮೋದಿ ಅವರ ದೃಷ್ಟಿಕೋನವನ್ನು ಬೆಂಬಲಿಸುತ್ತದೆ ಎಂದು ಹೇಳಿದ್ದರು.

"ಇಡೀ ಸಭೆಯು ತುಂಬಾ ಚೆನ್ನಾಗಿತ್ತು ಮತ್ತು ಆತ್ಮನಿರ್ಭರ್ ಭಾರತ್, ಕೌಶಲ್ಯ ಭಾರತವನ್ನು ಚರ್ಚಿಸಿದ್ದೇವೆ ಮತ್ತು ನಮ್ಮ ಪಕ್ಷದ ಕಡೆಯಿಂದ ಪ್ರಧಾನಿ ಮೋದಿಯವರ ದೃಷ್ಟಿಕೋನವನ್ನು ಬೆಂಬಲಿಸುತ್ತೇವೆ ಎಂದು ಭರವಸೆ ನೀಡಿದ್ದೇನೆ" ಎಂದು ಪವನ್ ಕಲ್ಯಾಣ್ ಹೇಳಿದ್ದರು.

ಒಲಂಪಿಕ್ಸ್ ಆತಿಥ್ಯ ವಹಿಸಲಿರುವ ಪ್ಯಾರಿಸ್‌ನಲ್ಲಿ ತಿಗಣೆ ಕಾಟ!

ಪ್ಯಾರಿಸ್, ಅ.5- ಮುಂದಿನ ಒಲಂಪಿಕ್ಸ್ ಆತಿಥ್ಯ ವಹಿಸಲಿರುವ ಪ್ಯಾರಿಸ್‌ನಲ್ಲಿ ತಿಗಣೆ ಕಾಟ ಹೆಚ್ಚಾಗಿದೆ. ಪ್ಯಾರಿಸ್ ಹಾಗೂ ಮಾರ್ಸಿಲ್ಲೆ ಅಷ್ಟೇ ಅಲ್ಲದೇ, ನಗರದ ಬಹುತೇಕ ಕಡೆಗಳಲ್ಲಿ ತಿಗಣೆ ಕಾಟ ಹೆಚ್ಚಾಗತೊಡಗಿದ್ದು ಸ್ಥಳೀಯರಲ್ಲಿ ಆತಂಕ ಮೂಡಿಸಿದೆ.

2024ರ ಒಲಂಪಿಕ್ಸ್‌ಗೆ ಇನ್ನು 10 ತಿಂಗಳಷ್ಟೇ ಬಾಕಿ ಇದ್ದು, ರಕ್ತ ಹೀರುವ ಕೀಟಗಳ ಬಾಧೆ ಹೆಚ್ಚಾಗಿರುವುದು ಫ್ರಾನ್ಸ್‌ನ ರಾಜಧಾನಿಗೆ ತೀವ್ರ ಸಮಸ್ಯೆ ಉಂಟಾಗಿದೆ.

ಬೇಸಿಗೆಯಲ್ಲಿ, ಹೋಟೆಲ್‌ಗಳು ಮತ್ತು ರಜೆಯ ವೇಳೆ ಬಾಡಿಗೆ ಪಡೆಯುವ ಪ್ರದೇಶಗಳಲ್ಲಿ ಸಣ್ಣ ಪ್ರಮಾಣದಲ್ಲಿ ತಿಗಣೆಗಳು ಇರುವ ಬಗ್ಗೆ ವರದಿಗಳಾಗಿತ್ತು. ಆದರೆ ಇತ್ತೀಚೆಗೆ ಇವು ಸಿನೆಮಾ ಥಿಯೇಟರ್‌ಗಳಲ್ಲಿಯೂ ಕಾಣಿಸಿಕೊಂಡಿದ್ದು, ರಾಷ್ಟ್ರೀಯ ಹೈಸ್ಪೀಡ್ ರೈಲುಗಳು ಮತ್ತು ಪ್ಯಾರಿಸ್ ಮೆಟ್ರೋ ವ್ಯವಸ್ಥೆಯ ಆಸನಗಳ ಮೇಲೆ ಈ ಕೀಟಗಳು ತೆವಳುತ್ತಿರುವುದು ಆತಂಕ ಹೆಚ್ಚಿಸಿದೆ ಎಂದು ಸಿಬಿಎಸ್ ನ್ಯೂಸ್ ತಿಳಿಸಿದೆ.

ಪ್ಯಾರಿಸ್‌ನಲ್ಲಿ ಕೀಟಗಳನ್ನು ನಿಯಂತ್ರಿಸುವ ಸಂಸ್ಥೆಗಳ ಪ್ರಕಾರ ಇತ್ತೀಚೆಗೆ ತಿಗಣೆಗಳ ಕಾಟ ಮಿತಿಮೀರಿದೆ. ಬೇಸಿಗೆಯ ಒಲಿಂಪಿಕ್ ಮತ್ತು ಪ್ಯಾರಾಲಿಂಪಿಕ್ ಕ್ರೀಡಾಕೂಟಗಳಿಗೆ ಭೇಟಿ ನೀಡುವವರಿಗೆ ಸಂಭವನೀಯ ಅಪಾಯವು ವಿಶೇಷವಾಗಿ ಪ್ಯಾರಿಸ್ ಸಿಟಿ ಹಾಲ್‌ಗೆ ಸಂಬಂಧಿಸಿದೆ. ತಿಗಣೆಗಳು ಸಾರ್ವಜನಿಕ ಆರೋಗ್ಯದ ವಿಷಯವಾಗಿದ್ದು, ಅದನ್ನು ಹಾಗೆಂಯೇ ಘೋಷಿಸಬೇಕು ಎಂದು ಪ್ಯಾರಿಸ್‌ನ ಉಪ ಮೇಯರ್ ಇಮ್ಯಾನುಯೆಲ್ ಗ್ರೆಗೊಯಿರ್ ಅವರು ಪ್ರಧಾನಿ ಎಲಿಸಬೆತ್ ಬೋರ್ನ್ ಅವರಿಗೆ ಪತ್ರ ಬರೆದಿದ್ದಾರೆ. ರಾಷ್ಟ್ರಮಟ್ಟದಲ್ಲಿ ಸಮಸ್ಯೆಯನ್ನು ಪರಿಹರಿಸಲು ಕ್ರಿಯಾ ಯೋಜನೆಯನ್ನು ರೂಪಿಸಲು ಅವರು ಸರ್ಕಾರಕ್ಕೆ ಕರೆ ನೀಡಿದ್ದಾರೆ ಎಂದು ಸಿಬಿಎಸ್ ನ್ಯೂಸ್ ವರದಿ ಪ್ರಕಟಿಸಿದೆ.

ಮೈಸೂರಿನ ಮಾಜಿ ಮೇಯರ್‌ಗಳ ಬೇಸರ
ಶಾಮನೂರು ಶಿವಶಂಕರಪ್ಪ ಆರೋಪದಿಂದ ಕಾಂಗ್ರೆಸ್‌ಗೆ ಮುಜುಗರ

ಮೈಸೂರು, ಅ.5(ಬಿಎಲ್‌ಯು)- ರಾಜ್ಯ ಕಾಂಗ್ರೆಸ್ ಸರ್ಕಾರದಲ್ಲಿ ಲಿಂಗಾಯಿತರನ್ನು ಕಡೆಗಣಿಸಲಾಗಿದೆ ಎಂಬ ಹಿರಿಯ ಕಾಂಗ್ರೆಸ್ ಮುಖಂಡ ಶಾಮನೂರು ಶಿವಶಂಕರಪ್ಪ ಆರೋಪದಿಂದ ಕಾಂಗ್ರೆಸ್ ಪಕ್ಷಕ್ಕೆ ಮುಜುಗರವಾಗಿದೆ ಎಂದು ಮಾಜಿ ಮೇಯರ್ ಬಿ.ಕೆ.ಪ್ರಕಾಶ್ ಹಾಗೂ ಆರ್.ಅನಂತ ತಿಳಿಸಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಇಂದು ನಡೆದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಮನೂರು ಶಿವಶಂಕರಪ್ಪ ಅವರ ಆರೋಪ ಕಾಂಗ್ರೆಸ್ ನೀತಿ, ನಿಯಮಗಳಿಗೆ ವಿರುದ್ಧವಾಗಿದೆ. ಈ ಹಿನ್ನೆಲೆಯಲ್ಲಿ ಅವರ ವಿರುದ್ಧ ಕ್ರಮ ಕೈಗೊಳ್ಳುವುದು, ಬಿಡುವುದು ಹೈಕಮಾಂಡ್ ತೀರ್ಮಾನಕ್ಕೆ ಬಿಟ್ಟಿದೆ ಎಂದರು.

ಶಾಮನೂರು ಶಿವಶಂಕಪ್ಪ ಆರೋಪ ಬಿಜೆಪಿ ಮತ್ತು ಜೆಡಿಎಸ್‌ಗೆ ರಾಜಕೀಯ ಅಸ್ತ್ರವಾಗಿದೆ. ಈ ವಿಚಾರವನ್ನು ಎರಡು ಪಕ್ಷಗಳು ರಾಜಕೀಯವಾಗಿ ಬಳಸಿಕೊಳ್ಳುತ್ತಿವೆ. ಆದ ಕಾರಣ ಶಾಮನೂರು ಶಿವಶಂಕರಪ್ಪ ಮಾತು ಬೇಸರದ ಸಂಗತಿ ಎಂದು ಬಿ.ಕೆ.ಪ್ರಕಾಶ್ ತಿಳಿಸಿದರು.

ಶಾಮನೂರು ಶಿವಶಂಕರಪ್ಪ ಅವರ ಈ ಮಾತಿನಿಂದ ಅಧಿಕಾರಿಗಳಲ್ಲಿ ಜಾತಿ ಮನೋಭಾವ ಗಟ್ಟಿಯಾಗುತ್ತದೆ. ಇದರಿಂದ ಅಧಿಕಾರಿಗಳು ಜಾತಿಯ ಹಿತದೃಷ್ಟಿಯಿಂದ ಕೆಲಸ ಮಾಡುವ ಪರಿಸ್ಥಿತಿ ಎದುರಾಗುತ್ತದೆ. ಆದ ಕಾರಣ ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೆ ಶಾಮನೂರು ಶಿವಶಂಕರಪ್ಪ ಅವರೊಡನೆ ಖುದ್ದಾಗಿ ಮಾತನಾಡಿ ಅವರ ಅಭಿಪ್ರಾಯ ತಪ್ಪು ಎಂದು ಮನವರಿಕೆ ಮಾಡಿಕೊಡಲಿದ್ದಾರೆ ಎಂದು ಬಿ.ಕೆ.ಪ್ರಕಾಶ್ ಹೇಳಿದರು.

ಜಾತಿಯತೆಯನ್ನು ಹುಟ್ಟು ಹಾಕುವುದು ಬಹಳ ಸುಲಭ. ಆದರೆ ಜಾತಿಯತೆಯನ್ನು ದೂರ ಮಾಡುವುದು ಕಷ್ಟದ ಕೆಲಸ. ಇದನ್ನು ಶಾಮನೂರು ಶಿವಶಂಕರಪ್ಪ ಅರಿತುಕೊಳ್ಳಬೇಕಿತ್ತು. ಇವರ ಪ್ರಕಾರ ಸಮರ್ಥ ಹುದ್ದೆ ಎಂದರೆ ಹಣ ಲೂಟಿ ಮಾಡುವುದೇ? ಎಂದು ಪ್ರಶ್ನಿಸಿದರು.

ಸಿದ್ದರಾಮಯ್ಯ ಎಂದೂ ಜಾತಿಯತೆ ಮಾಡಿಲ್ಲ. ಜ್ಯಾತ್ಯಾತೀತವಾಗಿ ಸರ್ಕಾರದ ಎಲ್ಲಾ ಯೋಜನೆಗಳನ್ನು ರೂಪಿಸಿದ್ದಾರೆ. ಹಿಂದಿನ ಸರ್ಕಾರದ ಅವಧಿಯಲ್ಲಿದ್ದ ಬಹಳಷ್ಟು ಅಧಿಕಾರಿಗಳು ಅದೇ ಹುದ್ದೆಯಲ್ಲಿ ಮುಂದುವರೆದ್ದಾರೆ. ಹೀಗಿರುವಾಗ ಲಿಂಗಾಯಿತರನ್ನು ಕಡೆಗಣಿಸಲಾಗಿದೆ ಎಂದು ಆರೋಪ ಸತ್ಯಕ್ಕೆ ದೂರವಾಗಿದೆ ಎಂದು ಮಾಜಿ ಮೇಯರ್ ನರಸಿಂಹ ಐಯ್ಯಂಗಾರ್ ತಿಳಿಸಿದರು.

ಔಷಧಿಗೆಂದು ಮೆಡಿಕಲ್ ಶಾಪ್‌ಗೆ ಬಂದ ವ್ಯಕ್ತಿ ಹೃದಯಾಘಾತದಿಂದ ಸಾವು

ಮೈಸೂರು, ಅ.5- ಮೆಡಿಕಲ್ ಶಾಪ್‌ಗೆ ಔಷಧ ತೆಗೆದುಕೊಳ್ಳಲು ಬಂದ ವ್ಯಕ್ತಿಯೊಬ್ಬರು ಮೆಡಿಕಲ್ ಶಾಪ್ ಬಾಗಿಲಲ್ಲೇ ಹೃದಯಾಘಾತದಿಂದ ಮೃತಪಟ್ಟಿರುವ ಹೃದಯವಿದ್ರಾವಕ ಘಟನೆ ಮಂಗಳವಾರ ನಗರದ ಕ್ಯಾತಾಮರನಹಳ್ಳಿ ಮೆಡಿಕಲ್ ಶಾಪ್ ಬಳಿ ನಡೆದಿದೆ.

ಈ ದೃಶ್ಯ ಮೆಡಿಕಲ್ ಶಾಪ್‌ನ ಸಿಸಿಟಿವಿಯಲ್ಲಿ ಸೆರೆಯಾಗಿದೆ. ವ್ಯಕ್ತಿಯೊಬ್ಬರು ಎದೆ ಉಜ್ಜುತ್ತಾ ಮೆಡಿಕಲ್ ಶಾಪ್‌ಗೆ ಬಂದು, ಔಷಧ ಕೇಳುತ್ತಿರುವುದು. ಶಾಪ್ ಎದುರು ನಿಂತ ಸ್ವಲ್ಪ ಹೊತ್ತಲ್ಲೇ ಕುಸಿದು ಬಿದ್ದಿರುವುದು. ಅಂಗಡಿಯವರು ಓಡಿ ಹೋಗಿ ಆರೈಕೆ ಮಾಡುತ್ತಿರುವುದು ವಿಡಿಯೋದಲ್ಲಿ ಸೆರೆಯಾಗಿದೆ.

ನಗರದ ಕ್ಯಾತಾಮರನಹಳ್ಳಿಯ ಮೆಡಿಕಲ್ ಶಾಪ್‌ಗೆ ಔಷಧ ತಗೆದುಕೊಳ್ಳಲು ಬಂದ ಜಗದೀಶ್ (38) ಹೃದಯಾಘಾತದಿಂದ ಮೆಡಿಕಲ್ ಶಾಪ್ ಕೌಂಟರ್ ಎದುರೇ ಕುಸಿದು ಬಿದ್ದು ಸಾವನ್ನಪ್ಪಿದ್ದಾರೆ. ಮನೆಯಲ್ಲಿ ಎದೆ ನೋವು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಔಷಧ ತಗೆದುಕೊಳ್ಳಲು ಮೆಡಿಕಲ್ ಶಾಪ್‌ಗೆ ತೆರಳಿದ್ದಾಗ ಈ ಘಟನೆ ನಡೆದಿದೆ. ಜಗದೀಶ್ ಅವರು ಕ್ಯಾತಾಮರನಹಳ್ಳಿಯಲ್ಲಿ ಚಿಕನ್ ಅಂಗಡಿ ಇಟ್ಟುಕೊಂಡು ಜೀವನ ನಡೆಸುತ್ತಿದ್ದಾರೆ. ಈ ಘಟನೆ ಸಂಬಂಧ ಉದಯಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಧ್ವನಿ ಇಲ್ಲದವರಿಗೆ ದನಿಯಾದ' ನಾರ್ವೆ ಲೇಖಕ ಜಾನ್ ಫಾಸ್ಸೆಗೆ ಸಾಹಿತ್ಯದ ನೊಬೆಲ್ ಪ್ರಶಸ್ತಿ

ಸ್ಟಾಕ್‌ಹೋಮ್, ಅ.5- ನಾಟಕಕಾರ, ಕಾದಂಬರಿಕಾರ ಹಾಗೂ ನಾರ್ಡಿಕ್ ಬರವಣಿಗೆಯ ಮಾಸ್ಟರ್ ಜಾನ್ ಫಾಸ್ಸೆ ಅವರಿಗೆ 2023ನೇ ಸಾಲಿನ ಸಾಹಿತ್ಯ ಕ್ಷೇತ್ರದ ನೊಬೆಲ್ ಪ್ರಶಸ್ತಿ ಲಭಿಸಿದೆ.



ಜಾನ್ ಫಾಸ್ಸೆ ಅವರ ಕಾದಂಬರಿಗಳು ಧ್ವನಿ ಇಲ್ಲದವರಿಗೆ ದನಿಯಾಗಿವೆ ಎಂದು ನೊಬೆಲ್ ಪ್ರಶಸ್ತಿ ಅಕಾಡೆಮಿ ಬಣ್ಣಿಸಿದೆ. ಫಾಸ್ಸೆ ಅವರ ಕೆಲಸವು "ಅವರ ನಾರ್ವೇಜಿಯನ್ ಹಿನ್ನೆಲೆಯ ಭಾಷೆ ಮತ್ತು ಸ್ವಭಾವದಲ್ಲಿ" ಬೇರೂರಿದೆ ಎಂದು ನೊಬೆಲ್ ಸಾಹಿತ್ಯ ಸಮಿತಿಯ ಅಧ್ಯಕ್ಷ ಆಂಡರ್ಸ್ ಓಲ್ಸನ್ ಅವರು ಹೇಳಿದ್ದಾರೆ.

ಫಾಸ್ಸೆ ಅವರ ಹಲವಾರು ನಾಟಕಗಳು, ಕಾದಂಬರಿಗಳು, ಕವನ ಸಂಕಲನಗಳು, ಪ್ರಬಂಧಗಳು, ಮಕ್ಕಳ ಪುಸ್ತಕಗಳು ಮತ್ತು ಭಾಷಾಂತರಗಳನ್ನು ಒಳಗೊಂಡ ಹಲವು ಕೃತಿಗಳನ್ನು ಗೌರವಿಸಿ ಈ ನೊಬೆಲ್ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. 64 ವರ್ಷದ ಜಾನ್ ಫಾಸ್ಸೆ ಅವರು ಎರಡು ಡಜನ್‌ಗಿಂತಲೂ ಹೆಚ್ಚು ನಾಟಕಗಳನ್ನು ಬರೆದಿದ್ದು, ನಾಲ್ಕು ದಶಕಗಳ ಕಾಲ ಕಾದಂಬರಿಗಳು, ಪ್ರಬಂಧಗಳು, ಕವನ ಸಂಕಲನಗಳು ಮತ್ತು ಮಕ್ಕಳ ಪುಸ್ತಕಗಳನ್ನು ಕೂಡ ಪ್ರಕಟಿಸಿದ್ದಾರೆ. ಇವರ ಲೇಖನ, ಬರಹಗಳು 40 ಭಾಷೆಗಳಲ್ಲೂ ಭಾಷಾಂತರಗೊಂಡಿವೆ.



ಮೈಸೂರಿನ ತೊಣಚಿಕೊಪ್ಪಲಿನಲ್ಲಿ ನೃಪತುಂಗ ಗೆಳೆಯರ ಬಳಗ ವತಿಯಿಂದ ಗಣಪತಿ ಮಹೋತ್ಸವದ ಅಂಗವಾಗಿ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ಈ ವೇಳೆ ವಿಧಾನ ಪರಿಷತ್ ಸದಸ್ಯ ಡಾ. ಡಿ ತಿಮ್ಮಯ್ಯ ಅನ್ನ ಬಡಿಸುವ ಮೂಲಕ ಚಾಲನೆ ನೀಡಿದರು. ಕೆಪಿಸಿಸಿ ಓಬಿಸಿ ರಾಜ್ಯ ಕಾರ್ಯದರ್ಶಿ ಹರೀಶ್ ಮೊಗಣ್ಣ, ಹಿರಿಯ ಸಾಹಿತ್ಯ ಎಂಜಿಆರ್ ಅರಸು, ಫೋಟೋ ರಾಜು, ಪವನ್, ಗೌತಮ್, ಸತೀಶ್, ಸಾಗರ್, ಅನಿಲ್, ಸಂಜು, ದಿನೇಶ್, ಲಿಖಿತ್ ಇನ್ನಿತರರು ಹಾಜರಿದ್ದರು.

ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮದಿಂದ ವಿವಿಧ ಯೋಜನೆಗಳಿಗೆ ಅರ್ಜಿ ಆಹ್ವಾನ

ಮೈಸೂರು, ಅ.5- ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮದಿಂದ 2023-24 ನೇ ಸಾಲಿನಲ್ಲಿ ಅನುಷ್ಠಾನಗೊಂಡಿರುವ ಶ್ರೀ ಶಹಜೀರಾಜೇ ಸಮೃದ್ಧಿ ಯೋಜನೆ (ಸ್ವಯಂ ಉದ್ಯೋಗ ನೇರ ಸಾಲ) ಶೈಕ್ಷಣಿಕ ಸಾಲ ಯೋಜನೆಗಳು, ಮರಾಠಿ ಮಿಲ್ಟ್ರಿ ಹೋಟೆಲ್ ಯೋಜನೆ, ಸ್ವಯಂ ಉದ್ಯೋಗ ನೇರ ಸಾಲ ಯೋಜನೆ, ಸ್ವಾತಂತ್ರ್ಯ ಅಮೃತ ಮಹೋತ್ಸವ ಮುನ್ನಡೆ ಯೋಜನೆ, ಸ್ವಾವಲಂಬಿ ಸಾರಥಿ ಯೋಜನೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ

ಅರ್ಜಿ ಸಲ್ಲಿಸಲು ಅ.30 ಕೊನೆಯ ದಿನಾಂಕವಾಗಿದ್ದು, ಸೇವಾ ಸಿಂಧು ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಶೈಕ್ಷಣಿಕ ಸಾಲ ಯೋಜನೆಗಳಿಗೆ ಅರ್ಜಿ ಸಲ್ಲಿಸಲು ಯಾವುದೇ ಕೊನೆಯ ದಿನಾಂಕ ಇರುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ನಿಗಮದ ಜಾಲ ತಾಣ https://kmcdc.Karnataka.govt.in ಅಥವಾ ದೂರವಾಣಿ ಸಂಖ್ಯೆ:- 0821-2341194 ಅನ್ನು ಸಂಪರ್ಕಿಸಬಹುದೆಂದು ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಮಗದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಡಾ.ಕೆ.ಕೃಷ್ಣಮೂರ್ತಿಯವರ ಕಾವ್ಯಮೀಮಾಂಸಾ ಕೃತಿಗಳ ಸಮೀಕ್ಷೆ

ಮೈಸೂರು, ಅ.5-ಶಿವಮೊಗ್ಗ ಕುವೆಂಪು ವಿಶ್ವವಿದ್ಯಾಲಯ, ಕನ್ನಡ ಭಾರತೀ ವಿಭಾಗ ಮತ್ತು ಡಾ.ಕೆ.ಕೃಷ್ಣಮೂರ್ತಿ ಶತಮಾನೋತ್ಸವ ಸಮಿತಿ ಸಹಯೋಗದಲ್ಲಿ ಇಂದು ಬೆಳಗ್ಗೆ 10 ಗಂಟೆಗೆ ಡಾ.ಕೆ. ಕೃಷ್ಣಮೂರ್ತಿಯವರ ಕನ್ನಡದಲ್ಲಿ ಕಾವ್ಯ ತತ್ತ್ವ ಹಾಗೂ ರಸೋಲ್ಲಾಸ ಕೃತಿಗಳ ಬಗ್ಗೆ ಬಹುಶ್ರುತ ವಿದ್ವಾಂಸರಾದ ಡಾ.ಹೆಚ್.ವಿ.ನಾಗರಾಜರಾವ್ ಅವರು ಕವಿರಾಜಮಾರ್ಗ ಕೃತಿಯ ಬಗ್ಗೆ ಅಷ್ಟಾವಧಾನಿಗಳು ಹಾಗೂ ವಿದ್ವಾಂಸರಾದ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಸೃಜನಶೀಲತೆ ಮತ್ತು ಪಾಂಡಿತ್ಯ ಹಾಗೂ ರುಚಿ ಕೃತಿಗಳ ಬಗ್ಗೆ ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನ ನಿರ್ದೇಶಕರಾದ ಡಾ.ಕೆ.ಲೀಲಾಪ್ರಕಾಶ್ ಉಪನ್ಯಾಸ ನೀಡಲಿದ್ದಾರೆ. ಎಸ್.ಪಿ.ಹಿರೇಮಠ ಸಭಾಂಗಣದಲ್ಲಿ ನಡೆಯಲಿರುವ ಕಾರ್ಯಕ್ರಮವನ್ನು ಕುವೆಂಪು ವಿವಿ ಪ್ರಭಾರ ಕುಲಪತಿ ಪ್ರೊ.ಎಸ್.ವೆಂಕಟೇಶ್ ಉದ್ಘಾಟಿಸಲಿದ್ದಾರೆ. ಅಧ್ಯಕ್ಷತೆಯನ್ನು ಕನ್ನಡ ಭಾರತೀಯ ನಿರ್ದೇಶಕ ಡಾ.ಶಿವಾನಂದ ಕೆಳಗಿನಮನಿ, ಮುಖ್ಯ ಅತಿಥಿಗಳಾಗಿ ಕುಲಸಚಿವರಾದ ಸ್ನೇಹಲ್ ಸುಧಾಕರ ಲೋಕಂಡೆ, ಡಾ.ಜಿ. ಪ್ರಶಾಂತ್‌ನಾಯಕ್, ಡಾ.ನೆಲ್ಲಿಕಟ್ಟೆ ಸಿದ್ದೇಶ್ ಭಾಗವಹಿಸಲಿದ್ದಾರೆ. ಡಾ.ನವೀನ್ ಮಂಡಗದ್ದೆ ನಿರೂಪಣೆ ಮಾಡುವರು. ಡಾ.ಪುರುಷೋತ್ತಮ್ ಕಾರ್ಯಕ್ರಮ ನಿರ್ವಹಿಸುವರು.

ಹಳೆ ವಿದ್ಯಾರ್ಥಿಗಳ ಸಂಘದ ಮಹಾಸಭೆ

ಮೈಸೂರು, ಅ. 5- ಮೈಸೂರು ಯುವರಾಜ ಕಾಲೇಜಿನ ಹಳೆ ವಿದ್ಯಾರ್ಥಿಗಳ ಸಂಘದ ವಾರ್ಷಿಕ ಮಹಾಸಭೆ ಅಕ್ಟೋಬರ್ 16 ರಂದು ಬೆಳಗ್ಗೆ 11 ಗಂಟೆಗೆ ಯುವರಾಜ ಕಾಲೇಜಿನ ಪ್ಲಾಟಿನಂ ಜ್ಯೂಬಿಲಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.



ಇಂದು ಫೈಟರ್ ಬಿಡುಗಡೆ

ವ್ಯವಸ್ಥೆಯ ವಿರುದ್ಧ ನಾಯಕನ ಹೋರಾಟ

ವಿನೋದ್ ಪ್ರಭಾಕರ್ ಅಭಿನಯದ ಫೈಟರ್ ಚಿತ್ರ ಇಂದಿನಿಂದ 150ಕ್ಕೂ ಹೆಚ್ಚು ಥಿಯೇಟರ್‌ಗಳಲ್ಲಿ ಬಿಡುಗಡೆಯಾಗಲಿದೆ, ಸೋಮಶೇಖರ್ ಕೊಟಿಗೇನ ಹಳ್ಳಿ ಅವರು ಅದ್ಧೂರಿ ವೆಚ್ಚದಲ್ಲಿ ನಿರ್ಮಿಸಿರುವ ಈ ಚಿತ್ರಕ್ಕೆ ನೂತನ್ ಉಮೇಶ್ ಆ್ಯಕ್ಷನ್ ಕಟ್ ಹೇಳಿದ್ದಾರೆ. ಲೇಖಾಚಂದ್ರ ಪಾವನಾಗೌಡ ನಾಯಕಿಯರಾಗಿ ನಟಿಸಿದ್ದು, ನಟಿ ನಿರೋಷಾ ತಾಯಿಯಾಗಿ ಕಾಣಿಸಿಕೊಂಡಿದ್ದಾರೆ. ನಟ ದರ್ಶನ್, ವಿನೋದ್ ಪ್ರಭಾಕರ್ ಆತ್ಮೀಯ ಗೆಳೆಯರು. ಫೈಟರ್ ಚಿತ್ರಕ್ಕೆ ವಿಶ್ ಮಾಡಿದ ದರ್ಶನ್, ಪ್ರಭಾಕರ್ ಅವರ ಮಗ ವಿನೋದ್‌ಗೆ ನಿಮ್ಮೆಲ್ಲರ ಪ್ರೋತ್ಸಾಹ ಬೇಕು, ಚಿತ್ರನೋಡಿ ಹರಸಿ ಎಂದು ಪ್ರೇಕ್ಷಕರಲ್ಲಿ ಮನವಿ ಮಾಡಿದ್ದಾರೆ.

ಫೈಟರ್ ಒಂದು ಮಾಸ್ ಎಂಟರ್‌ಟೈನರ್ ಚಿತ್ರ. ನಾಯಕ ಸಮಾಜದ ಬಗ್ಗೆ ಕಳಕಳಿ ಇರುವಂಥವನು. ಸಮಾಜದ ಒಳಿತಿಗಾಗಿ, ಒಂದು ಸೋಷಿಯಲ್ ಕಾಸ್‌ಗಾಗಿ ಆತ ಹೇಗೆಲ್ಲ ಹೋರಾಟ ಮಾಡುತ್ತಾನೆ, ಸಮಾಜದ ಕೆಲವೊಂದು ಸಮಸ್ಯೆಗಳ ವಿರುದ್ಧ ಯಾವ ರೀತಿ ಫೈಟ್ ಮಾಡುತ್ತಾನೆ ಎನ್ನುವುದೇ ಈ ಚಿತ್ರದ ಕಾನ್ಸೆಪ್ಟ್, ಕಳೆದ ವಾರ ಈ ಚಿತ್ರದ ಟ್ರೈಲರ್‌ರನ್ನು ದುನಿಯಾ ವಿಜಯ್ ಬಿಡುಗಡೆ ಮಾಡಿದರು. ಮಂತ್ರಿಮಾಲ್ ಆವರಣದಲ್ಲಿ ನಡೆದ ಸಮಾಂಭದಲ್ಲಿ ಶ್ರೀನಗರ ಕಿಟ್ಟಿ, ಧರ್ಮ ಕೀರ್ತಿರಾಜ್ ಭಾಗವಹಿಸಿದ್ದರು.

ನಂತರ ಮಾತನಾಡಿದ ವಿಜಯ್, ನಾನು ಚಿಕ್ಕವನಿದ್ದಾಗಿನಿಂದ ಪ್ರಭಾಕರ್ ಅವರ ಅಭಿಮಾನಿ. ಅವರ ಚಿತ್ರಗಳನ್ನು ನೋಡುತ್ತಲೇ ಫೈಟಿಂಗ್ ಕಲಿತೆ. ಪ್ರಭಾಕರ್ ಅವರು ಫೈಟ್ ಮಾಡುತ್ತಿದ್ದ ಸ್ಟೈಲ್‌ನ್ನು ಇದುವರೆಗೂ, ಯಾರೊಬ್ಬರೂ ಟಚ್ ಮಾಡಿಲ್ಲ ಅವರು ಎದುರು ಬಂದರೆ, ಹುಲಿಯೇ ಮೈಮೇಲೆ ಎಗರಿ ಬಂದಂತಾಗುತ್ತಿತ್ತು. ಈಗ ಅವರ ಪುತ್ರನ ಚಿತ್ರದ ಟ್ರೈಲರ್ ರಿಲೀಸ್ ಮಾಡ್ತಿರುವುದಕ್ಕೆ ಖುಷಿಯಾಗ್ತಿದೆ. ನಿರ್ಮಾಪಕರು ತುಂಬಾ ಪ್ರೀತಿಯಿಂದ ಈ ಸಿನಿಮಾ ಮಾಡಿದ್ದಾರೆ. ಖಂಡಿತ ಚಿತ್ರ ಗೆದ್ದೇ ಗೆಲ್ಲುತ್ತೆ ಎಂದು ಹೇಳಿದರು.

ನಂತರ ನಿರ್ಮಾಪಕ ಸೋಮಶೇಖರ್ ಮಾತನಾಡಿ, ರೈತರಿಗೆ ಆಗುತ್ತಿರುವ ಅನ್ಯಾಯದ ವಿರುದ್ಧ ನಾಯಕ ಹೇಗೆ ಎದ್ದು ನಿಲ್ಲುತ್ತಾನೆ ಎಂದು ಚಿತ್ರದಲ್ಲಿ ಹೇಳಿದ್ದೇವೆ. ದುನಿಯಾ ವಿಜಯ್ ಅವರು ಟ್ರೈಲರ್ ರಿಲೀಸ್ ಮಾಡಿದ್ದು ತುಂಬಾ ಖುಷಿಯಾಯ್ತು ಎಂದರು. ಸಂಗೀತ ನಿರ್ದೇಶಕ ಗುರುಕಿರಣ್ ಕೂಡ ಸಮಾರಂಭದಲ್ಲಿ ಹಾಜರಿದ್ದರು. ಫೈಟರ್ ಎಂದರೆ ಕುಸ್ತಿಪಟುವಲ್ಲ, ಸಮಾಜದ ವ್ಯವಸ್ಥೆಯ ವಿರುದ್ಧ ಹೋರಾಡುವ ಪ್ರತಿಯೊಬ್ಬ ವ್ಯಕ್ತಿಯೂ ಫೈಟರ್ ಆಗುತ್ತಾನೆ ಎಂಬ ಸಂದೇಶ ಚಿತ್ರದಲ್ಲಿದೆ. ಆಕ್ಷನ್ ಪ್ಯಾಕ್ ಜೊತೆಗೆ ಚಿತ್ರವು ಎಮೋಷನಲ್ಲಿ ಕನೆಕ್ಟ್ ಆಗುತ್ತದೆ. ನಾಯಕ ಅಷ್ಟೇ ಅಲ್ಲ, ಇಲ್ಲಿ ಬರುವ ಪ್ರತಿಯೊಂದು ಪಾತ್ರಗಳೂ ಫೈಟ್ ಮಾಡ್ತಾ ಹೋಗುತ್ತವೆ. ಚಿತ್ರದಲ್ಲೊಂದು ಎಮೋಷನಲ್ ಬಾಂಡೇಜ್ ಇದೆ, ಕರೆಂಟ್ ಇಷ್ಯೂಗಳನ್ನಿಟ್ಟುಕೊಂಡು ಈ ಸಿನಿಮಾ ಮಾಡಿದ್ದೇವೆ ಎಂದು ನಿರ್ದೇಶಕ ನೂತನ್ ಉಮೇಶ್ ಹೇಳಿದರು. ಬೆಂಗಳೂರು, ಚಿತ್ರದುರ್ಗ ಹಾಗೂ ಪಾಂಡಿಚೇರಿ ಅಲ್ಲದೆ ಉತ್ತರ ಕರ್ನಾಟಕದ ಸುತ್ತಮುತ್ತ ಈ ಚಿತ್ರಕ್ಕೆ 65ದಿನಗಳವರೆಗೆ ಚಿತ್ರೀಕರಣ ನಡೆಸಲಾಗಿದೆ.

ಅಥರ್ವ ಟೀಸರ್

ಕೊಲೆ ತನಿಖೆಯಲ್ಲಿ ಕ್ಲೂಸ್ ಟೀಮ್



ರವಿಚಂದ್ರನ್ ಅಭಿನಯದ ಮನೆದೇವ್ರು, ಹಾಲುಂಡ ತವರು, ಕರುಳಿನಕೂಗು ಮುಂತಾದ ಯಶಸ್ವಿ ಚಿತ್ರಗಳನ್ನು ನಿರ್ಮಿಸಿದ ನಿರ್ಮಾಪಕ ವೈಜಾಕ್‌ರಾಜು ಅವರ ಪುತ್ರ ಕಾರ್ತಿಕ್‌ರಾಜು ಅವರು ಅಥರ್ವ ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡುತ್ತಿದ್ದಾರೆ. ಅಥರ್ವ ಕನ್ನಡ ಸೇರಿದಂತೆ ನಾಲ್ಕು ಭಾಷೆಗಳಲ್ಲಿ ನಿರ್ಮಾಣವಾಗಿದ್ದು ಈ ಚಿತ್ರದ ಟೀಸರ್ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು, ಮಹೇಶ್ ರೆಡ್ಡಿ ಅವರ ನಿರ್ದೇಶನದ ಈ ಚಿತ್ರಕ್ಕೆ ಸುಭಾಷ್ ನೂತಲಪತಿ ಅವರು ಬಂಡವಾಳ ಹೂಡಿದ್ದಾರೆ.

ಈ ಸಂದರ್ಭದಲ್ಲಿ ಚಿತ್ರದ ನಾಯಕ ಕಾರ್ತಿಕ್‌ರಾಜು ಮಾತನಾಡುತ್ತಾ, ನಮ್ಮ ತಂದೆ ವೈಜಾಕ್‌ರಾಜು ಅವರು ಕನ್ನಡದಲ್ಲಿ ಸಾಕಷ್ಟು ಯಶಸ್ವಿ ಚಿತ್ರಗಳನ್ನು ನಿರ್ಮಿಸಿದ್ದಾರೆ. ನಾನು ತೆಲುಗಿನ ಕೆಲವು ಸಿನಿಮಾಗಳಲ್ಲಿ ನಾಯಕನಾಗಿ ನಟಿಸಿದ್ದೇನೆ. ಕನ್ನಡದಲ್ಲಿ ಇದೇ ನನ್ನ ಮೊದಲ ಚಿತ್ರ. ಕನ್ನಡ ಸಿನಿಮಾದಲ್ಲಿ ನಾಯಕನಾಗಿ ನಟಿಸಬೇಕೆಂಬ ನನ್ನ ಬಹುದಿನಗಳ ಕನಸು ಈ ಚಿತ್ರದ ಮೂಲಕ ಈಡೇರಿದೆ. ಇದಕ್ಕೂ ಮೊದಲು ನಾನು ಪುನೀತ್ ರಾಜಕುಮಾರ್ ಅವರ ವೀರಕನ್ನಡಿಗ ಚಿತ್ರದಲ್ಲಿ ಸಣ್ಣ ಪಾತ್ರದಲ್ಲಿ ಕಾಣಿಸಿಕೊಂಡಿದ್ದೆ. ಅಥರ್ವ ಒಂದು ಸಸ್ಪೆನ್ಸ್, ಥ್ರಿಲ್ಲರ್ ಚಿತ್ರ. ಮಹೇಶ್ ರೆಡ್ಡಿ ಅವರು ಈ ಚಿತ್ರದ ನಿರ್ದೇಶಕರು. ನುರಿತ ಕಲಾವಿದರು ಹಾಗೂ ತಂತ್ರಜ್ಞರು ಈ ಚಿತ್ರದಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಈಗಾಗಲೇ ಚಿತ್ರದ ಚಿತ್ರೀಕರಣ ಮುಕ್ತಾಯವಾಗಿದೆ. ಬರುವ ನವೆಂಬರ್‌ನಲ್ಲಿ ಚಿತ್ರ ತೆರೆಗೆ ಬರುವ ಸಾಧ್ಯತೆ ಇದೆ ಎಂದು ಅವರು ಹೇಳಿದರು.

ನಿರ್ದೇಶಕ ಮಹೇಶ್‌ರೆಡ್ಡಿ ಮಾತನಾಡಿ, ನಾನು ಮೂಲತಃ ಒಬ್ಬ ಸಾಫ್ಟ್‌ವೇರ್ ಎಂಜಿನಿಯರ್. ನಿರ್ದೇಶಕನಾಗಿ ಇದು ನನ್ನ ಮೊದಲ ಚಿತ್ರ. ಕ್ಲೂಸ್ ಡಿಪಾರ್ಟ್‌ಮೆಂಟ್ ಪೊಲೀಸ್ ಇನ್‌ವೆಸ್ಟಿಗೇಶನ್ ವಿಭಾಗದ ವ್ಯಾಪ್ತಿಗೆ ಬರುತ್ತದೆ. ಈ ಕ್ಲೂಸ್ ಡಿಪಾರ್ಟ್‌ಮೆಂಟ್ ಬಳಸಿಕೊಂಡು ಹೆಚ್ಚಿನ ಸಿನಿಮಾಗಳು ಬಂದಿಲ್ಲ. ನಮ್ಮ ಚಿತ್ರದಲ್ಲಿ ಒಂದು ಕೊಲೆಯ ಹಿಂದಿರುವ ಸತ್ಯವನ್ನು ತಿಳಿಯಲು ಕ್ಲೂಸ್ ಡಿಪಾರ್ಟ್‌ಮೆಂಟ್ ಎಷ್ಟು ಮುಖ್ಯವಾಗಿರುತ್ತೆ ಎಂಬುದನ್ನು ತೋರಿಸಿದ್ದೇವೆ. ಚಿತ್ರ ರಿಲೀಸಿಗೆ ಸಿದ್ಧವಾಗಿದ್ದು, ಸದ್ಯದಲ್ಲೇ ತೆರೆಗೆ ಬರಲಿದೆ ಎಂದು ಹೇಳಿದರು.

ಚಿತ್ರದಲ್ಲಿ ಪತ್ರಕರ್ತೆಯ ಪಾತ್ರ ನಿರ್ವಹಿಸಿರುವುದಾಗಿ ನಾಯಕಿ ಸಿಮ್ರಾನ್ ಹೇಳಿದರು. ನಿರ್ಮಾಪಕ ಸುಭಾಷ್ ನೂತಲಪಾಟಿ, ವೈಜಾಕ್ ರಾಜು ಹಾಗೂ ವಿತರಕ ಮಾರ್ಸ್ ಸುರೇಶ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.



ದೊಡ್ಮನೆ ಸೊಸೆ ಗಗನಕುಂಚಿ ಬೆಳ್ಳಿತೆರೆಗೆ

ದೊಡ್ಮನೆಸೊಸೆ, ಗಟ್ಟಿಮೇಳ ಮುಂತಾದ ಧಾರಾವಾಹಿಗಳಲ್ಲಿ ನಟಿಸಿದ್ದ ನಟಿ ಗಗನಕುಂಚಿ ಈಗ ಹಿರಿತೆರೆಗೆ ಕಾಲಿಡಲು ಸಜ್ಜಾಗಿದ್ದಾರೆ. ಸುಗಮ ಫಿಲಂಸ್ ನಿರ್ಮಾಣದ 2 ಚಿತ್ರಗಳಲ್ಲಿ ಅವರು ನಾಯಕಿಯಾಗಿ ನಟಿಸುತ್ತಿದ್ದಾರೆ, ಒಂದು ಚಿತ್ರವನ್ನು ಗುರುಕುಮಾರ್ ನಿರ್ದೇಶಿಸುತ್ತಿದ್ದಾರೆ. ಎರಡನೇ ಚಿತ್ರವನ್ನು ವಿಜಯ್ ಆರ್. ಅವರು ನಿರ್ದೇಶಿಸುತ್ತಿದ್ದಾರೆ. ಈ ಎರಡೂ ಚಿತ್ರಗಳು ಎರಡು ಭಾಗಗಳಲ್ಲಿ ಬರುತ್ತಿರುವುದು ವಿಶೇಷ. ಬಾಲನಟಿಯಾಗಿ ಅಭಿನಯಕ್ಕೆ ಕಾಲಿಟ್ಟ ಗಗನಕಂಚಿ, ನಂತರ ರಮೇಶ್ ಅರವಿಂದ್ ಅಭಿನಯದ 'ಹೆಂಡ್ತೀರ ದರ್ಬಾರ್' ಚಿತ್ರದಲ್ಲಿ ನಟಿಸಿದರು. ತಮಿಳಿನ ಸುಬ್ರಹ್ಮಣ್ಯಪುರಂ, ಕನ್ನಡದ ಮಹಾದೇವಿ, ಗಟ್ಟಿಮೇಳ ಅಲ್ಲದೆ ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್ ಫ್ಯಾಮಿಲಿ ವಾರ್ ಕಾರ್ಯಕ್ರಮದಲ್ಲೂ ಭಾಗವಹಿಸಿದ್ದಾರೆ. ಇದೀಗ ಅವರು ಸಿನಿಮಾ ನಾಯಕಿಯಾಗುವ ತಯಾರಿ ನಡೆಸಿದ್ದಾರೆ. ತಮ್ಮ ಹಿರಿತೆರೆ ಎಂಟ್ರಿಯ ಬಗ್ಗೆ ಮಾತನಾಡುವ ಗಗನಕುಂಚಿ, ಈ ಹಿಂದೆಯೂ ಕೆಲವು ಅವಕಾಶಗಳು ಬಂದಿದ್ದವು. ಆದರೆ, ಕಥೆ ಮತ್ತು ಪಾತ್ರ ಇಷ್ಟವಾಗದ ಕಾರಣ ಒಪ್ಪಿರಲಿಲ್ಲ. ಈ ಚಿತ್ರಗಳಲ್ಲಿ ನನ್ನ ಪಾತ್ರಕ್ಕೆ ಸಾಕಷ್ಟು ಸ್ಕೋಪ್ ಇದೆ. ಒಬ್ಬ ನಟಿಯಾಗಿ ಎಲ್ಲ ತರಹದ ಪಾತ್ರಗಳನ್ನು ಮಾಡಬೇಕೆಂಬುದು ನನ್ನ ಇಷ್ಟ, ಈ ಚಿತ್ರಗಳಲ್ಲಿ ನನ್ನ ಪ್ರತಿಭೆ ತೋರಿಸುವುದಕ್ಕೆ ಸಾಕಷ್ಟು ಅವಕಾಶಗಳಿವೆ ಎನ್ನುತ್ತಾರೆ.

ಅ.8ಕ್ಕೆ ಬಿಗ್‌ಬಾಸ್ ರಿಯಾಲಿಟಿ ಶೋ ಆರಂಭ



ಅಕ್ಟೋಬರ್ 8ರಿಂದ ಬಿಗ್‌ಬಾಸ್ ಕಾರ್ಯಕ್ರಮದ 10ನೇ ಸೀಸನ್ ಪ್ರಾರಂಭವಾಗುತ್ತಿದೆ. ಈ ಸಲದ ವಿಶೇಷತೆಗಳ ಕುರಿತು ಮಾಹಿತಿ ನೀಡಲು ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಸುದೀಪ್, ಕಲರ್ಸ್ ವಾಹಿನಿಯ ಪ್ರಶಾಂತ್ ನಾಯಕ್ ಮುಂತಾದವರು ಉಪಸ್ಥಿತರಿದ್ದರು. ಬಿಗ್‌ಬಾಸ್ ಕನ್ನಡದ ಅತಿದೊಡ್ಡ ರಿಯಾಲಿಟಿ ಶೋ ಆಗಿದ್ದು, ಈ ಸಲದ ಬಿಗ್‌ಬಾಸ್ ಮನೆಯ ಲೊಕೇಶನ್ ಕೂಡ ಬದಲಾಗಿದೆ. ಆರಂಭದಿಂದಲೂ ಎಲ್ಲಾ ಸೀಸನ್‌ಗಳ ನಿರೂಪಣೆಯನ್ನು ಕಿಚ್ಚ ಸುದೀಪ್ ಅವರೇ ನಡೆಸಿಕೊಡುತ್ತಿದ್ದು, 10 ಶೋಗಳನ್ನು ಒಬ್ಬರೇ ನಿರೂಪಣೆ ಮಾಡುತ್ತಿರುವುದು ವಿಶೇಷ ಎಂದು ಪ್ರಶಾಂತ್ ಹೇಳಿದರು.

ನಂತರ ಬಾನಿಜೆ ಮತ್ತು ಎಂಡಮಾನ್ ಶೈನ್, ಸಿಇಒ ದೀಪಕ್ ಧರ್ ಮಾತನಾಡಿ, ಕನ್ನಡದ ಬಿಗ್‌ಬಾಸ್‌ಗೆ ಹೆಚ್ಚಿನ ಪ್ರಾಮುಖ್ಯತೆಯಿದೆ. ಅದಕ್ಕೆ ಸುದೀಪ್ ಅವರೇ ಕಾರಣ ಎಂದರು. ನಂತರ ಮಾತನಾಡಿದ ಕಿಚ್ಚ ಸುದೀಪ್, ನನ್ನ ಪ್ರಕಾರ ಬಿಗ್‌ಬಾಸ್ ಸ್ಕ್ರಿಪ್ಟೆಡ್ ಶೋ ಅಲ್ಲ. ಇದರ ಮೂಲಕ ನಮಗೆ ವಿಭಿನ್ನ ಕ್ಯಾರೆಕ್ಟರ್‌ಗಳ ಪರಿಚಯವಾಗುತ್ತದೆ. ನನಗೆ ಮೊದಲ ಸೀಸನ್ ನಿಜಕ್ಕೂ ಚಾಲೆಂಜ್ ಆಗಿತ್ತು. 6ನೇ ಸೀಸನ್‌ನಲ್ಲಿ ನಡೆದ ಘಟನೆಗಳಿಂದ ಬಿಗ್‌ಬಾಸ್‌ನಿಂದಲೇ ಹೊರಗೆ ಹೋಗಬೇಕು ಎಂದುಕೊಂಡಿದ್ದೆ ಎಂದು ಹೇಳಿದರು. ವಿದೇಶದ ಶೋ ಒಂದು ಭಾರತಕ್ಕೆ ಬಂದು ಒರಿಜಿನಲ್ ಚಾನೆಲ್‌ಗಳಲ್ಲೂ ಪ್ರಸಾರವಾಗುತ್ತಾ, ಕನ್ನಡದಲ್ಲಿ 10ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದೆ. ಈ ಸೀಜನ್ನಿನಲ್ಲಿ ಒಟ್ಟು ಹದಿನಾರು ಜನ ಸ್ಪರ್ಧಿಗಳು ಭಾಗವಹಿಸುತ್ತಿದ್ದು, ಅವರ ಹೆಸರು ಉದ್ಘಾಟನಾ ದಿನದಂದೇ ರಿವೀಲ್ ಆಗಲಿದೆ. ಅಲ್ಲದೆ ಈ ಸೀಸನ್ನಿನ ಮನೆಯನ್ನು ಕಾಯಲು 73 ಕ್ಯಾಮರಾಗಳು ಸಜ್ಜಾಗಿವೆ.

ಅಲ್ಲದೆ ಇದೇ ಮೊದಲಬಾರಿಗೆ ಬಿಗ್‌ಬಾಸ್ ಕನ್ನಡ ಜಿಯೋ ಸಿನಿಮಾದಲ್ಲಿ ದಿನದ 24 ಗಂಟೆಯೂ ನೇರ ಪ್ರಸಾರವಾಗಲಿದೆ. ಈ ವೇದಿಕೆಯಲ್ಲಿ ಪ್ರೇಕ್ಷಕರಿಗೆ ಸಂವಾದ ನಡೆಸುವ ಅವಕಾಶವನ್ನು ಸಹ ಕಲ್ಪಿಸಲಾಗಿದೆ. ಅಲ್ಲದೆ ಟಿವಿಯಲ್ಲಿ ಶೋ ನೋಡಿ ಅಲ್ಲಿ ಕೇಳಲಾದ ಪ್ರಶ್ನೆಗಳಿಗೆ ಜಿಯೋ ಸಿನಿಮಾದಲ್ಲಿ ಉತ್ತರಿಸುವ ಮೂಲಕ ಪ್ರತಿದಿನವೂ ಪ್ರೇಕ್ಷಕರು ಬಹುಮಾನಗಳನ್ನು ಗೆಲ್ಲಬಹುದು. ಬಿಗ್‌ಬಾಸ್ ಕಲರ್ಸ್ ಕನ್ನಡದಲ್ಲಿ ಪ್ರತಿದಿನ ರಾತ್ರಿ 9:30ಕ್ಕೆ ಪ್ರಸಾರವಾಗಲಿದೆ. ಜೊತೆಗೆ ಜಿಯೋ ಸಿನಿಮಾದಲ್ಲಿ 24 ಗಂಟೆಯ ನೇರ ಪ್ರಸಾರವಿರುತ್ತದೆ.

ಸಿನಿಪದಬಂಧ–494

1		2			3	■	4			
	■		■	■		■		■	■	■
5				6	■	7				8
	■		■		■	■		■	■	
■	■	■	9						■	
10		■	■	■	■	■	■	■	11	
	■	12	13			14		■	■	■
	■	■		■	■		■	15	■	16
17					■	18				
■	■	■		■	19	■	■		■	
20				■	21					

ಹೆಸರು ____________

ವಿಳಾಸ ____________

____

ದೂರವಾಣಿ ಸಂಖ್ಯೆ ____________

ಎಡದಿಂದ ಬಲಕ್ಕೆ

1. ಬದಲಾವಣೆಯಾಗದೆ, ಬದಲಾವಣೆ ಹೊಂದಿದ ಪದಗಳ ವ್ಯಾಕರಣ ತೆರೆ ಕಂಡಿತು 6
4. ಡೈನಾಮಿಕ್ ಹೀರೋ ಪುತ್ರ ದ್ವಿಚಕ್ರ ವಾಹನ ನೆನಪಿಸಿದ್ದಾನೆ 4
5. ದೇವರಾಜ್ ಸೇನಾ ಮುಖ್ಯಸ್ಥ 5
7. ಕುಮಾರ್ ಬಂಗಾರಪ್ಪನ ಹಾಲಿಡಲು 5
9. ಡಾ. ರಾಜ್, ಜಯಮಾಲಾಳಿಗೆ ನೀಡಿದ ಉಡುಗೊರೆ 6
10. ಕುಮಾರಿ ಇಂದಿರಾಳಿಗೆ ಎ.ಟಿ. ರಘು ನಿರ್ದೇಶನವಿದೆ 2
11. ದರ್ಶನ್ ಸ್ವರ್ಗಾಧಿಪತಿ 2
12. ಕ್ರೇಜಿಲೋಕದ ನಿರ್ದೇಶಕಿ 6
17. ವಿಷ್ಣು, ಸುಮಲತಾಳಿಗೆ ಹೀರೋ 5
18. ಮೃಚ್ಛಕಟಿಕಾ ಸಂಸ್ಕೃತ ನಾಟಕ ಆಧರಿಸರುವ ಚಿತ್ರ 5
20. ರಮೇಶ್ – ಸುಧಾರಾಣಿಯ "ರಾಜಾಶುಕ" 4
21. ವಾಸುವಿನ ಸ್ವಪ್ನ ಜಗತ್ತು 6

ಮೇಲಿನಿಂದ ಕೆಳಕ್ಕೆ

1. ಗಿರೀಶ್ ಕಾರ್ನಾಡ್ ನಾಟಕಕ್ಕೂ ಸಂಚಾರಿ ವಿಜಯ್ ಚಿತ್ರಕ್ಕೂ ಎಲ್ಲಿಯ ಸಂಬಂಧ! 4
2. " ಆರಾಧಿಸುವೆ _ _ _ _ ಆಧರಿಸು ನೀ ದಯೆ ತೋರಿ......", 4
3. ರಾಮ್ ಕುಮಾರ್ ಅಭಿನಯದಲ್ಲಿ ಕಠಿಣ ವಸ್ತುವಿಗೆ ಬಾರೀ ಬೆಲೆಯಿದೆ 2
4. ಆರಂಭದಿ ಆಂಗ್ಲದ ಗುಲಾಬಿ ಮುಡಿದಿರುವ ನಟಿ 5
6. ಕೆಸರಿನ ಪುಷ್ಪ ಇಲ್ಲಿ ಅಸ್ತವ್ಯಸ್ತ 3
8. ಡಾ.ರಾಜಕುಮಾರ್ ದ್ವಿಪಾತ್ರಕ್ಕೆ ಲಕ್ಷ್ಮೀ ಮತ್ತು ಸುಮಲತಾ ಅಭಿನಯವಿದೆ 4
10. ಸುರೇಶ್ ಹೆಬ್ಳಿಕರ್ ಆಚಾನಕ್ಕಾಗಿ ಬಂದವನು 4
13. "ಮಧುಮಾಸ ಚಂದ್ರಮ ನೈದಿಲೆಗೆ ಸಂಭ್ರಮ.... ", ಗೀತೆಯ ಚಿತ್ರ 5
14. ಅಯ್ಯೋ, ಭಲೇ ಎನಿಸಿಕೊಂಡವನು 3
15. ಎಸ್.ಎಲ್.ಭೈರಪ್ಪ ಕಾದಂಬರಿಗೆ ಟಿ.ಎನ್.ಸೀತಾರಾಮ್ ನಿರ್ದೇಶಕ 4
16. ಕಾಶೀನಾಥ್ ಹೆಸರಿಲ್ಲದವನು 4
19. ಸಾಯಿಕುಮಾರ್ ಅಭಿನಯಕ್ಕೆ ಜಿ.ಕೆ.ಮುದ್ದುರಾಜ್ ನಿರ್ದೇಶಕ 2



ವಿಜೇತರು: ಹೆಚ್.ಎಸ್.ಅಶೋಕ್, ನಂ. 65, 9ನೇ ಕ್ರಾಸ್, 'ಐ' ಬ್ಲಾಕ್, ರಾಮಕೃಷ್ಣನಗರ



ಉಮ್ಮತ್ತೂರು ಇಂದುಶೇಖರ್
ಮೊ.9880820462

ಸಿನಿ ಪದಬಂಧ 493ರ ಉತ್ತರ

ಸಾ	ಯಿ	ಸು	ತೆ	■	■	ಮಾ	ಯ	ಬ	ಜಾ	ರ್
ಮ್ರಾ	■	ವ	■	ಕ	ಲ್ಯಾ	ಣಿ	■	■	■	ದ
ಟ್	■	ರ್ಣ	■	ರು	■	ಕ್ಯ	■	ಕು	■	ಮ
■	■	ಭೂ	■	ಳಿ	■	■	■	ಮಾ	■	■
ಶು	ಭ	ಮಿ	ಲ	ನ	■	ವೀ	ರಾ	ಧಿ	ವೀ	ರ
■	■	■	■	ಕು	ಬೇ	ರ	■	■	■	■
ಚಂ	ಡಿ	ಚಾ	ಮುಂ	ಡಿ	■	ಮ	ನೆ	ಅ	ಳಿ	ಯ
■	■	ಲೆಂ	■	■	■	ದ	■	ಮ	■	■
ಸಾ	■	ಜ್	■	ಕಾಂ	■	ಕ	■	ರ	■	ಸ
ಹ	■	■	■	ಚ	ಕೋ	ರಿ	■	ಜ್ಯೋ	■	ಮ
ಸಿ	ರಿ	ಚಂ	ದ	ನ	■	■	ಪ್ರ	ತಿ	ಕಾ	ರ

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು–570 015

ಆಸ್ಪತ್ರೆಯ ಸಮಸ್ಯೆ ಪರಿಹಾರಕ್ಕೆ ಕಾರ್ಯಪ್ರವೃತ್ತ

ತಿ.ನರಸೀಪುರದಲ್ಲಿ ಜಿಲ್ಲಾ ಆರೋಗ್ಯಾಧಿಕಾರಿ ಪಿ.ಸಿ. ಕುಮಾರಸ್ವಾಮಿ ಭರವಸೆ



ತಿ.ನರಸೀಪುರ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಮುಂಭಾಗದಲ್ಲಿ ನಡೆದ ಪ್ರತಿಭಟನೆಗೆ ಬಂದ ಡಿಎಚ್‌ಒ ಕುಮಾರಸ್ವಾಮಿ ಪ್ರತಿಭಟನಾಕಾರರಿಂದ ಮನವಿ ಸ್ವೀಕರಿಸಿದರು.

ತಿ.ನರಸೀಪುರ. ಅ.5– ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಸಮಸ್ಯೆಗಳನ್ನು ಈಡೇರಿಸಲು ಈಗಾಗಲೇ ಕಾರ್ಯಪ್ರವೃತ್ತರಾಗಿದ್ದು, ಹಂತ ಹಂತವಾಗಿ ಬಗೆಹರಿಸಲಾಗುವುದು ಎಂದು ಜಿಲ್ಲಾ ಆರೋಗ್ಯಾಧಿಕಾರಿ ಪಿ.ಸಿ.ಕುಮಾರಸ್ವಾಮಿ ಭರವಸೆ ನೀಡಿದರು.

ಆಸ್ಪತ್ರೆ ಮುಂಭಾಗ ದಸಂಸ ಕಳೆದ ಮೂರು ದಿನಗಳಿಂದ ನಡೆಸುತ್ತಿದ್ದ ಪ್ರತಿಭಟನಾ ಸ್ಥಳಕ್ಕೆ ಗುರುವಾರ ಭೇಟಿ ನೀಡಿ ಮನವಿ ಸ್ವೀಕರಿಸಿ ಮಾತನಾಡಿದ ಅವರು, ನಾನು ಹಲವು ಬಾರಿ ಆಸ್ಪತ್ರೆಗೆ ಭೇಟಿ ನೀಡಿದ್ದೇನೆ. ಇಲ್ಲಿನ ಎಲ್ಲಾ ಸಮಸ್ಯೆಗಳನ್ನು ಪರಿಶೀಲಿಸಿ, ತುರ್ತು ಕೆಲಸಗಳ ಬಗ್ಗೆ ಆಸ್ಪತ್ರೆಯ ವೈದ್ಯಾಧಿಕಾರಿಗಳಿಗೆ ನಿರ್ದೇಶನ ನೀಡಿದ್ದೇನೆ. ದಸಂಸದ ಬೇಡಿಕೆಗಳು ಶೇ.50ರಷ್ಟು ಶೀಘ್ರದಲ್ಲೇ ಈಡೇರಲಿದೆ ಎಂದರು.

ಆರೋಗ್ಯ ಇಲಾಖೆ ಸರ್ಕಾರಿ ವೈದ್ಯಕೀಯ ಸೌಲಭ್ಯ ವಿಚಾರದಲ್ಲಿ ಸಾಕಷ್ಟು ಕಾಳಜಿ ತೋರಿಸುತ್ತಿದ್ದು, ಈ ನಿಟ್ಟಿನಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ. ಸರ್ಕಾರ ಇದಕ್ಕೆ ಸ್ಪಂದಿಸುತ್ತಿದೆ. ಸಾಕಷ್ಟು ಸಮಸ್ಯೆಗಳನ್ನು ಜಿಲ್ಲಾ ಮಟ್ಟದಲ್ಲೇ ಬಗೆಹರಿಸಲು ಪ್ರಯತ್ನಿಸಲಾಗುವುದು. ಉಳಿದ ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತಂದು ಬಗೆಹರಿಸುದಾಗಿ ಭರವಸೆ ನೀಡಿದರು.

ಪ್ರಸೂತಿ ತಜ್ಞರ ಬಗ್ಗೆ ಸಾಕಷ್ಟು ದೂರುಗಳು ಕೇಳಿ ಬಂದಿವೆ. ಈ ಬಗ್ಗೆ ಅವರಿಗೆ ನೋಟಿಸ್ ನೀಡುವಂತೆ ಆಡಳಿತ ವೈದ್ಯಾಧಿಕಾರಿಗೆ ಸೂಚಿಸಲಾಗಿದೆ. ಸಾರ್ವಜನಿಕರು, ಸಂಘ–ಸಂಸ್ಥೆಗಳು ಹಾಗೂ ವೈದ್ಯರು ನಡುವೆ ಸಮುದಾಯ ಸಹಭಾಗಿತ್ವ ಅಳವಡಿಸಿಕೊಂಡು ಸಹಕರಿಸುವಂತೆ ಮನವಿ ಮಾಡಿದರು.

ಸಭೆ: ನಂತರ ಆಸ್ಪತ್ರೆಯ ಶುಚಿತ್ವ, ಸಿಬ್ಬಂದಿ ಹಾಗೂ ಔಷಧಿ ಕೊಠಡಿಗಳನ್ನು ಪರಿಶೀಲಿಸಿ ಮಾಹಿತಿ ಪಡೆದು ಆಡಳಿತ ಅಧಿಕಾರಿಗಳ ಕಚೇರಿಯಲ್ಲಿ ವೈದ್ಯರ ಸಭೆ ನಡೆಸಿದರು. ಸಭೆಯಲ್ಲಿ ಸಾರ್ವಜನಿಕರಿಂದ ದೂರುಗಳು ಬಾರದಂತೆ ಕರ್ತವ್ಯ ನಿರ್ವಹಿಸುವಂತೆ ವೈದ್ಯರಿಗೆ ಸಲಹೆ ನೀಡಿದರು.

ಇದೇ ವೇಳೆ ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕ ಆಲಗೂಡು ಡಾ. ಎಸ್.ಚಂದ್ರಶೇಖರ್ ಮಾತನಾಡಿ, ಪ್ರಸೂತಿ ತಜ್ಞರನ್ನು ಕೂಡಲೇ ವರ್ಗಾವಣೆ ಮಾಡಬೇಕು ಹಾಗೂ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಮತ್ತೆ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು. ನಿಮ್ಮ ವಿಶ್ವಾಸದ ಮೇಲೆ ಧರಣಿ ಹಿಂಪಡೆಯುತ್ತಿದ್ದೇವೆ. ನಮ್ಮ ಬೇಡಿಕೆಗಳನ್ನು ಶೀಘ್ರ ಈಡೇರಿಸಬೇಕೆಂದು ಜಿಲ್ಲಾ ಆರೋಗ್ಯಾಧಿಕಾರಿಗೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್, ಸಾರ್ವಜನಿಕ ಆಸ್ಪತ್ರೆಯ ಆಡಳಿತಾಧಿಕಾರಿ ಡಾ. ಜಗನ್ನಾಥ್, ದಸಂಸ ತಾಲೂಕು ಸಂಚಾಲಕ ಕೆಂಪಯ್ಯನಹುಂಡಿ ರಾಜು, ಕನ್ನನಾಯಕನಹಳ್ಳಿ ಮರಿಸ್ವಾಮಿ, ಎಲ್. ರಾಜಶೇಖರ್, ಮನೋಜ್ ಕುಮಾರ್, ಚೌಹಳ್ಳಿ ಪರಶುರಾಮ್, ಸೋಮನಾಥಪುರ ಗೋವಿಂದರಾಜು, ಎಡದೊರೆ ಚಂದ್ರಪ್ಪ, ಕೊಳತ್ತೂರು ಪ್ರಭಾಕರ್, ಮಾರನಪುರ ಕೇಶವಮೂರ್ತಿ, ಜಯಣ್ಣ, ಶಿವನಂಜು, ರವಿಕಾಂತ್, ಮಹದೇವಸ್ವಾಮಿ, ಉಮೇಶ್, ಮಂಚಯ್ಯ, ಸ್ವಾಮಿ, ಶಿವನಂಜು ಉಪಸ್ಥಿರಿದ್ದರು.

ತಹಶೀಲ್ದಾರ್‌ಗೆ ದಸಂಸ ಮನವಿ ಸಲ್ಲಿಕೆ

ನಂಜನಗೂಡು: ತಾಲೂಕಿನ ಚುಂಚನಹಳ್ಳಿ ಗ್ರಾಮದಲ್ಲಿ ಗ್ರಾಮಸ್ಥರ ಗಮನಕ್ಕೆ ಬಾರದೆ ಖಾಸಗಿ ವ್ಯಕ್ತಿಯೊಬ್ಬ ಮಂಜೂರು ಮಾಡಿಸಿಕೊಂಡಿರುವ ಸ್ಮಶಾನ ಮೀಸಲು ಜಾಗವನ್ನು ವಶಪಡಿಸಿಕೊಳ್ಳಬೇಕು ಎಂದು ದಲಿತ ಸಂಘರ್ಷ ಸಮಿತಿಯ ಪದಾಧಿಕಾರಿಗಳು ತಹಶೀಲ್ದಾರ್ ಶಿವಕುಮಾರ್ ಕಾಸ್ನೂರು ಅವರಿಗೆ ಮನವಿ ಸಲ್ಲಿಸಿದರು.

ನಗರದ ತಾಲೂಕು ಕಚೇರಿಯ ಮುಂಭಾಗ ಜಮಾವಣೆಗೊಂಡ ದಸಂಸ ಕಾರ್ಯಕರ್ತರು, ತಾಲೂಕು ಆಡಳಿತದ ವಿರುದ್ಧ ಘೋಷಣೆ ಕೂಗಿದರು. ಚುಂಚನಹಳ್ಳಿ ಗ್ರಾಮದಲ್ಲಿ ಕಳೆದ 500 ವರ್ಷಗಳಿಂದಲೂ ಶವಗಳನ್ನು ಹೂಳುತ್ತಿದ್ದ ಸರ್ವೆ ನಂ.34/2ರ 2 ಎಕರೆ ಸ್ಮಶಾನ ಜಾಗವನ್ನು ಶಿವಮ್ಮ ಎಂಬುವವರು ಪ್ರಭಾವ ಬಳಸಿ ಗ್ರಾಮಸ್ಥರ ಗಮನಕ್ಕೆ ಬಾರದೆ ಮಂಜೂರಾತಿ ಮಾಡಿಸಿಕೊಂಡಿದ್ದಾರೆ ಎಂದು ಮನವಿಯಲ್ಲಿ ದೂರಿದರು.



ನಂಜನಗೂಡು ತಾಲೂಕಿನ ಚುಂಚನಹಳ್ಳಿ ಗ್ರಾಮದಲ್ಲಿ ಖಾಸಗಿ ವ್ಯಕ್ತಿಗೆ ಮಂಜೂರಾಗಿರುವ ಸ್ಮಶಾನ ಮೀಸಲು ಜಾಗವನ್ನು ವಶಪಡಿಸಿಕೊಳ್ಳಬೇಕು ಎಂದು ದಲಿತ ಸಂಘರ್ಷ ಸಮಿತಿಯ ಪದಾಧಿಕಾರಿಗಳು ತಹಶೀಲ್ದಾರ್ ಶಿವಕುಮಾರ್ ಕಾಸ್ನೂರು ಅವರಿಗೆ ಮನವಿ ಸಲ್ಲಿಸಿದರು.

ಈ ಜಾಗದಲ್ಲಿ ಗ್ರಾಮದ ಎಲ್ಲಾ ಕೋಮಿನ ಜನರು ಈಗಲೂ ಶವ ಹೂಳುತ್ತಿದ್ದು, ಸಾರ್ವಜನಿಕ ಸ್ಮಶಾನವಾಗಿಯೇ ಬಳಸಲಾಗುತ್ತಿದೆ. ಈ ಸಂಬಂಧ ಮುಂದಿನ ದಿನಗಳಲ್ಲಿ ಘರ್ಷಣೆಗಳಾಗುವ ಸಂಭವವಿದೆ. ಆದ್ದರಿಂದ ತಾಲೂಕು ಆಡಳಿತ ಈ ಸರ್ಕಾರಿ ಜಮೀನನ್ನು ವಶಕ್ಕೆ ಪಡೆದುಕೊಂಡು ಗ್ರಾಮಸ್ಥರ ಅನುಕೂಲಕ್ಕಾಗಿ ಸ್ಮಶಾನ ಜಾಗವೆಂದು ಮರು ಮಂಜೂರಾತಿ ಮಾಡಿಕೊಡಬೇಕು ಎಂದು ಒತ್ತಾಯಿಸಿದರು.

ಇದೇ ಸಂದರ್ಭದಲ್ಲಿ ದಸಂಸ ಸಂಚಾಲಕ ಶಂಕರಪುರ ಮಂಜು, ಸುರೇಶ್, ಮಹೇಶ್, ಹೊಳೆಯಪ್ಪ, ಮಹದೇವಸ್ವಾಮಿ, ಗುರು, ರೈತ ಸಂಘದ ತಾಲೂಕು ಅಧ್ಯಕ್ಷ ಸತೀಶ್‌ರಾವ್ ಇದ್ದರು.

ನಂಜಾಪುರ ಸರ್ಕಾರಿ ಶಾಲೆ ಪುನಾರಂಭ



ಹುಣಸೂರು, ಅ.5– ತಾಲೂಕಿನ ಕರಿಮದ್ದನಹಳ್ಳಿ ಕ್ಲಸ್ಟರ್ ವ್ಯಾಪ್ತಿಯ ನಂಜಾಪುರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಗಾಂಧಿ ಜಯಂತಿ ದಿನದಂದು ಪುನಾರಂಭಿಸಲಾಗಿದೆ.

ಖಾಸಗಿ ವಿದ್ಯಾಸಂಸ್ಥೆಗಳ ವ್ಯಾಮೋಹಕ್ಕೆ ಪೋಷಕರು ಒಳಗಾಗಿ ತಮ್ಮ ಮಕ್ಕಳನ್ನು ದೂರದ ಕಾನ್ವೆಂಟ್‌ಗೆ ದಾಖಲಿಸಿದ್ದರು. ಈ ಪರಿಣಾಮ ನಂಜಾಪುರ ಸರ್ಕಾರಿ ಶಾಲೆಯ ಮಕ್ಕಳ ಸಂಖ್ಯೆ 1ಕ್ಕೆ ಕುಸಿದಿತ್ತು. ಇದರಿಂದ ಮಕ್ಕಳ ದಾಖಲಾತಿ ಇಲ್ಲದೆ ಶಾಲೆಯನ್ನು ಮುಚ್ಚಲಾಗಿತ್ತು.

ಪೋಷಕರ ಮನವೊಲಿಕೆ: ಕ್ಷೇತ್ರ ಶಿಕ್ಷಣಾಧಿಕಾರಿ ರೇವಣ್ಣ ಗ್ರಾಮಸ್ಥರೊಂದಿಗೆ ಸೇರಿ ಮೂರು ಬಾರಿ ಸಭೆ ನಡೆಸಿದರು. ಬಳಿಕ ಗ್ರಾಮದ ಮುಖಂಡರು ಸರ್ಕಾರಿ ಶಾಲೆಗೆ ಮಕ್ಕಳನ್ನು ಸೇರಿಸಿ ನಮ್ಮೂರಿನ ಶಾಲೆಯನ್ನು ಮತ್ತೆ ಪ್ರಾರಂಭಿಸುವ ಜವಾಬ್ದಾರಿ ಹೊತ್ತು ಪೋಷಕರ ಮನೆ ಮನೆಗೆ ತೆರಳಿ ಸರ್ಕಾರಿ ಶಾಲೆಗೆ ತಮ್ಮ ಮಕ್ಕಳನ್ನು ದಾಖಲಿಸುವಂತೆ ಮನವೊಲಿಸಲು ಪ್ರಯತ್ನಿಸಿದರು. ಪರಿಣಾಮ 1ರಿಂದ 5ನೇ ತರಗತಿವರೆಗೆ 4 ವಿದ್ಯಾರ್ಥಿಗಳು ದಾಖಲಾದರು. ಬಳಿಕ ಶಾಲೆ ಆರಂಭಿಸಲಾಯಿತು. ಹಾಗಾಗಿ, ಇದೀಗ ಶಾಲೆಯಲ್ಲಿ ಮಕ್ಕಳ ಕಲರವ ಶುರುವಾಗಿದೆ.

ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಬಿಇಒ ರೇವಣ್ಣ, ಪೋಷಕರಿಗೆ ಮನವರಿಕೆ ಮಾಡಿದ ಫಲವಾಗಿ ಶಾಲೆ ಆರಂಭವಾಗಿದೆ. ಇದೇ ರೀತಿ ತಾಲೂಕಿನಲ್ಲಿ ಮುಚ್ಚಿರುವ ಸರ್ಕಾರಿ ಶಾಲೆಗಳನ್ನು ಪುನಾರಂಭಿಸಲು ಶ್ರಮಿಸುತ್ತೇವೆ. ಈಗಾಗಲೇ ಮುಚ್ಚಿದ್ದ 4 ಶಾಲೆಗಳಲ್ಲಿ ಶಾಂತಿಪುರ, ನಂಜಾಪುರ, ಕುಡಿನೀರು ಮುದ್ದನಹಳ್ಳಿಯ ಮೂರು ಶಾಲೆಗಳನ್ನು ಪುನಾರಂಭಿಸಲಾಗಿದೆ. ಕಿರಸೊಡ್ಲು ಶಾಲೆ ಬಾಕಿ ಇದ್ದು, ಈ ಶಾಲೆಯನ್ನು ಶೀಘ್ರ ಪ್ರಾರಂಭಿಸಲಾಗುವುದು ಎಂದರು.

ಸರ್ಕಾರಿ ಶಾಲೆಗಳಲ್ಲಿ ಪ್ರತಿಭಾವಂತ ಶಿಕ್ಷಕರಿದ್ದು, ಯಾವುದೇ ಸರ್ಕಾರಿ ಶಾಲೆಗಳು ಮುಚ್ಚಬಾರದು. ಗ್ರಾಮದಲ್ಲಿ ಶಾಲೆ ಮುಚ್ಚಿದರೆ ಅದು ಶಿಕ್ಷಣ ಇಲಾಖೆಯಿಂದ ಗ್ರಾಮಕ್ಕೆ ಅವಮಾನ. ಹಿಂದೆ ಊರಿನ ಯಜಮಾನರು ಸೇರಿದಂತೆ ಪ್ರಮುಖರು ಶಾಲೆಗಳಿಗೆ ಜಮೀನು ದಾನವಾಗಿ ನೀಡಿ ಸರ್ಕಾರಿ ಶಾಲೆಗಳ ನಿರ್ಮಾಣಕ್ಕೆ ಸಹಕರಿಸುತ್ತಿದ್ದರು. ಆದರೆ, ಇಂದಿನ ದಿನಗಳಲ್ಲಿ ಲಕ್ಷಾಂತರ ರೂ. ವಸೂಲಿ ಮಾಡಿ ಗ್ರಾಮಗಳಲ್ಲಿ ದೇವಸ್ಥಾನಗಳನ್ನು ಕಟ್ಟುತ್ತಿದ್ದಾರೆ. ಹಾಗೆ ಶಾಲೆಗಳು ದೇವಸ್ಥಾನಗಳಿದ್ದಂತೆ. ಮಕ್ಕಳು ಬುದ್ಧಿವಂತರಾಗಿ ದೇಶದ ಸತ್ಪ್ರಜೆಗಳಾಗಬೇಕಾದರೆ ಶಾಲೆಗಳಿಂದ ಮಾತ್ರ ಎಂದು ಕಿವಿಮಾತು ಹೇಳಿದರು.

ಪಿಡಿಒ ನವೀನ್ ಮಾತನಾಡಿ, ಶಾಲೆಗೆ ಬೇಕಾಗುವ ಮೂಲಸೌಲಭ್ಯಗಳನ್ನು ಗ್ರಾಮ ಪಂಚಾಯಿತಿ ಸದಸ್ಯರೊಂದಿಗೆ ಚರ್ಚಿಸಿ ಒದಗಿಸಲಾಗುವುದು ಎಂದು ಭರವಸೆ ನೀಡಿದರು.

ಗ್ರಾಪಂ ಸದಸ್ಯ ಮನುಕುಮಾರ್ ಮಾತನಾಡಿದರು. ಗ್ರಾಪಂ ಅಧ್ಯಕ್ಷೆ ಮುಬಾರಕ್ ಬಾನು, ಉಪಾಧ್ಯಕ್ಷೆ ಪದ್ಮಮ್ಮ, ಸದಸ್ಯರಾದ ಶೋಭಾ, ರಾಮಬೋವಿ, ಸಿಆರ್‌ಪಿ ಶಿವಪ್ಪ, ಗ್ರಾಮದ ಯಜಮಾನರಾದ ಶಿವಕುಮಾರ್, ಚಂದ್ರಶೆಟ್ಟಿ, ಮಂಜುರಾವ್ ಖದಂ, ಶಿಕ್ಷಕರಾದ ರಾಮಚಂದ್ರ, ಭಾಗ್ಯ, ಗ್ರಂಥಾಲಯ ಮೇಲ್ವಿಚಾರಕಿ ಸುನಿತಾ, ಎಸ್‌ಡಿಎಂಸಿ ಅಧ್ಯಕ್ಷ ಮಹೇಶ್, ಅಂಗನವಾಡಿ ಕಾರ್ಯಕರ್ತೆ ಅನ್ನಪೂರ್ಣ ಹಾಗೂ ಯುವಕರು ಹಾಜರಿದ್ದರು.

ಹುಣಸೂರಲ್ಲಿ ದಸಂಸ ಪೂರ್ವಭಾವಿ ಸಭೆ

ಹುಣಸೂರು.ಅ.5–ದಲಿತ ಸಂಘರ್ಷ ಸಮಿತಿಯ ಸದಸ್ಯರ ಸಭೆಯ ಅಂಗವಾಗಿ ನಗರದ ಅಂಬೇಡ್ಕರ್ ಭವನದಲ್ಲಿ ಇಂದು ಪೂರ್ವಭಾವಿ ಸಭೆ ನಡೆಯಿತು.

ದಸಂಸ ಜಿಲ್ಲಾ ಸಂಚಾಲಕ ಬೆಟ್ಟಯ್ಯ ಕೋಟೆ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ನ.6ರಂದು ಸರ್ವಸದಸ್ಯರ ಸಭೆ ನಡೆಸಲು ತೀರ್ಮಾನಿಸಲಾಯಿತು. ಜಿಲ್ಲಾ ಸಂಘಟನಾ ಸಂಚಾಲಕರಾದ ಶಂಭುಲಿಂಗಸ್ವಾಮಿ, ಹೆಗ್ಗನೂರು ನಿಂಗರಾಜು, ಜಿಲ್ಲಾ ಖಜಾಂಚಿ ಬಿ.ಡಿ.ಶಿವಬುದ್ಧಿ, ತಾಲೂಕು ಸಂಚಾಲಕ ರಾಮಕೃಷ್ಣ ಅತ್ತಿಕುಪ್ಪೆ ನಗರ ಸಂಚಾಲಕ ರಾಜು ಚಿಕ್ಕಹುಣಸೂರು, ವಿಭಾಗಿಯ ಸಂಚಾಲಕರಾದ ಗೌರಿಪುರ ವೆಂಕಟೇಶ್, ಶಿವರಾಜ್ ಮುತ್ತರಾಯನಹೊಸಹಳ್ಳಿ, ಸಿದ್ದೇಶ್ ಅತ್ತಿಕುಪ್ಪೆ, ಪುಟ್ಟರಾಜ ಬೀರನಹಳ್ಳಿ, ಹಳೇಪುರ ಚೆಲುವರಾಜು, ಕೃಷ್ಣ ಹಳೇಪುರ, ರಮೇಶ್ ಕೋತ್ತೇಗಾಲ, ರಮೇಶ್ ಹಾಗೂ ಪದಾಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

ಶಾಲಾ ಮಕ್ಕಳಿಗೆ ಕಲಿಕಾ ಸಾಮಗ್ರಿ ವಿತರಣೆ



ತಿ.ನರಸೀಪುರ, ಅ.5–ತಾಲೂಕಿನ ಸಿದ್ದನಹುಂಡಿ ಗ್ರಾಮದಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ಗಾಂಧಿ ಜಯಂತಿ ಪ್ರಯುಕ್ತ ತ್ರಿಷಿಕಾ ಫೌಂಡೇಷನ್ ವತಿಯಿಂದ ಕಲಿಕಾ ಸಾಮಗ್ರಿಗಳನ್ನು ವಿತರಿಸಲಾಯಿತು.

ಇದೇ ವೇಳೆ ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ವೈದ್ಯಕೀಯ ವಿಭಾಗದ ಅಧ್ಯಕ್ಷ ಡಾ.ಪ್ರದೀಪ್ ಮಾತನಾಡಿ, ಮಕ್ಕಳಿಗೆ ಕಲಿಕಾ ಸಾಮಗ್ರಿಗಳನ್ನು ವಿತರಿಸುವ ಮೂಲಕ ಗಾಂಧೀಜಿ ಅವರಿಗೆ ನಮನ ಸಲ್ಲಿಸಲಾಗುತ್ತಿದೆ. ಮುಂದೆಯೂ ರಾಷ್ಟ್ರ ನಾಯಕರ ಜಯಂತಿ ಅಂಗವಾಗಿ ತ್ರಿಷಿಕಾ ಫೌಂಡೇಷನ್ ವತಿಯಿಂದ ಶಾಲಾ ಮಕ್ಕಳಿಗೆ ನೋಟ್‌ಬುಕ್ ಹಾಗೂ ಪಠ್ಯೇತರ ಚಟುವಟಿಕೆ ಸಾಮಗ್ರಿಗಳನ್ನು ಉಚಿತವಾಗಿ ವಿತರಿಸುವುದಾಗಿ ಘೋಷಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಶಿಕ್ಷಕಿ ಮಂಗಳಾ, ಶಿಕ್ಷಕರಾದ ದಾಕ್ಷಾಯಿಣಿ, ಜಿಲ್ಲಾ ಗ್ರಾಮಾಂತರ ಎಸ್‌ಸಿ ವಿಭಾಗದ ಪ್ರಧಾನ ಕಾರ್ಯದರ್ಶಿ ನಟರಾಜು, ಸಿದ್ದನಹುಂಡಿ ಸುರೇಶ್, ಸಂಜಯ್, ಸಿ.ಮಹದೇವು, ಕುಮಾರಿ ತ್ರಿಶಾಂಕಾ ಮತ್ತಿತರರು ಇದ್ದರು.

ಶೌರ್ಯ ಜಾಗರಣ ರಥಯಾತ್ರೆಗೆ ಸ್ವಾಗತ



ಪಿರಿಯಾಪಟ್ಟಣ: ಪಟ್ಟಣಕ್ಕೆ ಗುರುವಾರ ಸಂಜೆ ಆಗಮಿಸಿದ ಶೌರ್ಯ ಜಾಗರಣ ರಥಯಾತ್ರೆಗೆ ಬಿಜೆಪಿ ಮುಖಂಡರು ಹಾಗೂ ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ಸ್ವಾಗತಿಸಿದರು.

ವಿಶ್ವ ಹಿಂದೂ ಪರಿಷತ್, ಬಜರಂಗ ದಳ ಹಾಗೂ ಹಿಂದೂ ಸಂಘಟನೆಗಳ ವತಿಯಿಂದ ನಡೆಯುತ್ತಿರುವ ಮೈಸೂರಿನಿಂದ ಹೊರಟ ರಥಯಾತ್ರೆ ಹುಣಸೂರು ಮಾರ್ಗವಾಗಿ ಪಿರಿಯಾಪಟ್ಟಣದ ಬೆಟ್ಟದಪುರ ಸರ್ಕಲ್‌ಗೆ ಆಗಮಿಸಿದಾಗ ಸ್ವಾಗತಿಸಿ, ಬೀಳ್ಕೊಡಲಾಯಿತು. ನಂತರ ರಥಯಾತ್ರೆ ತಾಲೂಕಿನ ಕೊಪ್ಪ ಕಡೆಗೆ ತೆರಳಿತು.

ಇದೇ ಸಂದರ್ಭದಲ್ಲಿ ಮಾಜಿ ಶಾಸಕ ಹೆಚ್.ಸಿ.ಬಸವರಾಜ್, ಬಿಜೆಪಿ ಮುಖಂಡರಾದ ಕೊಪ್ಪ ರಾಜೇಂದ್ರ ಎಂ.ಎಂ.ರಾಜೇಗೌಡ, ಸ್ವಾಮಿ, ಭಾರತಿ, ವಿಕ್ರಮ್ ರಾಜ್. ಆರ್.ಟಿ.ಸತೀಶ್, ಹಿಂದೂಪರ ಸಂಘಟನೆಯ ರವಿ, ಬೆಮ್ಮತಿ ಚಂದ್ರು. ನಳಿನಿ ಗೌಡ. ಶುಭ ಗೌಡ, ನಿರ್ಮಲಾ, ಬಾನು, ಯಾದವಾಚಾರ್, ಅರುಣ, ಅನಿಲ್, ಲೋಕಪಾಲಯ್ಯ ಮತ್ತಿತರರು ಇದ್ದರು.

ಗ್ರಾಪಂಗಳಲ್ಲಿ 'ಉದ್ಯೋಗ ಖಾತ್ರಿ ನಡಿಗೆ ಸುಸ್ಥಿರತೆಯೆಡೆಗೆ'



ಹುಣಸೂರು, ಅ.5–ನರೇಗಾ ಯೋಜನೆಯಡಿ ಮುಂದಿನ ಆರ್ಥಿಕ ವರ್ಷದ ಆಯ–ವ್ಯಯ ತಯಾರಿಸುವ ಸಲುವಾಗಿ ವಿಶೇಷ ಐಇಸಿ ಕಾರ್ಯಕ್ರಮಗಳಾದ 'ಉದ್ಯೋಗ ಖಾತ್ರಿ ನಡಿಗೆ ಸುಸ್ಥಿರತೆಯೆಡೆಗೆ' ಕಾರ್ಯಕ್ರಮವನ್ನು ಗ್ರಾಮ ಪಂಚಾಯಿತಿಗಳಲ್ಲಿ ಹಮ್ಮಿಕೊಳ್ಳಲಾಗುವುದು ಎಂದು ತಾಪಂ ಕಾರ್ಯನಿರ್ವಾಹಕಾಧಿಕಾರಿ ಬಿ.ಕೆ.ಮನು ತಿಳಿಸಿದರು.

ತಾಲೂಕಿನ ಹಳೇಬೀಡು ಗ್ರಾಮದಲ್ಲಿ ನಡೆದ ಸ್ವಚ್ಛತಾ ಅಭಿಯಾನ್ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅ.2ರಿಂದ ಒಂದು ತಿಂಗಳವರೆಗೆ ತಾಲೂಕಿನ 41 ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 'ಉದ್ಯೋಗ ಖಾತ್ರಿ ನಡಿಗೆ ಸುಸ್ಥಿರತೆಯೆಡೆಗೆ' ಅಭಿಯಾನ ನಡೆಸಲು ಚಿಂತಿಸಲಾಗುತ್ತಿದೆ. ಆಯ–ವ್ಯಯ ತಯಾರಿಸಲು ವೇಳಾಪಟ್ಟಿ ನಿಗದಿಪಡಿಸುವ ಮೂಲಕ ಕಾಲಮಿತಿಯೊಳಗೆ ಪ್ರಕ್ರಿಯೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲು ಸೂಚನೆ ಇದೆ ಈ ಹಿನ್ನೆಲೆಯಲ್ಲಿ ತಾಲೂಕಿನ ಎಲ್ಲಾ ಗ್ರಾಮಗಳಲ್ಲಿ 2024–25ನೇ ಸಾಲಿನ ಆಯ–ವ್ಯಯ ತಯಾರಿಸುವ ಉದ್ದೇಶದಿಂದ ಮನೆ ಮನೆ ಜಾಥಾ ಮತ್ತು ರೋಜ್ಗಾರ್ ದಿವಸ್ ಮೂಲಕ ಕಾರ್ಯಕ್ರಮ ಆಯೋಜಿಸಲಾಗವುದು ಎಂದರು.


ಬೇಡಿಕೆ ಪೆಟ್ಟಿ: ಅಭಿಯಾನದಲ್ಲಿ ಗ್ರಾಮ ಪಂಚಾಯಿತಿ ಪ್ರತಿ ಮನೆಗಳಿಗೆ ಭೇಟಿ ನೀಡಿ ನರೇಗಾ ಯೋಜನೆ ಮಾಹಿತಿ ತಿಳಿಸುವುದು. ಕೆಲಸ ಮತ್ತು ಕಾಮಗಾರಿಗಳ ಬೇಡಿಕೆಗಳನ್ನು ಸಂಗ್ರಹಿಸಲಿದ್ದು, ಅ.31ರವರೆಗೆ ಬೇಡಿಕೆ ಅರ್ಜಿಗಳನ್ನು ಸಲ್ಲಿಸಲು ಅವಕಾಶವಿದೆ. ಅದಕ್ಕಾಗಿ ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ಬೇಡಿಕೆ ಪೆಟ್ಟಿಗೆ ಇರಿಸಲಾಗುವುದು. ಗ್ರಾಮಸಭೆ ಮತ್ತು ವಾರ್ಡ್ ಸಭೆಗಳನ್ನು ನಡೆಸಿ, ವಾಹನದ ಮೂಲಕ ಜಲಸಂಜೀವಿನಿ ಕಾರ್ಯಕ್ರಮದ ಬಗ್ಗೆ ಜಾಗೃತಿ ಮೂಡಿಸುವುದು ಎಂದು ಹೇಳಿದರು.

ಅಭಿಯಾನ: ಅಭಿಯಾನದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಸಿಬ್ಬಂದಿಯೊಂದಿಗೆ ಮಾಹಿತಿ ನೀಡಲಾಗುವುದು. ಯೋಜನೆಯ ಮಾರ್ಗಸೂಚಿಯಂತೆ ಒಟ್ಟು ವೆಚ್ಚದ ಶೇ.60 ರಷ್ಟು ಕೃಷಿ ಮತ್ತು ಸಂಬಂಧಿತ ಚಟುವಟಿಕೆಗೆ ಖರ್ಚು ಮಾಡುವಂತೆ ಗಮನಹರಿಸಲಾಗುವುದು. ಜಲಸಂಜೀವಿನಿಯಡಿ ಗ್ರಾಮ ಪಂಚಾಯಿತಿಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಬಿಪಿಎಲ್ ಕುಟುಂಬ, ಸಣ್ಣ ಮತ್ತು ಅತಿ ಸಣ್ಣ ರೈತರು, ಅಂಗವಿಕಲರು ತಮ್ಮ ವೈಯಕ್ತಿಕ ಕಾಮಗಾರಿಗಳನ್ನು ಪಡೆದುಕೊಳ್ಳುವಂತೆ ಯೋಜನೆ ಹಾಕಿಕೊಳ್ಳಲಾಗುವುದು ಎಂದು ಮಾಹಿತಿ ನೀಡಿದರು.

ಗ್ರಾಮೀಣ ಪ್ರದೇಶದ ದುರ್ಬಲ ವರ್ಗದ ಜನರಿಗೆ ಉದ್ಯೋಗ ಕಲ್ಪಿಸಲು ಮುಂದಾಗುತ್ತಿದ್ದು, ಶೋಷಿತ ಮಹಿಳೆಯರು, ಅಬಲೆಯರು, ಗ್ರಾಮೀಣ ಮಹಿಳೆಯರ ಸಮಸ್ಯೆಗಳನ್ನು ಗುರುತಿಸಿ ವಿಶ್ಲೇಷಿಸಿ, ಸ್ಥಳೀಯ ಮಟ್ಟದಲ್ಲೇ ಪರಿಹಾರ ನೀಡಲು ಮಹಿಳಾ ಮತ್ತು ಮಕ್ಕಳ ಗ್ರಾಮಸಭೆ ಮೂಲಕ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ಕ್ಯೂ ಆರ್ ಕೋಡ್ ಸ್ಕ್ಯಾನ್: ನರೇಗಾ ಯೋಜನೆಯ ಕಾರ್ಯಕ್ರಮಗಳ ಮಾಹಿತಿಯುಳ್ಳ ಯೂ ಟ್ಯೂಬ್ ಲಿಂಕ್ ಅನ್ನು ತಲುಪಿಸುವ ಸಲುವಾಗಿ ಗ್ರಾಮದ ಪ್ರತಿ ಮನೆಗಳಿಗೂ ಕ್ಯೂ ಆರ್ ಕೋಡ್ ಇರುವ ಸ್ಟಿಕ್ಕರ್‌ಗಳನ್ನು ಅಂಟಿಸಲಾಗುತ್ತಿದ್ದು, ಈ ಮೂಲಕ ಸ್ಥಳದಲ್ಲಿಯೇ ನರೇಗಾ ಯೋಜನೆಯ ಮಾಹಿತಿಯನ್ನು ತಿಳಿದುಕೊಳ್ಳಬಹುದು ಎಂದರು.

ಬಿ.ಕೆ.ಚನ್ನಪ್ಪಶೆಟ್ಟಿ ನಿಧನ



ಬೆಟ್ಟದಪುರ: ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ನಿವಾಸಿ ಬಿ.ಕೆ.ಚನ್ನಪ್ಪಶೆಟ್ಟಿ (70) ಗುರುವಾರ ಮಧ್ಯಾಹ್ನ ನಿಧನರಾದರು. ಮೃತರಿಗೆ ಪುತ್ರ, ಸೊಸೆ, ಮೊಮ್ಮಕ್ಕಳು, ಇಬ್ಬರು ಸಹೋದರರು, ಇಬ್ಬರು ಸಹೋದರಿಯರು ಸೇರಿದಂತೆ ಅಪಾರ ಬಂಧು–ಬಳಗ ಇದ್ದಾರೆ.

ಶುಕ್ರವಾರ ಬೆಳಗ್ಗೆ 10 ಗಂಟೆಗೆ ಬೆಟ್ಟದಪುರದ ವೀರಶೈವ–ಲಿಂಗಾಯತ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ


ಸರಗೂರು, ಅ.5– ಪಟ್ಟಣದ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ಪರಿಸರ ಪ್ರೇಮಿ ವೈದ್ಯ ರತ್ನ ಡಾ.ಸಿಎನ್. ಮೃತ್ಯುಂಜಯಪ್ಪ ಸಹೃದಯ ಬಳಗ ವತಿಯಿಂದ ನಡೆದ ಗಿಡ ನೆಡುವ ಕಾರ್ಯಕ್ರಮಕ್ಕೆ ಸಹೃದಯ ಬಳಗದ ಸದಸ್ಯೆ ಸೀಮಾ ಮೋಹನ್ ಕುಮಾರ್ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಪ್ರಕೃತಿಯಲ್ಲಿ ದೇವರನ್ನು ಕಾಣಬೇಕು. ಪ್ರಕೃತಿಯಿಂದ ಮನುಷ್ಯ ಸಾಕಷ್ಟು ಪಾಠ ಕಲಿಯಬೇಕಾಗಿದೆ. ಏಕೆಂದರೆ, ಪ್ರಕೃತಿಯಲ್ಲಿರುವ ಪ್ರತಿಯೊಂದು ಗಿಡ–ಮರಗಳು ಒಂದನ್ನು ನೋಡಿ ಮತ್ತೊಂದು ಅಸೂಯೆ ಪಡುವುದಿಲ್ಲ. ಪ್ರೀತಿ, ವಿಶ್ವಾಸದಿಂದ ಒಂದರ ಕೊಂಬೆ ಮತ್ತೊಂದರಲ್ಲಿ ಹಾಯಾಗಿ ಚಾಚಿಕೊಂಡಿರುತ್ತವೆ. ಮನುಷ್ಯ ಇವರಿಂದ ಪಾಠ ಕಲಿತರೆ ಮಾದರಿಯಾಗಿ ಬದುಕಬಹುದು ಎಂದರು.



ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರಾದ ಅಂಜುಂ ಷಾಷಾ, ಗಂಗಾಧರಯ್ಯ, ಮಹದೇವಸ್ವಾಮಿ, ರಜಿನಿ ಆದೀಶ, ಶೀಲಾ ದಯಾನಂದ, ಶಿಕ್ಷಕರಾದ ಜಯಣ್ಣ, ಶೀಲಾ, ಜಯಲಕ್ಷ್ಮೀ ಅಶೋಕ್, ಕೃಷ್ಣಮೂರ್ತಿ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ಕಿತ್ತೂರಿನಲ್ಲಿ ಅಪರಿಚಿತ ಆತ್ಮಹತ್ಯೆ



ಬೆಟ್ಟದಪುರ, ಅ.5– ಬೆಟ್ಟದಪುರ ಪೊಲೀಸ್ ಠಾಣೆ ವ್ಯಾಪ್ತಿಯ ಕಿತ್ತೂರು ಗ್ರಾಮದಲ್ಲಿ ಅಪರಿಚಿತ ವ್ಯಕ್ತಿ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಮೃತ ವ್ಯಕ್ತಿಯ ಹೆಸರು ಅಥವಾ ವಿಳಾಸ ತಿಳಿದು ಬಂದಿಲ್ಲ. ವಾರಸುದಾರರು ಇದ್ದಲ್ಲಿ ಬೆಟ್ಟದಪುರ ಠಾಣೆ ಹಾಗೂ ದೂ. ಸಂಖ್ಯೆ 0821–275700 ಅಥವಾ ಮೊ.ಸಂ: 9480805060 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ರತಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬಾನದಾರಿಯಲ್ಲಿ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಮಿಷನ್ ರಾಣಿಗಂಜ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಫೈಟರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಸಪ್ತಸಾಗರದಾಚೆ ಎಲ್ಲೋ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಜೈಲರ್ (ತ)	4 ಪ್ರದರ್ಶನಗಳು
ಸಂಗಂ	
ರಾಜ ಮಾರ್ತಾಂಡ (ಕ)	4 ಪ್ರದರ್ಶನಗಳು
ಲಿಡೋ	
ಫೈಟರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ರಾಜ ಮಾರ್ತಾಂಡ (ಕ)	4 ಪ್ರದರ್ಶನಗಳು
ಪ್ರಭಾ	
ಲವ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
DRC CINEMAS
ದೂ : 4240422/4241800

ಸ್ಕ್ರೀನ್ 1	ದಿಗ್ವಿಜಯ (ಕ): ಬೆ.10.40ಕ್ಕೆ, ಸಪ್ತಸಾಗರದಾಚೆ ಎಲ್ಲೋ (ಕ): ಮ.1.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಜವಾನ್ (ಹಿಂ): ಸಂ.4ಕ್ಕೆ.
ಸ್ಕ್ರೀನ್ 2	ತತ್ಸಮ ತದ್ಭವ (ಕ): ಬೆ.11.30ಕ್ಕೆ, ಒಲವೇ ಮಂದಾರ 2 (ಕ): ಮ.2ಕ್ಕೆ, ಡೆಮಾನ್ (ತ): ಸಂ.4.30ಕ್ಕೆ, ಸುಖೀ (ಹಿಂ): ರಾ.7ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 3	ಎಕ್ಸ್‌ಪೆಂಡಬಲ್ಸ್ (ಇಂ): ಬೆ.11.30ಕ್ಕೆ, ರಾ.9.40ಕ್ಕೆ, ದಿ ನನ್ 2 (ಇಂ): ಮ.1.45ಕ್ಕೆ, ದಿ ಗ್ರೇಟ್ ಇಂಡಿಯನ್ ಫ್ಯಾಮಿಲಿ (ಹಿಂ): ಸಂ.4.30ಕ್ಕೆ, ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.9.50ಕ್ಕೆ, ಮ.1ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.4.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಜವಾನ್ (ಹಿಂ): ಬೆ.10.40ಕ್ಕೆ, ಸಂ.4.35ಕ್ಕೆ, ರಾ.10.30ಕ್ಕೆ, ದಿ ಎಕ್ಸ್‌ಪೆಂಡಬಲ್ಸ್ (ಇಂ): ಮ.2.10ಕ್ಕೆ, ರಾ.8.05ಕ್ಕೆ.
ಸ್ಕ್ರೀನ್ 2	ಸಪ್ತ ಸಾಗರದಾಚೆ ಎಲ್ಲೋ (ಕ): ಬೆ.10.50ಕ್ಕೆ, ಜವಾನ್ (ಹಿಂ): ಮ.1.50ಕ್ಕೆ, ಸಂ.5.25ಕ್ಕೆ, ರಾ.9ಕ್ಕೆ.
ಸ್ಕ್ರೀನ್ 3	ಜವಾನ್ (ಹಿಂ): ಬೆ.9.10ಕ್ಕೆ, ಮ.12.45ಕ್ಕೆ, ದಿ ಎಕ್ಸ್‌ಪೆಂಡಬಲ್ಸ್ (ಇಂ): ಸಂ.4.20ಕ್ಕೆ, ರಾ.9.50ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10ಕ್ಕೆ, ದಿ ಗ್ರೇಟ್ ಇಂಡಿಯನ್ ಫ್ಯಾಮಿಲಿ (ಹಿಂ): ಮ.1.50ಕ್ಕೆ, ರಾ.7.30ಕ್ಕೆ, ರಾ.10ಕ್ಕೆ, ಮಾರ್ಕ್ ಆಂಟೋನಿ (ತ): ಸಂ.4.20ಕ್ಕೆ.

ಮೈಸೂರು ವಿಷನ್ ಸಿನಿಮಾ
MVC
ದೂ : 0821–2973519

ಸ್ಕ್ರೀನ್ 1	ಪರಿಶುದ್ಧಂ (ಕ): ಬೆ.10.30ಕ್ಕೆ, ಹನಿಮೂನ್ ಇನ್ ಬ್ಯಾಂಕಾಕ್(ಕ): ಮ.1.30ಕ್ಕೆ, ಧ್ವಂಧ್ವ (ಕ): ಸಂ.4.20ಕ್ಕೆ, ಬನ್ ಟೀ (ಕ): ಸಂ.6.45ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಜವಾನ್ (ಹಿಂ): ಸಂ.4.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ದಿ ನನ್ 2 (ಇಂ): ಸಂ.4.45ಕ್ಕೆ, ಜವಾನ್ (ಹಿಂ): ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಮ.1.45ಕ್ಕೆ, ಸಂ.4.45ಕ್ಕೆ, ದಿ ನನ್ 2 (ಇಂ): ರಾ.7.35ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, ಜೈಲರ್ (ಕ): ಬೆ.8.25ಕ್ಕೆ, ಮ.3.10ಕ್ಕೆ, ಓಎಂಜಿ 2 (ಹಿಂ): ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, ಗದರ್ 2 (ಹಿಂ): ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ರಾ.9.45ಕ್ಕೆ, ಆಚಾರ್ & ಕೋ (ಕ): ಮ.3.55ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಮ.3.25ಕ್ಕೆ, ರಾ.10.30ಕ್ಕೆ, ನಮೋ ಭೂತಾತ್ಮ (ಕ): ಬೆ.11.55ಕ್ಕೆ, ರಾಖಿ ಔರ್ ರಾಣಿ (ಹಿಂ): ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, ಓಪನ್‌ಹೈಮರ್ (ಇಂ): ಸಂ.6.35ಕ್ಕೆ, ಭೋಳಾ ಶಂಕರ್ (ತೆ): ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, ಮೆಗ್ 2 (ಇಂ): ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ರೇಸುಗಳು

10ನೇ ದಿನ, ಶುಕ್ರವಾರ 06-10-2023

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ಸಿಕಂದ್ರಬಾದ್ ಪ್ಲೇಟ್–1100 ಮೀ. ರೇಟೆಡ್ 20 ರಿಂದ 45. (ಮೈಸೂರ್ ಬ್ರೆಸ್ಡ್ ಹಾರ್ಸ್). ಮ.2.00ಕ್ಕೆ
1. ಬ್ಲೂಮಿಂಗ್ ಲಿಲ್ಲಿ 2. ಮೆರಾಕೆ 3. ವಿಕ್ಟೋರಿಯಾನೋ

II. ಜಸ್ಟೀಸ್ ಪಿ.ಮೇದಪ್ಪ ಮೆಮೋರಿಯಲ್ ಟ್ರೋಫಿ ಡಿ2–1600 ಮೀ. ರೇಟೆಡ್ 20 ರಿಂದ 45. ಮ.2.30ಕ್ಕೆ
1. ಅವಿಸೈನಾ 2. ಕೇಸರಿ ಕ್ವೀನ್ 3. ಆರ್‌ಮೊರಿ

III. ಮೇಜರ್ ಸರ್‌ದಾರ್ ಎಲ್.ಮಹಾದೇವಯ್ಯ ಮೆಮೋರಿಯಲ್ ಟ್ರೋಫಿ– 1200 ಮೀ. ರೇಟೆಡ್ 40 ರಿಂದ 65. ಮ.3.00ಕ್ಕೆ
1 ಪ್ರೈಮ್ ಅಬ್ಬಿಸ್ 2. ಗೋಲ್ಡನ್ ಟೈಮ್ 3 ಅಂಕುಶ್

IV. ಜಸ್ಟೀಸ್ ಪಿ.ಮೇದಪ್ಪ ಮೆಮೋರಿಯಲ್ ಟ್ರೋಫಿ ಡಿ1–1600 ಮೀ. ರೇಟೆಡ್ 20 ರಿಂದ 45. ಸಂ.3.30ಕ್ಕೆ
1. ಪಿಯರ್‌ಲೆಸ್ ಜೊಯ್ 2. ಸೆರೈ 3. ಕೊಯಟ್ ಗರ್ಲ್

V. ಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್ ಮೈಸೂರ್ 2000 ಗಿನ್ನಿಸ್ –1600 ಮೀ. 3 ವರ್ಷ ಟರ್ವ್ಸ್ ಸಂ.4.00ಕ್ಕೆ
1. ವೆಸ್ಟ್ ಬ್ರೂಕ್ 2. ಟಚ್ ಆಫ್ ಗ್ರೇ 3. ವಿವಾಲ್ ಡೋ


VI. ಜಿ.ನಿತ್ಯಾನಂದ ಮೆಮೋರಿಯಲ್ ಟ್ರೋಫಿ–1400 ಮೀ. 3 ವರ್ಷ (ಮೈಸೂರ್ ಬ್ರೆಸ್ಡ್ ಹಾರ್ಸ್). ಸಂ.4.30ಕ್ಕೆ
1 ಜಾನಿರೋ 2 ಕಿಂಗ್ ಆಫ್ ಕೇಸರಿ 3. ಸಿಯೋಲ್ ಫಾರ್ ಬುಲೆಟ್

VII. ದೂಪಾಂಟ್ ಪ್ಲೇಟ್– 1200 ಮೀ. ರೇಟೆಡ್ 20 ರಿಂದ 45. (ಮೈಸೂರ್ ಬ್ರೆಸ್ಡ್ ಹಾರ್ಸ್). ಸಂ.5.00ಕ್ಕೆ
1 ಜಾಗುರ್ 2 ನ್ಯಾಚುರಲ್ ಒನ್ 3. ಸ್ಕೈ ಸ್ಟ್ರಾಮ್

ದಿನದ ಅತ್ಯುತ್ತಮ	ವೆಸ್ಟ್ ಬ್ರೂಕ್
ಡಬ್ಬಲ್	ಬ್ಲೂಮಿಂಗ್ ಲಿಲ್ಲಿ, ಅವಿಸೈನಾ
ಜಾಕ್‌ಪಾಟ್	3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	4, 5, 6 ಮತ್ತು 7
I ಟ್ರಿಬಲ್	2, 3 ಮತ್ತು 4
II ಟ್ರಿಬಲ್	5, 6 ಮತ್ತು 7
ಎಕ್ಸ್‌ಆಕ್ಟ್	1 ರಿಂದ 7

ಟಿಪ್‌ಸ್ಟರ್ ಪಿಜಿಸಿ


10ನೇ ವರ್ಷದ ಪುಣ್ಯಸ್ಮರಣೆ



ಬಸವಯ್ಯ ಉ॥ ಚಿಕ್ಕಣ್ಣ
ಕೆ.ಬಿ.ಕೊಪ್ಪಲು

ದುಃಖತಪ್ತರು– ಸುಬ್ಬೇಗೌಡ, ಸರಸ್ವತಿ ಕೆ.ಕೌಶಿಕ್, ಕೆ.ಎಸ್.ಕಾವ್ಯ, ಕಿರಂಗೂರು

ಕೈಲಾಸ ಶಿವಗಣಾರಾಧನೆ



ಶ್ರೀ ಎಂ.ಎನ್.ಅಂಗರಾಜು (ಕ್ಲಬ್)

ಇವರು ದಿ: 26–09–2023 ನೇ ಮಂಗಳವಾರ ಶಿವೈಕ್ಯರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ದಿನಾಂಕ: 07–10–2023ನೇ ಶನಿವಾರ ಬೆಳಿಗ್ಗೆ 10.00ಕ್ಕೆ ಶ್ರೀಮದ್ ಬಾಚಾಳು ಸೂರ್ಯಸಿಂಹಾಸನ ಮಠಾಧ್ಯಕ್ಷರಾದ ಷ॥ ಬ್ರ॥ ಬ್ರ॥ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ದಿವ್ಯಹಾದ ಪೂಜೆಯೊಂದಿಗೆ ಕೈಲಾಸ ಶಿವಗಣಾರಾಧನೆಯನ್ನು ನಮ್ಮ ಸ್ವಗೃಹ ನಂ.1022, ಪಟ್ಟೇಗಾರ್ ಬೀದಿ, 12ನೇ ಮುಖ್ಯರಸ್ತೆ, ಮಂಡಿಮೊಹಲ್ಲಾ, ಮೈಸೂರು ಇಲ್ಲಿ ಏರ್ಪಡಿಸಲಾಗಿದೆ. ಆದ್ದರಿಂದ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ತಾವುಗಳು ಸಕಾಲಕ್ಕೆ ಆಗಮಿಸಿ ಶಿವೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.

ದುಃಖತಪ್ತರು: ಲಿಂಗೈಕ್ಯರ ತಾಯಿ ಶ್ರೀಮತಿ ಮಹಾದೇವಮ್ಮ, ಪತ್ನಿ ಶ್ರೀಮತಿ ವೀಣಾ ಲಿಂಗರಾಜು ಹಾಗೂ ಕುಟುಂಬವರ್ಗ

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಮೈಸೂರು–570005
ದೂರವಾಣಿ ಸಂಖ್ಯೆ : 0821–2526347
ಪತ್ರ ಸಂಖ್ಯೆ: ಜಿಪಂಮೈ/ಸ್ವಭಾ.ಮಿ(ಗ್ರಾ)/ಇ–8305/2023–24 ದಿ: 21.09.2023

ಪ್ರಕಟಣೆ

ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಯಡಿ ಮೈಸೂರು ಜಿಲ್ಲಾ ಪಂಚಾಯತ್ ಕಾರ್ಯಾಲಯದಲ್ಲಿ ಖಾಲಿಯಿರುವ ಜಿಲ್ಲಾ MIS ಸಮಾಲೋಚಕರ ಹುದ್ದೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವ ಸಂಬಂಧ ಈ ಕೆಳಕಂಡಂತೆ ತಿಳಿಸಿರುವ ವಿದ್ಯಾರ್ಹತೆ ಹಾಗೂ ಅನುಭವ ಹೊಂದಿರುವ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಕ್ರ.ಸಂ. 1 ಹುದ್ದೆಯ ವಿವರ: SBM District MIS Consultant **ವಿದ್ಯಾರ್ಹತೆ ಮತ್ತು ಅನುಭವ:** ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಬಿ.ಇ. ಕಂಪ್ಯೂಟರ್ ಸೈನ್ಸ್, ಎಂ.ಎಸ್ಸಿ ಸಂಖ್ಯಾಶಾಸ್ತ್ರ/ ಎಂ.ಎಸ್ಸಿ ಕಂಪ್ಯೂಟರ್ ಸೈನ್ಸ್ / ಹಾಗೂ ಅಭಿವೃದ್ಧಿ ವಲಯದ ದತ್ತಾಂಶ ನಿರ್ವಹಣೆ ಹಾಗೂ ದತ್ತಾಂಶ ಸಂಶೋಧನೆಗೆ ಸಂಬಂಧಿಸಿದಂತೆ ಕನಿಷ್ಠ 3–5 ವರ್ಷಗಳ ಅನುಭವ. **ಮಾಸಿಕ ಸಮಾಲೋಚನಾ ಶುಲ್ಕ:** ರೂ.25,000/– + ಪ್ರಯಾಣ ಭತ್ಯೆ ರೂ. 2,000/–

1) ವಯೋಮಾನ: ಪ್ರಕಟಣೆ ಹೊರಡಿಸಿದ ದಿನಾಂಕಕ್ಕೆ 45 ವರ್ಷಗಳು ಮೀರಿರಬಾರದು. **2)** ನಿಗದಿತ ಅರ್ಜಿ ನಮೂನೆಯಲ್ಲಿ ಮಾಹಿತಿಯನ್ನು ಭರ್ತಿ ಮಾಡಿ, ವಯಸ್ಸಿನ ದೃಢೀಕರಣ, ವಿದ್ಯಾರ್ಹತೆ, ಅನುಭವ, ಪ್ರಮುಖ ಸಾಮರ್ಥ್ಯಗಳು(ಏನಾದರೂ ಇದ್ದಲ್ಲಿ) ಹಾಗೂ Resume ಅನ್ನು ಆನ್‌ಲೈನ್‌ನಲ್ಲಿ ಅಳವಡಿಸುವುದು. **3)** ಪ್ರಕಟಣಾ ದಿ: 05.10.2023 ಸಮಯ 12.01 AM ರಿಂದ ಹಾಗೂ ಅರ್ಜಿ ಸಲ್ಲಿಸಲು ಕೊನೆಯ ದಿ: 14.10.2023 ಸಮಯ 11.59 PM ರವರೆಗೆ. **4)** ಅರ್ಜಿ ಹಾಗೂ ಹೆಚ್ಚಿನ ಮಾಹಿತಿಯು NIC ವೆಬ್ ಸೈಟ್: mysore.nic.in ನಲ್ಲಿ ಲಭ್ಯವಿರುತ್ತದೆ.

ಸಹಿ/– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮೈಸೂರು
DIPR/DDMYS/KSMCA/456/2023-24

